ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 08, 2020

ಸಂಪುಟ : 47 ಸಂಚಿಕೆ : 119 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com

# ಆಂಟಿಬಡಿಗಳಿಂದ ಕೊರೊನಾ ರಕ್ಷಣೆಯ ಗ್ಯಾರಂಟಿ ಇಲ್ಲ

ನವದೆಹಲಿ, ಸೆ.7 – ದೇಹದಲ್ಲಿ ಆಂಟಿಬಡಿಗಳು ಇದ್ದರೆ ಅದು ಕೊರೊನಾ ಸೋಂಕಿಗೆ ಗುರಿಯಾಗಿರುವುದನ್ನು ಸೂಚಿಸುತ್ತದೆಯೇ ವಿನಃ, ಅದರಿಂದ ರೋಗದಿಂದ ರಕ್ಷಣೆ ಸಿಗುವ ಗ್ಯಾರಂಟಿ ಇಲ್ಲ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 42 ಲಕ್ಷ ದಾಟಿದೆ. ಪ್ರತಿನಿತ್ಯ 90 ಸಾವಿರಕ್ಕೂ ಹೆಚ್ಚು ಸೋಂಕಿತರು ಪತ್ತೆಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜ್ಞಾನಿಗಳು ಆಂಟಿಬಡಿಗಳು ಕೊರೊನಾದಲ್ಲಿ ಹೊಂದಿರುವ ಪಾತ್ರದ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದ್ದಾರೆ.

ಆಂಟಿಬಡಿಗಳ ಬಗ್ಗೆ ಹಲವಾರು ಅಧ್ಯಯನಗಳು ಹಾಗೂ ಸಿದ್ಧಾಂತಗಳು ಮೂಡಿ ಬಂದಿವೆಯಾದರೂ, ಒಮ್ಮತ ರೂಪುಗೊಂಡಿಲ್ಲ. ಆಂಟಿಬಡಿಗಳು ದೇಹದಲ್ಲಿ ಕಂಡು ಬಂದರೆ ಕೊರೊನಾ ವೈರಸ್ ಸೋಂಕು ತಗುಲಿದೆ ಎಂಬುದನ್ನು ಮಾತ್ರ ಖಚಿತವಾಗಿ ಹೇಳಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಆಂಟಿಬಡಿಗಳು ರೋಗ ನಿರೋಧಕತೆಯಲ್ಲಿ ಹೊಂದಿರುವ ಪಾತ್ರದ ಬಗ್ಗೆ ಕಾದು ನೋಡಲು ಬಯಸುವುದಾಗಿ ರೋಗ ನಿರೋಧಕ ಪರಿಣಿತ ಸತ್ಯಜಿತ್ ರಥ್ ಹೇಳಿದ್ದಾರೆ.

ನವದೆಹಲಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನಾಲಜಿ (ಎನ್.ಐ.ಐ.) ವಿಜ್ಞಾನಿಯಾಗಿರುವ ರಥ್, ಆಂಟಿಬಡಿಗಳಿಂದ (4ನೇ ಪುಟಕ್ಕೆ)

# ರಾಜ್ಯ ಪ್ರವಾಹದಿಂದ 8 ಸಾವಿರ ಕೋಟಿ ರೂ. ನಷ್ಟ

## ಕೇಂದ್ರ ತಂಡಕ್ಕೆ ಸಿಎಂ ಮಾಹಿತಿ

ಬೆಂಗಳೂರು, ಸೆ. 7 – ಇತ್ತೀಚೆಗೆ ರಾಜ್ಯದಲ್ಲಿ ಉಂಟಾದ ಪ್ರವಾಹದಿಂದಾಗಿ 8 ಸಾವಿರ ಕೋಟಿ ರೂ.ಗಳು ನಷ್ಟವಾಗಿದೆ ಎಂದು ಕೇಂದ್ರೀಯ ತಂಡಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾಹಿತಿ ನೀಡಿದ್ದಾರೆ. ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಕೆ.ವಿ. ಪ್ರತಾಪ್ ಅವರ ನೇತೃತ್ವದ ಆರು ಸದಸ್ಯರ ಅಂತರ ಸಚಿವಾಲಯದ ಕೇಂದ್ರೀಯ ತಂಡ ಮುಖ್ಯಮಂತ್ರಿ ಹಾಗೂ ಹಿರಿಯ ಸಚಿವರು ಮತ್ತು ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸಿದೆ.

ಈ ಸಂದರ್ಭದಲ್ಲಿ ಮಾಹಿತಿ ನೀಡಿರುವ ಮುಖ್ಯಮಂತ್ರಿ ಯಡಿಯೂರಪ್ಪ, ಪ್ರವಾಹದಿಂದಾಗಿ ಬೆಳೆ ಹಾಗೂ ಆಸ್ತಿಗಳಿಗೆ 8,071 ಕೋಟಿ ರೂ.ಗಳ ನಷ್ಟವಾಗಿರುವುದಾಗಿ ಹೇಳಿದ್ದಾರೆ.

4.03 ಲಕ್ಷ ಹೆಕ್ಟೇರ್ (5ನೇ ಪುಟಕ್ಕೆ)

# ಆದಾಯ ತೆರಿಗೆ ಇಲಾಖೆಯಿಂದ ಎಸ್ಸೆಸ್ ಅವರಿಗೆ 'ಪ್ಲಾಟಿನಂ' ಪ್ರಶಂಸೆ



ದಾವಣಗೆರೆ, ಸೆ. 7 – ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕ ಹಾಗೂ ಬಾಪೂಜಿ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ ಅವರಿಗೆ ಕೇಂದ್ರ ಹಣಕಾಸು ಇಲಾಖೆಯ ನೇರ ತೆರಿಗೆಯ ಕೇಂದ್ರೀಯ ಮಂಡಳಿಯು 'ಪ್ಲಾಟಿನಂ' ಪುರಸ್ಕಾರದ ಮಾನ್ಯತೆ ನೀಡಿದೆ. 2019-20ರ ಅಸೆಸ್‌ಮೆಂಟ್ ವರ್ಷದಲ್ಲಿ ಸಮಯಕ್ಕೆ ಸರಿಯಾಗಿ ಸಮರ್ಪಕವಾಗಿ ತೆರಿಗೆ ಪಾವತಿಸಿರುವುದಕ್ಕೆ ಈ ಗೌರವ ಪ್ರದಾನ ಮಾಡಿರುವುದಾಗಿ ಮಂಡಳಿಯ ಅಧ್ಯಕ್ಷ ಪಿ.ಸಿ. ಮೋಡಿ ಅವರು ಪ್ರಶಂಸಾ ಪತ್ರದಲ್ಲಿ ತಿಳಿಸಿದ್ದಾರೆ.

ಕೇಂದ್ರದ ನರೇಂದ್ರ ಮೋದಿ ಸರ್ಕಾರ ತೆರಿಗೆದಾರರಿಗೆ ಉತ್ತೇಜನ ನೀಡುವ ಸಲುವಾಗಿ ಗೌರವ ಪ್ರಮಾಣ ಪತ್ರ ನೀಡುವ ಯೋಜನೆಯನ್ನು (5ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07.09.2020ರ ಸೋಮವಾರ 10.30 ಕ್ಕೆ ನಿಧನರಾದ ನಮ್ಮ ಸಂಘದ ಅಧ್ಯಕ್ಷರಾದ

**ಶ್ರೀ ಶಾಮನೂರು ಕಲ್ಲೇಶಪ್ಪ**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಶ್ರೀ ಬಿ.ಆರ್. ಸೋಮಶೇಖರಪ್ಪ, ಉಪಾಧ್ಯಕ್ಷರು
- ಶ್ರೀ ಪರಮೇಶ್ವರಪ್ಪ ಗೌಡ್ರು, ನಿರ್ದೇಶಕರು
- ಶ್ರೀ ಜಿ. ಸೋಮಶೇಖರಪ್ಪ, ನಿರ್ದೇಶಕರು
- ಶ್ರೀ ಬಿ.ಜಿ. ನಾಗರಾಜ್, ನಿರ್ದೇಶಕರು
- ಶ್ರೀ ಕೆ.ಜಿ. ವಾಮದೇವಪ್ಪ, ನಿರ್ದೇಶಕರು
- ಶ್ರೀ ಎನ್.ಉಮಾಪತಿ, ನಿರ್ದೇಶಕರು
- ಶ್ರೀ ಎಸ್.ನಂಜಪ್ಪ, ನಿರ್ದೇಶಕರು
- ಶ್ರೀ ಟಿ.ಎಚ್.ಶಂಕ್ರಪ್ಪ, ನಿರ್ದೇಶಕರು
- ಶ್ರೀ ಬಿ.ನಾಗೇಂದ್ರಪ್ಪ, ನಿರ್ದೇಶಕರು
- ಶ್ರೀ ಎಸ್.ಧನ್ಯಾ ನಾಯ್ಕ, ನಿರ್ದೇಶಕರು
- ಶ್ರೀಮತಿ ಹೇಮಾವತಿ ಮಲ್ಲಿಕಾರ್ಜುನಪ್ಪ, ನಿರ್ದೇಶಕರು
- ಶ್ರೀಮತಿ ಸವಿತಾ ಶಶಿಧರ್, ನಿರ್ದೇಶಕರು

ಶ್ರೀ ಡಿ.ಎಸ್.ಜಾಧವ್, ಹಂಗಾಮಿ ಕಾರ್ಯದರ್ಶಿ, ಆರ್.ಗಂಗಾಧರಪ್ಪ, ಮಾಜಿ ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗ

ರೈತರ ಫಸಲುಗಳ ಪರಿವರ್ತನ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ನಿಯಮಿತ, ದಾವಣಗೆರೆ.





# ಶಾಮನೂರು ಕಲ್ಲೇಶಪ್ಪ ನಿಧನ

ದಾವಣಗೆರೆ ನಗರ ವಾಸಿ
ದಿ|| ಶಾಮನೂರು ಸಂಗಪ್ಪನವರ ಪುತ್ರರೂ,
ದಾವಣಗೆರೆ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ (ನಿ) ಅಧ್ಯಕ್ಷರೂ,
ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ದೇಶಕರೂ ಆದ

**ಶ್ರೀ ಶಾಮನೂರು ಕಲ್ಲೇಶಪ್ಪನವರು**

ದಿನಾಂಕ 07.09.2020ರ ಸೋಮವಾರ ಬೆಳಿಗ್ಗೆ 11.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.09.2020ರ ಸೋಮವಾರ ಸಂಜೆ 4.30 ಕ್ಕೆ ಮೃತರ ಪ್ರಶಾಂತ್ ರೈಸ್‌ಮಿಲ್ ಆವರಣದಲ್ಲಿ ನೆರವೇರಿಸಲಾಯಿತು.

## ದುಃಖತಪ್ತ ಕುಟುಂಬ ವರ್ಗ

- ಪುತ್ರಿ-ಅಳಿಯ : ಶ್ರೀಮತಿ ಪ್ರೀತಿ ರವಿಕುಮಾರ್ ಮತ್ತು ಡಾ|| ರವಿಕುಮಾರ್

ಪುತ್ರರು-ಸೊಸೆಯಂದಿರು :

- ಶ್ರೀ ಪವಿತ್ರ ಶಾಮನೂರು ಮತ್ತು ಶ್ರೀಮತಿ ಮೇಘನ ಪವಿತ್ರ
- ಶ್ರೀ ಪ್ರದೀಪ್ ಶಾಮನೂರು ಮತ್ತು ಶ್ರೀಮತಿ ಶ್ವೇತ ಪ್ರದೀಪ್
- ಮೊಮ್ಮಕ್ಕಳು : ಚಿ|| ಚಿರಂತನ್, ಕು|| ಗೌರಿ, ಚಿ|| ಅಭಿಜ್ಞಾನ್, ಚಿ|| ಸಮನ್ಯು

ಸಹೋದರ, ಸಹೋದರಿಯರು ಹಾಗೂ ಶಾಮನೂರು ಕುಟುಂಬದ ಬಂಧುಗಳು-ಮಿತ್ರರು.

ಆರೈಕೆ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗದವರು



ಶ್ರೀ ಶಾಮನೂರು ಕಲ್ಲೇಶಪ್ಪನವರು
ಜನನ : 28.06.1940 - ಮರಣ : 07.09.2020

# ಈರುಳ್ಳಿ ಹಾನಿ ಪರಿಹಾರಕ್ಕೆ ಅಧಿವೇಶನದಲ್ಲಿ ಚರ್ಚಿಸುವೆ

## ಶಾಸಕ ಜಿ.ಕರುಣಾಕರ ರೆಡ್ಡಿ



ಹರಪನಹಳ್ಳಿ, ಸೆ.7- ಈರುಳ್ಳಿ ಬೆಳೆ ಹಾನಿ ಪರಿಹಾರ ನೀಡುವಂತೆ ಬರುವ ವಿಧಾನಸಭಾ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆದು ಮುಖ್ಯ ಮಂತ್ರಿಯವರಿಗೆ ಮನವಿ ಮಾಡುತ್ತೇನೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ತಾಲ್ಲೂಕಿನ ಚಿಗಟೇರಿ, ಮತ್ತಿಹಳ್ಳಿ ಗ್ರಾಮಗಳ ರೋಗ ಪೀಡಿತ ಈರುಳ್ಳಿ ಜಮೀನುಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ತಾಲ್ಲೂಕಿನಲ್ಲಿ ಸತತವಾಗಿ ಸುರಿದ ಮಳೆಗೆ ವಾತಾವರಣ ಬದಲಾಗಿ 4 ಸಾವಿರ ಹೆಕ್ಟೇರ್ ಈರುಳ್ಳಿ ಬೆಳೆ ಹಾನಿ ಸಂಭವಿಸಿದೆ. ಸೆ.21 ಕ್ಕೆ ವಿಧಾನ ಸಭಾ ಅಧಿವೇಶನ ಆರಂಭವಾಗುತ್ತದೆ. ಆ ಸಂದರ್ಭದಲ್ಲಿ ನಷ್ಟ ಸಂಭವಿಸಿದ ಈರುಳ್ಳಿ ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡುವಂತೆ ನಾನು ಸರ್ಕಾರದ ಮೇಲೆ ಒತ್ತಡ ತರುತ್ತೇನೆ ಎಂದರು.

ಕಟ್ಟಡ ಕಾರ್ಮಿಕರು ಸೇರಿದಂತೆ ವಿವಿದ ವರ್ಗಗಳ ಜನರಿಗೆ ಲಾಕ್‌ಡೌನ್ ಸಂದರ್ಭದಲ್ಲಿ 5 ಸಾವಿರ ರು.ಗಳ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಿ ಈವರೆಗೂ ಸಿಕ್ಕಿಲ್ಲವೋ ಅಂತವರಿಗೆ ಕೂಡಲೇ ಪರಿಹಾರದ ಹಣ ಬಿಡುಗಡೆ ಮಾಡುವಂತೆ ಒತ್ತಾಯ ಮಾಡುತ್ತೇನೆ. ಕೊರೊನಾ ಬಂದ ನಂತರ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಅನೇಕ ಕೆಲಸ, ಕಾರ್ಯಗಳು ಸ್ಥಗಿತಗೊಂಡಿದ್ದವು.ಆದರೆ ಈಚೆಗೆ ರಸ್ತೆ ಕಾಮಗಾರಿ, ವಸತಿ ನಿಲಯಗಳ ಕಟ್ಟಡ ಕಾಮಗಾರಿಗಳು ಸೇರಿದಂತೆ ವಿವಿಧ ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದು ಹಣ ಬರುವುದು ಸ್ವಲ್ಪ ಕಡಿಮೆಯಾಗಿರಬಹುದು. ಆದರೆ ಅಭಿವೃದ್ಧಿ ಕಾರ್ಯಗಳು ಕುಂಟಿತಗೊಂಡಿಲ್ಲ ಎಂದು ಅವರು ತಿಳಿಸಿದರು.

ಹರಪನಹಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಈಗ ಇರುವ 20 ಕೋವಿಡ್ ಹಾಸಿಗೆಗಳನ್ನು 50ಕ್ಕೆ ಹೆಚ್ಚಿಸುವ ಕುರಿತು ಜಿಲ್ಲಾಧಿಕಾರಿ ಬಳಿ ಮಾತನಾಡುವೆ. ಈಗಾಗಲೇ ಹೆಚ್ಚುವರಿಯಾಗಿ 2 ವೆಂಟಿಲೇಟರ್‌ಗಳನ್ನು ಒದಗಿಸಲಾಗಿದ್ದು, ಕೊರೊನಾ ಸಮರ್ಪಕ ಚಿಕಿತ್ಸೆಗೆ ಏನು ಬೇಕೋ ಅದೆಲ್ಲಾ ವ್ಯವಸ್ಥೆ ಮಾಡಿಸಲಾಗುವುದು ಎಂದರು.

ತೋಟಗಾರಿಕಾ ಹಿರಿಯ ಸಹಾಯಕ ನಿರ್ದೇಶಕ ಜಯಸಿಂಹ ಅವರು ಶಾಸಕರಿಗೆ ಬೆಳೆ ಹಾನಿ ಕುರಿತು ಮಾಹಿತಿ ನೀಡಿದರು.

ಬೆಣ್ಣಿಹಳ್ಳಿ ಆರ್. ಕರೇಗೌಡ, ಯು.ಪಿ. ನಾಗರಾಜ್, ಎಂ.ಸಂತೋಷ್, ಸಿಪಿಐ ಕುಮಾರ್ ಸೇರಿದಂತೆ ಇತರರು ಇದ್ದರು.

# ತಪ್ಪು ಮಾಡಿದರೆ ತಿದ್ದಿ ಸರಿದಾರಿಗೆ ತರುವ ಅಧಿಕಾರ ಗುರುಗಳಿಗೆ ಇದೆ




## ಜಗಳೂರಿನಲ್ಲಿ ಶಾಸಕ ಎಸ್.ವಿ. ರಾಮಚಂದ್ರ

ಜಗಳೂರು, ಸೆ.7- ಏನೇ ಸಮಸ್ಯೆಗಳಿದ್ದರೂ ಶಿಕ್ಷಕರು ನೇರವಾಗಿ ನನ್ನೊಂದಿಗೆ ಮಾತನಾಡಿ, ನಾನು ತಪ್ಪು ಮಾಡಿದರೆ ತಿದ್ದಿ ಸರಿದಾರಿಗೆ ತರುವ ಅಧಿಕಾರ ನಮ್ಮ ಗುರುಗಳಿಗೆ ಇದೆ ಎಂದು ಶಾಸಕರೂ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗ ಮದ ಅಧ್ಯಕ್ಷರಾದ ಎಸ್.ವಿ. ರಾಮಚಂದ್ರ ಹೇಳಿದರು.

ಪಟ್ಟಣದ ಗುರು ಭವನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ 132 ನೇ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಿಕ್ಷಕರ ಪರಿಶ್ರಮದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲ್ಲೂಕು 'ಎ' ಶ್ರೇಣಿ ಪಡೆದುಕೊಂಡಿದೆ. ವಿದ್ಯಾರ್ಥಿಗಳ ಸಾಧನೆ ಶ್ಲಾಘನೀಯ ಎಂದರು.

ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಮತ್ತು ಆನ್‌ಲೈನ್ ತರಗತಿಗೆ ಅನುಕೂಲವಾಗಲೆಂದು ವೈಯಕ್ತಿಕವಾಗಿ ಸ್ಮಾರ್ಟ್ ಫೋನ್‌ಗಳನ್ನು ಕೊಡಿಸುವುದಾಗಿ ಶಾಸಕರು ಭರವಸೆ ವ್ಯಕ್ತಪಡಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಅಮೀತ್ ಡಿ.ಕೆ., ಮೇಘನಾ ಕುಂಬಾರ್, ದಿವ್ಯಾ ಜಿ.ಪಿ, ಲಕ್ಷ್ಮಿ. ಬಿ. ನಾಲ್ಕು ವಿದ್ಯಾರ್ಥಿಗಳಿಗೆ ಶಾಸಕರು ತಲಾ ಹತ್ತು ಸಾವಿರ ಪ್ರೋತ್ಸಾಹ ಧನ ನೀಡಿ ಗೌರವಿಸಿದರು.


### ಜನಪ್ರತಿನಿಧಿಗಳಿಗೆ ಅವಮಾನ ; ಬಿಇಒಗೆ ತರಾಟೆ ತೆಗೆದುಕೊಂಡ ತಾ.ಪಂ ಸದಸ್ಯ

ಆಹ್ವಾನ ಪತ್ರಿಕೆಯಲ್ಲಿ ಹೆಸರು ಹಾಕಿಸದೇ, ಜನ ಪ್ರತಿನಿಧಿಗಳನ್ನು ವೇದಿಕೆಯ ಕೆಳಗೆ ಕೂರಿಸಿ ಜನಪ್ರತಿನಿಧಿಗಳನ್ನು ಕರೆದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವಮಾನ ಮಾಡಿದ್ದಾರೆ ಎಂದು ತಾಪಂ ಸದಸ್ಯ ಟಿ ಬಸವರಾಜ್ ವೇದಿಕೆಯಲ್ಲಿ ತರಾಟೆಗೆ ತೆಗೆದುಕೊಂಡರು.

ಪೂರ್ವಭಾವಿ ಸಭೆ ಏಕೆ ಕರೆದಿಲ್ಲ? ಸದಸ್ಯರ ಸಲಹೆಯನ್ನೂ ಕೇಳಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಹೆಸರು ಹಾಕಿಸಬಾರದು ಮತ್ತು ವೇದಿಕೆ ಮೇಲೆ ಕರೆಯಬಾರದು ಎಂಬ ಸುತ್ತೋಲೆ ಇದ್ದರೆ ನಮಗೆ ಬಿಇಓ ತೋರಿಸಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಮಂಜುಳಾ ಶಿವಾನಂದಪ್ಪ ಕಾಯಕ್ರಮ ಉದ್ಘಾಟಿಸಿದರು. ಸಮಾರಂಭದಲ್ಲಿ ಶ್ರೀಮತಿ ಇಂದಿರಾ ರಾಮಚಂದ್ರ, ಜಿಪಂ ಸದಸ್ಯರಾದ ಮಂಜುನಾಥ್. ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶಂಕರ್ ನಾಯ್ಕ್. ತಿಮ್ಮೇಶ್. ತಾಲ್ಲೂಕು ದಂಡಾಧಿಕಾರಿ ನಾಗವೇಣಿ. ಪ್ರಭಾರ ಕಾರ್ಯನಿರ್ವಹಣಾಧಿಕಾರಿ ಆನಂದ್. ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎಸ್. ವೆಂಕಟೇಶ್, ಕ್ಷೇತ್ರ ಸಮನ್ವಯಾಧಿಕಾರಿ ಗಿರೀಶ್, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಭಾಗವಹಿಸಿದ್ದರು.

# ಶಾಮನೂರು ಕಲ್ಲೇಶಪ್ಪ ನಿಧನ



ದಾವಣಗೆರೆ,ಸೆ.7- ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ನಗರದ ವರ್ತಕರೂ, ಸಹಕಾರಿ ಮುಖಂಡರೂ ಆದ ಶಾಮನೂರು ಕಲ್ಲೇಶಪ್ಪ ಅವರು ಇಂದು ಬೆಳಿಗ್ಗೆ 11.30ಕ್ಕೆ ನಿಧನರಾದರು. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು.

ಕಲ್ಲೇಶಪ್ಪ, ದಿ. ಶಾಮನೂರು ಸಂಗಪ್ಪ ಅವರ ದ್ವಿತೀಯ ಪುತ್ರ. ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರ ಸಹೋದರ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಚಿಕ್ಕಪ್ಪ, ಜಗಳೂರಿನ ಮಾಜಿ ಶಾಸಕ ಟಿ.ಗುರುಸಿದ್ದನಗೌಡ ಅವರ ಸಂಬಂಧಿ.

ಇಬ್ಬರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ಥಳೀಯ ಭಾರತ್ ಕಾಲೋನಿಯಲ್ಲಿರುವ ಅವರ ಪ್ರಶಾಂತ ರೈಸ್ ಮಿಲ್ ಆವರಣದಲ್ಲಿ ಇಂದು ಸಂಜೆ ನಡೆಯಿತು.

ಕಲ್ಲೇಶಪ್ಪ ಅವರು ದಾವಣಗೆರೆ ರೈತರ ಫಸಲುಗಳ ಪರಿವರ್ತನ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ ಅಧ್ಯಕ್ಷರಾಗಿ ಕಳೆದ ಸುಮಾರು 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ದೇಶಕರೂ ಆಗಿದ್ದರು. ಅಲ್ಲದೇ, ವಿವಿಧ ಸಂಘ-ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿದ್ದರು.

# ಉಕ್ಕಡಗಾತ್ರಿ : ಅನ್ನ ದಾಸೋಹ ಪುನರಾರಂಭ



ಮಲೇಬೆನ್ನೂರು, ಸೆ. 7 - ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದಲ್ಲಿ ಕೊರೊನಾ ಕಾರಣದಿಂದಾಗಿ ನಿಲ್ಲಿಸಲಾಗಿದ್ದ ದಾಸೋಹ ಪ್ರಸಾದ ವ್ಯವಸ್ಥೆ ಮತ್ತು ವಸತಿ ವ್ಯವಸ್ಥೆಯನ್ನು ವಿಶೇಷ ಪೂಜೆಯೊಂದಿಗೆ ಸೋಮವಾರದಿಂದ ಭಕ್ತರಿಗೆ ನೀಡಲಾಯಿತು.

ದಾಸೋಹ ಮಂದಿರವನ್ನು ಸ್ವಚ್ಛ ಮಾಡಿ, ಅಡುಗೆ ಮಾಡುವ ಮತ್ತು ವಿತರಿಸುವ ಸಾಮಗ್ರಿಗಳನ್ನು ಬಿಸಿ ನೀರಿನಿಂದ ಶುಚಿಗೊಳಿಸಿ ಪ್ರಸಾದವನ್ನು ವಿತರಿಸಲಾಯಿತು. ವಸತಿ ಗೃಹದಲ್ಲಿ ಉಳಿದು ಕೊಳ್ಳಲು ಬರುವ ಭಕ್ತಾದಿಗಳಿಗೆ ಆಧಾರ್ ಕಾರ್ಡ್, ಫೋನ್ ನಂಬರ್, ಮಾಸ್ಕ್ ಗಳನ್ನು ಕಡ್ಡಾಯಗೊಳಿಸಲಾಗಿದೆ ಎಂದು ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ,

# ತಿಮ್ಮಣ್ಣ ನಾಯಕ ಸಿನಿಮಾ ಮಾಡಲು ಸುದೀಪ್ ಅಭಿಮಾನಿಗಳ ಒತ್ತಾಯ

ದಾವಣಗೆರೆ, ಸೆ.7- ಚಿತ್ರದುರ್ಗದ 7 ಸುತ್ತಿನ ಕೋಟೆಯ ಮೂಲ ಸ್ಥಾಪಕರು ಹಾಗೂ ಮದಕರಿ ವಂಶದ ಅಗ್ರ ಶೂರರೂ ಆಗಿರುವ ಮತ್ತಿ ತಿಮ್ಮಣ್ಣ ನಾಯಕರ ಕುರಿತಾದ ಚಿತ್ರವನ್ನು ನಟ ಸುದೀಪ್ ಮಾಡುವಂತಾಗಲಿ ಎಂದು ಸುದೀಪ್ ಅಭಿಮಾನಿಗಳು ಒತ್ತಾಯಿಸಿದರು.

ಕಿಚ್ಚ ಸುದೀಪ್ ಹುಟ್ಟುಹಬ್ಬದ ಅಂಗವಾಗಿ ಮತ್ತಿ ಗ್ರಾಮದಲ್ಲಿ ಇರುವ ಮತ್ತಿ ತಿಮ್ಮಣ್ಣ ನಾಯಕ ಸಮಾಧಿಗೆ ಪೂಜೆ ಸಲ್ಲಿಸಿ ಗ್ರಾಮಸ್ಥರಿಗೆ ಮಾಸ್ಕ್ ವಿತರಿಸಿ ಮಾತನಾಡಿದ ಅಭಿಮಾನಿಗಳು, ಮದಕರಿ ನಾಯಕರ ಚರಿತ್ರೆಯನ್ನು ಚಿತ್ರ ಮಾಡಲು ಘೋಷಿಸಿದ್ದರೂ ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ. ಚಿತ್ರದುರ್ಗದ 7 ಸುತ್ತಿನ ಕೋಟೆಯ ಮೂಲ ಸ್ಥಾಪಕರು, ಮದಕರಿ ವಂಶದ ಅಗ್ರ ಶೂರರೂ ಆಗಿರುವ ತಿಮ್ಮಣ್ಣ ನಾಯಕ ಅವರ ಇತಿಹಾಸ ರೋಚಕವಾಗಿದ್ದು, ಸುದೀಪ್ ಅವರು ಚಿತ್ರವನ್ನಾಗಿಸಲಿ ಎಂದು ಪೂಜೆ ಸಲ್ಲಿಸಿ ಹಾರೈಸಿದರು.

ಈ ಸಂದರ್ಭದಲ್ಲಿ ಹನುಮಂತಪ್ಪ, ಪಿ.ಬಿ. ಅಂಜುಕುಮಾರ್, ಮಂಜು ಪಾಳೇಗಾರ ಹಾಗೂ ಕಿಚ್ಚನ ಆರ್ಮಿಯ ಮಂಜು ಹದಡಿ, ಗಣೇಶ್, ಅನಿಲ್, ಗುರು, ಸಚಿನ್ ಪಾಳೇಗಾರ, ಮಂಜು ಆರನೇಕಲ್, ರಾಹುಲ್, ವಿನಾಯಕ ಹಾಗೂ ಮತ್ತಿ ಗ್ರಾಮಸ್ಥರು ಉಪಸ್ಥಿತರಿದ್ದರು.

# ವಿಕಲಚೇತನ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಸೆ.7- ಸಮನ್ವಿತಾ ಫೌಂಡೇಷನ್ ವಿಕಲಚೇತನರ ಶ್ರೇಯೋಭಿವೃದ್ಧಿ ಸಂಸ್ಥೆಯು ನಗರದ ರಂಗಮಹಲ್‌ನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ 30 ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ವಿಶ್ವ ಎಜುಕೇಷನಲ್ ಮತ್ತು ಸೋಷಿಯಲ್ ವೆಲ್‌ಫೇರ್ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥ ಬಿ. ವಿಶ್ವನಾಥ್ ನೆರವೇರಿಸಿದರು. ಅಧ್ಯಕ್ಷತೆಯನ್ನು ಬಿಐಇಆರ್‌ಟಿ ಎ.ಎನ್. ರುದ್ರಾಂಬೆ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿ (ಉತ್ತರ ವಲಯ) ಇವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ರಂಗಮಹಲ್ ಮಾಲೀಕರಾದ ಚನ್ನಗಿರಿ ಆರ್. ಸತ್ಯನಾರಾಯಣ, ಮಲೆಬೆನ್ನೂರು ಬೀರಲಿಂಗೇಶ್ವರ ಪ್ರಾಥಮಿಕ ಶಾಲೆ ಶಿಕ್ಷಕ ಕರಿಬಸಯ್ಯ, ಅಮರಾವತಿ ಹರಿಹರ ಲಿಂಗೇಶ್ವರ ವಿಕಲಚೇತನರ ವಸತಿಯುತ ಶಾಲೆ ಶಿಕ್ಷಕ ಉಮೇಶ ಮತ್ತಿಹಳ್ಳಿ, ಹಾಗೂ ಸಮನ್ವಯ ಸಂಸ್ಥೆಯ ಅಧ್ಯಕ್ಷ ಎಂ. ದುರುಗೇಶ್ ಉಪಸ್ಥಿತರಿದ್ದರು. ನಿರ್ದೇಶಕರಾದ ಪಿ. ಹರೀಶ್, ಎಂ.ಯು. ಪ್ರದೀಪ್, ಅಂಜನಾ, ವೆಂಕಟೇಶ್, ಕೀರ್ತಿ, ಹರೀಶ್ ಭಾಗವಹಿಸಿದ್ದರು.

ಸಂಸ್ಥೆ ಉಪಾಧ್ಯಕ್ಷ ಎಸ್.ಡಿ. ಪ್ರಕಾಶ್ ನಿರೂಪಿಸಿದರು. ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಕಾರ್ಯಕ್ರಮವನ್ನು ಖಜಾಂಚಿ ಶೃತಿ ನಡೆಸಿಕೊಟ್ಟರು.

# ಕದ್ದ ಮೊಬೈಲ್ ಬಳಸಲಾಗದೇ ಮರಳಿಸಿದ!

ಬುರ್ದವಾನ್ (ಪಶ್ಚಿಮ ಬಂಗಾಳ), ಸೆ. 7 – ಸ್ಮಾರ್ಟ್‌ಫೋನ್ ಕದ್ದ ವ್ಯಕ್ತಿಗೆ ಅದನ್ನು ಬಳಸಲು ಸಾಧ್ಯವಾಗದೇ ಮಾಲೀಕನಿಗೆ ಮರಳಿಸಿದ ಘಟನೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ. ಪೂರ್ವ ಬುರ್ದವಾನ್ ಜಿಲ್ಲೆಯ ಜಮಾಲ್ಪುರದ ಸಿಹಿ ಅಂಗಡಿಯಲ್ಲಿ ವ್ಯಕ್ತಿಯೊಬ್ಬರು ಸೆ.4ರಂದು 45 ಸಾವಿರ ರೂ. ಮೌಲ್ಯದ ಮೊಬೈಲ್ ಅನ್ನು ಮರೆತು ಬಂದಿದ್ದರು. ಆದರೆ, ಭಾನುವಾರ ಕರೆ ಮಾಡಿದಾಗ ಫೋನ್ ತೆಗೆದುಕೊಂಡು ಹೋದ ವ್ಯಕ್ತಿಯೇ ಉತ್ತರಿಸಿ, ವಾಪಸ್ ಕೊಡಲು ಸಿದ್ಧವಿರುವುದಾಗಿ ಹೇಳಿದ. ಪೊಲೀಸರೊಂದಿಗೆ ಆತನ ಮನೆಗೆ ಹೋಗಿ ಮೊಬೈಲ್ ಪಡೆದುಕೊಂದಿದ್ದು, ಮೊಬೈಲ್ ಮಾಲೀಕನ ಮನವಿಯ ಮೇರೆಗೆ ಪೊಲೀಸರು ಕ್ರಮ ತೆಗೆದುಕೊಂಡಿಲ್ಲ.

# ವಿದ್ಯಾಭ್ಯಾಸ ಸಾಲಕ್ಕಾಗಿ ಅಲ್ಪಸಂಖ್ಯಾತರಿಂದ ಅರ್ಜಿ

ದಾವಣಗೆರೆ, ಸೆ.7- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾಗುವ ಸಿಇಟಿ/ನೀಟ್ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿಯಲ್ಲಿ ವಿದ್ಯಾಭ್ಯಾಸ ಸಾಲದ ಯೋಜನೆಯಡಿಯಲ್ಲಿ ಸಾಲ ಪಡೆಯಲು ಆನ್ ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.

ವೆಬ್-ಸೈಟ್ kmdc.kar.nic.in/arivu2 ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ ಹಾರ್ಡ್ ಕಾಪಿಗಳನ್ನು ಇದೇ ದಿನಾಂಕ 18 ರೊಳಗಾಗಿ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕುರುಬರ ಹಾಸ್ಟೆಲ್ ಕಟ್ಟಡ, ಹದಡಿ ರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ-577002. ಫೋ- 08192-232349 ಇಲ್ಲಿಗೆ ಸಂಪರ್ಕಿಸಬಹುದೆಂದು ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಚಿತ್ರದುರ್ಗದಲ್ಲಿ ಇಂದು ಕೋವಿಡ್ ಪರೀಕ್ಷಾ ಕೇಂದ್ರ ಉದ್ಘಾಟನೆ



ಚಿತ್ರದುರ್ಗ, ಸೆ.7- ನಗರದ ಬಸವೇಶ್ವರ ಆಸ್ಪತ್ರೆಯಲ್ಲಿ ಕೋವಿಡ್ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ನಾಳೆ ದಿನಾಂಕ 8ರ ಮಂಗಳವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಡಿಯೋ ಕಾನ್ಫರೆನ್ಸ್ ಮೂಲಕ ಲೋಕಾರ್ಪಣೆಗೊಳಿಸುವರು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದ್ದಾರೆ.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ಇಂದು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶರಣರು, ಕೊರೊನಾ ಕೇಸ್‌ಗಳು ದಿನದಿಂದ ದಿನಕ್ಕೆ ವಿಶ್ವ, ರಾಷ್ಟ್ರ, ರಾಜ್ಯ ಹಾಗು ಜಿಲ್ಲೆಗಳಲ್ಲಿ ಹೆಚ್ಚಾಗುತ್ತಿದ್ದು, ಹೆಚ್ಚಿನ ಆತಂಕ ಸೃಷ್ಟಿಯಾಗುತ್ತಿದೆ. ಹಾಗಾಗಿ ನಾವು ಮುನ್ನೆಚ್ಚರಿಕೆ ವಹಿಸಬೇಕಿದೆ. ಈ ನಿಟ್ಟಿನಲ್ಲಿ ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಉತ್ತಮ ಸೇವೆ ನೀಡುವ ಕಾರಣಕ್ಕಾಗಿ ಈ ಸೆಂಟರನ್ನು ಪ್ರಾರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಸವೇಶ್ವರ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ॥ ಪ್ರಶಾಂತ್ ಮಾತನಾಡಿ, ಕೋವಿಡ್ ಟೆಸ್ಟ್ ಅಂದರೆ ನಮ್ಮಲ್ಲಿ ದಿನಕ್ಕೆ 300 ಜನರಿಗೆ ಟೆಸ್ಟ್ ಮಾಡಬಹುದು. ದಿನದ 24 ಗಂಟೆ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತದೆ. ಸರ್ಕಾರ ಈಗಾಗಲೇ ಆರ್‌ಟಿಪಿಸಿಗೆ 3,000 ರೂ. ಅಂತಿಮಗೊಳಿಸಿದೆ. ಅಷ್ಟೇ ಹಣವನ್ನು ನಾವು ತೆಗೆದುಕೊಳ್ಳುತ್ತೇವೆ. ಸರ್ಕಾರಿ ಆಸ್ಪತ್ರೆಯಲ್ಲಿರುವ ಹೆಚ್ಚಿನ ಕೋವಿಡ್ ಟೆಸ್ಟ್ ಇದ್ದರೆ ನಮ್ಮಲ್ಲಿಗೆ ಕಳುಹಿಸಿದರೆ ನಾವು ಟೆಸ್ಟ್ ಮಾಡಿಕೊಡುತ್ತೇವೆ. ಜ್ವರ, ಕೆಮ್ಮು, ನೆಗಡಿ ಇರುವವರು ಬಂದು ಟೆಸ್ಟ್ ಮಾಡಿಸಿಕೊಳ್ಳಬಹುದು. ನಮ್ಮಲ್ಲಿ 25 ವೆಂಟಿಲೇಟರ್‌ಗಳಿದ್ದು, ಕೋವಿಡ್ ರೋಗಿಗಳಿಗೆ 6 ವೆಂಟಿಲೇಟರ್‌ಗಳನ್ನು ಕೊಡಲು ಸಿದ್ದರಿದ್ದು, ಆಯುಷ್ಮಾನ್ ಭಾರತ ಸೌಲಭ್ಯವಿದ್ದು ಅದು ಕೋವಿಡ್‌ಗೂ ಅನ್ವಯಿಸುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ॥ ಪ್ರಶಾಂತ್, ವೈದ್ಯಕೀಯ ಅಧೀಕ್ಷಕ ಡಾ॥ ಪಾಲಾಕ್ಷಯ್ಯ ಮತ್ತಿತರರಿದ್ದರು.

# ಕರುಣಾ ಟ್ರಸ್ಟ್ ನಿಂದ ಸ್ಕಾಲರ್ ಶಿಪ್‌ಗೆ ಅರ್ಜಿ

ದಾವಣಗೆರೆ, ಸೆ.7- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಸ್ಕಾಲರ್ ಶಿಪ್‌ಗೆ ಅರ್ಜಿ ಆಹ್ವಾನಿಸಲಾಗಿದ್ದು, ತಂದೆ ಇಲ್ಲದೆ, ಆರ್ಥಿಕವಾಗಿ ದುರ್ಬಲರಾದ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ. 80 ಅಂಕ ಗಳಿಸಿ ತಮ್ಮ ಮುಂದಿನ ಶಿಕ್ಷಣವನ್ನು ಸರ್ಕಾರಿ ಕಾಲೇಜಿನಲ್ಲಿ ಮುಂದುವರೆಸುವ ವಿದ್ಯಾರ್ಥಿನಿಯರು ಮಾತ್ರ ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ಕರುಣಾ ಜೀವ ಕಲ್ಯಾಣ ಟ್ರಸ್ಟ್, ಮಾಮಾಸ್ ಜಾಯಿಂಟ್ ರಸ್ತೆ, 3ನೇ ಮುಖ್ಯರಸ್ತೆ, 3ನೇ ಅಡ್ಡ ರಸ್ತೆ, ಶಂಕರ್ ಪ್ಲಾಜಾ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ ಇಲ್ಲಿ ಸಂಪರ್ಕಿಸುವುದು.

# ಡ್ರಗ್ಸ್ ದಂಧೆಗೆ ಕಠಿಣ ಕ್ರಮ, ಗೋ ಹತ್ಯೆಗೆ ಬಿಗಿ ಕ್ರಮವಿರಲಿ

## ಅಂತರರಾಷ್ಟ್ರೀಯ ಹಿಂದೂ ಪರಿಷತ್ ಆಗ್ರಹ

ದಾವಣಗೆರೆ, ಸೆ.7- ಡ್ರಗ್ಸ್ ದಂಧೆ ಕಡಿವಾಣಕ್ಕೆ ಕಠಿಣ ಕ್ರಮಕೈಗೊಳ್ಳಬೇಕು ಹಾಗೂ ಗೋ ಹತ್ಯೆ ಸಂಪೂರ್ಣ ನಿಷೇಧಕ್ಕೆ ಬಿಗಿ ಕ್ರಮ ವಹಿಸಬೇಕೆಂದು ಅಂತರ ರಾಷ್ಟ್ರೀಯ ಹಿಂದೂ ಪರಿಷತ್ ರಾಜ್ಯ ಪ್ರಮುಖ್ ರಾಘವೇಂದ್ರರಾವ್ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಡ್ರಗ್ಸ್ ದಂಧೆ ವ್ಯಾಪಕವಾಗಿದೆ. ವಿದ್ಯಾರ್ಥಿ ಮತ್ತು ಯುವ ಸಮೂಹವೇ ಈ ದಂಧೆಗೆ ಟಾರ್ಗೆಟ್ ಆಗಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಸಾರ್ವಜನಿಕರೂ ಸಹ ಪೊಲೀಸ್ ಇಲಾಖೆಗೆ ಅಗತ್ಯ ಮಾಹಿತಿ ನೀಡುವ ಮೂಲಕ ಡ್ರಗ್ಸ್ ನಿಯಂತ್ರಣಕ್ಕೆ ಸಹಕರಿಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಗೋವುಗಳನ್ನು ಹಾಡುಹಗಲೇ ರಾಜಾರೋಷವಾಗಿ ಹತ್ಯೆ ಮಾಡಲಾಗುತ್ತಿದೆ. ಭಾರತೀಯ ಸಂಸ್ಕೃತಿಯ ಪ್ರತೀಕ, ಮಾತೃ ಸ್ವರೂಪಿಯಾದ ಗೋವುಗಳ ಹತ್ಯೆ ಸಂಪೂರ್ಣವಾಗಿ ನಿಷೇಧಿಸಬೇಕು. ಇದಕ್ಕಾಗಿ ಅಧಿಕಾರಿಗಳು ಬಿಗಿ ಕ್ರಮ ವಹಿಸುವ ಮುಖೇನ ಗೋವುಗಳ ರಕ್ಷಣೆಗೆ ನಿಲ್ಲಬೇಕು. ಎಲ್ಲಾ ಪಕ್ಷದವರೂ ಸಂಪೂರ್ಣ ಗೋಹತ್ಯೆ ನಿಷೇಧವನ್ನು ಬೆಂಬಲಿಸಬೇಕು.

ಸರ್ಕಾರ, ಕಾನೂನಿಗಿಂತಲೂ ಸಾರ್ವಜನಿಕರೇ ಇದರ ವಿರುದ್ಧದ ಹೋರಾಟಕ್ಕೆ ಇಳಿಯಬೇಕೆಂದರು.

ಡಾ. ಪ್ರವೀಣ್ ತೊಗಾಡಿಯಾ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಹಿಂದೂ ಪರಿಷತ್ ನ ರಾಷ್ಟ್ರೀಯ ಭಜರಂಗದಳ ಸಂಘಟನೆ ಅಸ್ತಿತ್ವಕ್ಕೆ ಬಂದಿದ್ದು, 11 ವಿವಿಧ ವಿಭಾಗಗಳ ಮೂಲಕ ಹಿಂದೂ ಸಂಸ್ಕೃತಿ, ಸಮಾಜ ಸಂಘಟಿಸುವ ಉದ್ದೇಶ ಹೊಂದಿದೆ. ಮುಂಬರುವ ದಿನಗಳಲ್ಲಿ ಹಿರಿಯರ ಮಾರ್ಗದರ್ಶನದಂತೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಸಂಘಟನೆಯನ್ನು ಬಲಪಡಿಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್. ಮಂಜುನಾಥ ಕಡ್ಲೇಬಾಳು, ವಿದ್ಯಾರ್ಥಿ ಘಟಕದ ಜಿಲ್ಲಾಧ್ಯಕ್ಷ ವಿ.ಜಿ. ಚಂದ್ರಶೇಖರ ಮರಬದ್, ಸಹಾಯವಾಣಿ ಪ್ರಮುಖ ಸೋಮಶೇಖರ್ ಇದ್ದರು.

# ಸಾವಿತ್ರಿಬಾಯಿ ಸಂಘದಿಂದ ಶಿಕ್ಷಕರ ದಿನಾಚರಣೆ

ಹರಿಹರ, ಸೆ.7- ನಗರದ ಸಾವಿತ್ರಿಬಾಯಿ ಫುಲೆ ಮಹಿಳಾ ಶಿಕ್ಷಕಿಯರ ಸಂಘದವತಿಯಿಂದ ಶಿಕ್ಷಣ ತಜ್ಞ, ತತ್ವಜ್ಞಾನಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗಾಯತ್ರಿ, ಸಾಕಮ್ಮ, ಜ್ಯೋತಿ, ರೇಣುಕಾಂಬ, ಪುಷ್ಪಾ, ರೇಣುಕಮ್ಮ, ಉಮಾ, ಶಾರದಮ್ಮ ಇನ್ನಿತರರಿದ್ದರು.

# ನಟಿ ರಾಗಿಣಿ ಐದು ದಿನ ಕಸ್ಟಡಿಗೆ

ಬೆಂಗಳೂರು, ಸೆ. 7- ಡ್ರಗ್ಸ್ ಜಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ವಶದಲ್ಲಿರುವ ಚಿತ್ರನಟಿ ರಾಗಿಣಿ ದ್ವಿವೇದಿ ಅವರನ್ನು ಮತ್ತೆ ಐದು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

ರಾಗಿಣಿ ದ್ವಿವೇದಿ ಅವರು ಮಹಿಳಾ ಸಾಂತ್ವನ ಕೇಂದ್ರದಲ್ಲಿದ್ದು, ಅಲ್ಲಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಿದ 1ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರಾದ ಜಗದೀಶ್ ಅವರು, ಐದು ದಿನಗಳ ಕಾಲ ರಾಗಿಣಿ ಅವರನ್ನು ಪೊಲೀಸ್ ಕಸ್ಟಡಿಗೆ ನೀಡಲು ಆದೇಶಿಸಿದರು.


## ಶ್ರೀ ಅಂಬಾಭವಾನಿ ಬ್ಯಾಂಕ್ ವ್ಯವಸ್ಥಾಪಕ ಶಿವಾಜಿರಾವ್ ಜಾಧವ್ ನಿಧನ



ದಾವಣಗೆರೆ ಪಿಸಾಳೆ ಗಿರಿಯಪ್ಪ ಲೇಔಟ್ ವಾಸಿ, ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ವ್ಯವಸ್ಥಾಪಕರಾದ

**ಶ್ರೀ ಶಿವಾಜಿರಾವ್ ಜಾಧವ್**

ಅವರು ದಿನಾಂಕ 7.9.2020ರ ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರಿಗೆ 47 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.9.2020ರಂದು ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

– ದುಃಖತಪ್ತ ಕುಟುಂಬ ವರ್ಗ

## ಜಗದೀಶ್ ಶೆಟ್ಟೆಪ್ಪನವರ್ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ 8ನೇ ಮುಖ್ಯ ರಸ್ತೆ, 8ನೇ ತಿರುವಿನ ವಾಸಿ, ಹರ್ಷ ಎಂಟರ್ ಪ್ರೈಸಸ್ ಮಾಲೀಕರಾದ

**ಶ್ರೀ ಜಗದೀಶ್ ಶೆಟ್ಟೆಪ್ಪನವರ್**

ಅವರು ದಿನಾಂಕ 7.9.2020ರ ಸೋಮವಾರ ಸಂಜೆ 4 ಗಂಟೆಗೆ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.9.2020ರ ಸೋಮವಾರ ಸಂಜೆ ನೆರವೇರಿಸಲಾಯಿತು.

◆ ಪತ್ನಿ : ಶ್ರೀಮತಿ ಶೈಲಜಾ ಜಗದೀಶ್ ◆ ಪುತ್ರ : ಹರ್ಷ ಜೆ.ಎಸ್.
◆ ಪುತ್ರಿ : ಭೂಮಿಕಾ ಜೆ.ಎಸ್. ◆ ಸಹೋದರ : ಉಮೇಶ್ ಹೆಚ್.ಎಸ್.

ರಾಂಪುರ, ಗೌಡ್ರು, ಶೆಟ್ಟೆಪ್ಪನವರ್ ಕಬನೂರು ಮತ್ತು ಹೆಡಿಗ್ಗೊಂಡ ಬಣಕಾರ ವಂಶಸ್ಥರು, ದಾವಣಗೆರೆ.

## ಕೆ.ಆರ್.ವೀರಣ್ಣ (ಕಾರ್ತಿಕ ಹತ್ತಿ) ನಿಧನ



ದಾವಣಗೆರೆ ವಿನೋಬನಗರ 1ನೇ ಮೇನ್, 6ನೇ ಕ್ರಾಸ್ ವಾಸಿ, ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಪಿಗ್ಮಿ ಕಲೆಕ್ಟರ್ ಕೆ.ಆರ್.ವೀರಣ್ಣ (ಕಾರ್ತಿಕ ಹತ್ತಿ) (65) ಅವರು ದಿನಾಂಕ:07.09.2020ರಂದು ಸೋಮವಾರ ಬೆಳಿಗ್ಗೆ 10.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 7.9.2020 ರಂದು ಸೋಮವಾರ ಸಂಜೆ 7.30 ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

## ಸ್ವಾತಂತ್ರ್ಯ ಹೋರಾಟಗಾರ ಶತಾಯುಷಿ ಪಂಚಾಕ್ಷರಪ್ಪ ನಿಧನ




ಚನ್ನಗಿರಿ ತಾಲ್ಲೂಕು ಮಾಡಾಳ್ ಚನ್ನೇಶಪುರ ವಾಸಿ, ಸ್ವಾತಂತ್ರ್ಯ ಹೋರಾಟಗಾರರೂ, ತಾಮ್ರ ಪತ್ರ ಪುರಸ್ಕೃತರು, ಜೀತ ವಿಮುಕ್ತ ರಾಷ್ಟ್ರೀಯ ಅಧ್ಯಕ್ಷರು, ಶತಾಯುಷಿಗಳಾದ ಎ. ಪಂಚಾಕ್ಷರಪ್ಪ ಅವರು ದಿನಾಂಕ: 7.09.2020ರ ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರ ಅಂತ್ಯಕ್ರಿಯೆ ದಿನಾಂಕ 8.09.2020ರ ಮಂಗಳವಾರ ಬೆಳಿಗ್ಗೆ 11 ಘಂಟೆಗೆ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ.

## ಶ್ರೀಮತಿ ಜಿ.ರುದ್ರಮ್ಮ ನಿಧನ



ದಾವಣಗೆರೆ ನಿಟ್ಟುವಳ್ಳಿ ಹೊಸ ಬಡಾವಣೆ ವಾಸಿ, ದಿ. ಜಿ. ರಾಮನಗೌಡ್ರು ಅವರ ಧರ್ಮಪತ್ನಿ ಜಿ.ರುದ್ರಮ್ಮ (74) ಅವರು ದಿನಾಂಕ: 06.09.2020 ರಂದು ಭಾನುವಾರ ಬೆಳಿಗ್ಗೆ 6.45ಕ್ಕೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 6.9.2020 ರಂದು ಭಾನುವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮ ಹರಿಹರ ತಾಲ್ಲೂಕು ಧೂಳೆಹೊಳೆ ಗ್ರಾಮದಲ್ಲಿ ನೆರವೇರಿಸಲಾಯಿತು.

## ಎಂ.ಆರ್.ಕೆ. ಭಾಗವತ್ ನಿಧನ



ದಾವಣಗೆರೆ ಸರಸ್ವತಿ ನಗರ ವಾಸಿ ಎಂ.ಆರ್.ಕೆ. ಭಾಗವತ್ (67) ಅವರು 07.09.2020ರ ಸೋಮವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.09.2020 ಸೋಮವಾರ ಪಿ.ಬಿ.ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿತು.

## ಶ್ರೀಮತಿ ಗಂಗಮ್ಮ ಜಂಬಣ್ಣ ನಿಧನ



ದಾವಣಗೆರೆ ಗಾಂಧಿನಗರ 1ನೇ ಮೇನ್, 3ನೇ ಕ್ರಾಸ್ ವಾಸಿ, ಮಹಾನಗರ ಪಾಲಿಕೆ ಪೌರ ಕಾರ್ಮಿಕರಾಗಿದ್ದ ಶ್ರೀಮತಿ ಗಂಗಮ್ಮ ಜಂಬಣ್ಣ (47) ಅವರು ದಿನಾಂಕ 07.9.2020ರ ಸೋಮವಾರ ರಾತ್ರಿ 8 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.09.2020ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

# ಜಿಲ್ಲೆಯಲ್ಲಿ ಸ್ವಾಮಿತ್ವ ಯೋಜನೆಗೆ ಚಾಲನೆ

## ಮೊದಲ ಹಂತದಲ್ಲಿ ಪ್ರತಿ ತಾಲ್ಲೂಕಿನ 8 ಗ್ರಾಮ ಆಯ್ಕೆ: ಜಿ.ಪಂ.ಸಿಇಒ




ದಾವಣಗೆರೆ, ಸೆ. 6- ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಭೂಮಿಯನ್ನು ಗುರುತಿಸಿ ದಾಖಲಾತಿ ಗಳನ್ನು ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸ್ವಾಮಿತ್ವ ಯೋಜನೆ ಮಹತ್ವಪೂರ್ಣವಾಗಿದ್ದು, ದಾವಣಗೆರೆಯೂ ಸೇರಿದಂತೆ ರಾಜ್ಯದ 16 ಜಿಲ್ಲೆಗಳಲ್ಲಿ ಈ ಯೋಜನೆ ಆರಂಭಿಸಲಾಗಿದೆ ಎಂದು ಜಿ.ಪಂ. ಸಿಇಒ ಪದ್ಮಾ ಬಸವಂತಪ್ಪ ಮಾಹಿತಿ ನೀಡಿದರು.

ಆರಂಭಿಕವಾಗಿ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಈ ಯೋಜನೆಗೆ 8 ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ದ ಗ್ರಾಮಗಳಲ್ಲಿ ಯೋಜನೆ ಬಗ್ಗೆ ಅರಿವು ಮೂಡಿಸಲು ಈಗಾಗಲೇ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಜನರ ನಿಜ ಆಸ್ತಿ ಮೌಲ್ಯವನ್ನು ಮಾಪನ ಮಾಡಲಾಗುವುದು. ನಂತರ ಡ್ರೋನ್‌ನಲ್ಲಿ ಅಳತೆ ಕಾರ್ಯವನ್ನು ಮಾಡಲಾಗುವುದು. ಈ ಸಮಗ್ರ ಮಾಹಿತಿಯನ್ನು ಪಿ.ಆರ್. ಕಾರ್ಡ್‌ನಲ್ಲಿ ನಮೂದಿಸಿ ನೀಡಲಾಗುವುದು. ಆಸ್ತಿ ವಾರಸುದಾರರಿಗೆ ಪಿ.ಆರ್.ಕಾರ್ಡ್ ದಾಖಲಾತಿಯಲ್ಲಿ ವ್ಯತ್ಯಾಸ ಕಂಡಲ್ಲಿ ಅಥವಾ ಆಸ್ತಿಯಲ್ಲಿ ವಿವಾದ ಇದ್ದಲ್ಲಿ ಅದನ್ನು ವಿಚಾರಣಾಧಿಕಾರಿಗಳಿಗೆ ಅರ್ಜಿ ನೀಡಿ ಬಗೆಹರಿಸಿಕೊಳ್ಳಬಹುದು ಎಂದರು.

ಈ ಮೊದಲು ಗ್ರಾಮದಲ್ಲಿರುವ ಭೂಮಿಗಳ ಮೇಲೆ ಬ್ಯಾಂಕ್ ಲೋನ್ ನೀಡಲಾಗುತ್ತಿರಲಿಲ್ಲ. ಈ ಯೋಜನೆ ಜಾರಿಗೆ ಬರುತ್ತಿದ್ದಂತೆ ನಾಗರಿಕರು ತಮ್ಮ ಗ್ರಾಮದ ಆಸ್ತಿ-ಪಾಸ್ತಿಗಳ ಮೇಲೂ ಕೂಡ ಸಾಲವನ್ನು ಪಡೆಯಬಹುದಾಗಿದೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆಯಿಂದ ಹಳ್ಳಿಗರಿಗೆ ತುಂಬಾ ಅನುಕೂಲವಾಗಲಿದ್ದು, ಸರ್ವೇ ಕಾರ್ಯವನ್ನು ಒಂದು ವರ್ಷಗಳ ವರೆಗೆ ನಡೆಸದೆ, 6 ತಿಂಗಳ ಒಳಗೆ ಮುಗಿಸುವಂತೆ ಸೂಚಿಸಿದರು.

**ಆಯುಷ್ಮಾನ್ ಕಾರ್ಡ್ ಚರಂಡಿಗೆ ಎಸೆದವರನ್ನು ಸಸ್ಪೆಂಡ್ ಮಾಡಿ:** ಎಲೆ ಬೇತೂರು ಬಳಿ ಆಯುಷ್ ಮಾನ್ ಕಾರ್ಡ್‌ಗಳನ್ನು ಚರಂಡಿಗೆ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಸಂಸದರು ಅಂಚೆ ಕಚೇರಿಯ ಸಹಾಯಕ ಅಧೀಕ್ಷಕರನ್ನು ಪ್ರಶ್ನಿಸಿದರು.

ಆಯುಷ್ಮಾನ್ ಕಾರ್ಡ್ ಗಳನ್ನು ತಿಪ್ಪೆಗೆಸದು ಇಬ್ಬರು ಕರ್ತವ್ಯಲೋಪ ಮಾಡಿದ ಕಾರಣಕ್ಕಾಗಿ ಅವರ ಮೇಲೆ ಚಾರ್ಜ್ ಶೀಟ್ ಹಾಕಲು ಹೇಳಿರುವುದಾಗಿ ಅಧೀಕ್ಷಕರು ಉತ್ತರಿಸಿದರು.

ಬೇತೂರು ಪೋಸ್ಟ್ ಮಾಸ್ಟರ್ ಕಾರ್ಯವೈಖರಿ ಕುರಿತು ಅಸಮಾಧಾನಗೊಂಡ ಸಿದ್ದೇಶ್ವರ್, ಬಡವರಿಗೆ (4ನೇ ಪುಟಕ್ಕೆ)

### ರಸ್ತೆ ಮೇಲೆ ಕೇಜ್ ವ್ಹೀಲ್ ಓಡಿಸಿದರೆ ಕ್ರಮ

**ರಸ್ತೆ ಮೇಲೆ ರೈತರು ಟ್ರ್ಯಾಕ್ಟರ್‌ಗೆ ಕೇಜ್ ವ್ಹೀಲ್ ಅಳವಡಿಸಿ ಓಡಿಸುವುದರಿಂದ ರಸ್ತೆಗಳು ಹಾಳಾಗುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.**

**ಕೇಜ್ ವ್ಹೀಲ್ ಬಳಸಿ ರೈತರು ತಮ್ಮ ಊರಿನ ರಸ್ತೆಗಳನ್ನು ತಾವೇ ಹಾಳು ಮಾಡಿಕೊಳ್ಳುತ್ತಾರೆ. ನಂತರ ರಸ್ತೆ ನಿರ್ಮಿಸಿಕೊಡಿ ಎನ್ನುತ್ತಾರೆ. ಇದಕ್ಕೆ ಪರಿಹಾರವೇನು? ಎಂದು ಸಿದ್ದೇಶ್ವರ್ ಅಧಿಕಾರಿಗಳನ್ನು ಪ್ರಶ್ನಿಸಿದರು.**

**ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ, ಕೇಜ್ ವ್ಹೀಲ್ ಬಳಸಿ ರಸ್ತೆ ಹಾಳು ಮಾಡುವವರಿಗೆ ಪಿಎಆರ್‌ಡಿ ಕಚೇರಿಯಿಂದ ಎರಡು ಬಾರಿ ನೋಟೀಸ್ ಕಳುಹಿಸಿ, ಮೂರನೇ ಬಾರಿ ದಂಡ ವಿಧಿಸಬಹುದು ಎಂದು ಅಭಿಪ್ರಾಯಿಸಿದರು. ಗ್ರಾಮ ಪಂಚಾಯ್ತಿ ವತಿಯಿಂದ ಪೊಲೀಸ್ ದೂರು ದಾಖಲಿಸಿ ಬಿಗಿ ಮಾಡಬಹುದು ಎಂಬ ಅಭಿಪ್ರಾಯ ವ್ಯಕ್ತವಾಯಿತು.**

### ನನ್ನ ಅವಧಿ ಮುಗಿಯುತ್ತೆ ಅನ್ಕೋಬೇಡಿ ಮತ್ತೆ ಬರ್ತೀನಿ

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಕಾಮಗಾರಿಗಳ ಬಗ್ಗೆ ಅಧಿಕಾರಿಗಳು ವಿವರ ನೀಡುವಾಗ, ನಾನು ಬಂದು ಭೂಮಿ ಪೂಜೆ ಮಾಡುವವರೆಗೆ ಕಾಮಗಾರಿ ಕೆಲಸ ಆರಂಭಿಸುವಂತಿಲ್ಲ ಎಂದು ಸಂಸದ ಸಿದ್ದೇಶ್ವರ ಸೂಚಿಸಿದರು.**

**ಮುಂದುವರೆದು ಮಾತನಾಡಿದ ಅವರು, ರಸ್ತೆ ಕಾಮಗಾರಿಗಳು ಕಳಪೆಯಾಗುವಂತಿಲ್ಲ. 5 ವರ್ಷ ಗುತ್ತಿಗೆದಾರರೇ ನಿರ್ವಹಣೆ ವಹಿಸಿಕೊಳ್ಳಬೇಕು. ಗುಂಡಿಗಳು ಬಿದ್ದರೆ ಪ್ರತಿ ವರ್ಷ ಗುಂಡಿ ಮುಚ್ಚಿಸಿ ನಾಮಫಲಕ ಹಾಕಬೇಕು. ಆರನೇ ವರ್ಷ ಮತ್ತೆ ಟಾರ್ ರಸ್ತೆ ನಿರ್ಮಿಸಬೇಕು ಎಂದು ಹೇಳಿದರು.**

**ನನ್ನ ಅವಧಿ ಇನ್ನೂ ಮೂರು ಮುಕ್ಕಾಲು ವರ್ಷ ಅಷ್ಟೇ ಎಂದು ನಿರ್ಲಕ್ಷ್ಯ ವಹಿಸಬೇಡಿ ನಾನು ಮತ್ತೆ ಬರ್ತೀನಿ ಎಂದರು.**

### ನಗರದಲ್ಲಿ ಕಸ ಕಂಡರೆ ಆಯುಕ್ತರೇ ಜವಾಬ್ದಾರಿ

**ನಗರದಲ್ಲಿ ಮುಂದಿನ ದಿನಗಳಲ್ಲಿ ಎಲ್ಲಾದರೂ ಕಸ ಕಂಡುಬಂದರೆ ನೀವೇ ನೇರ ಜವಾಬ್ದಾರರಾಗುತ್ತೀರಿ ಎಂದು ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಅವರಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಎಚ್ಚರಿಕೆ ನೀಡಿದರು.**

**ಸ್ವಚ್ಛತೆ ನಿರ್ವಹಣೆಯಲ್ಲಿ ದಾವಣಗೆರೆ ಜಿಲ್ಲೆ ಕೊನೆಯ ಸ್ಥಾನದಲ್ಲಿದ್ದು, ಈ ಬಗ್ಗೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚಿಸಿದ ಅವರು, ಎಸ್‌ಡಬ್ಲ್ಯೂಎಂ ಯೋಜನೆಯಡಿಯಲ್ಲಿ ಕಸ ವಿಲೇವಾರಿಯ ಹಣದ ಕುರಿತು ಸರಿಯಾದ ಮಾಹಿತಿ ನೀಡಬೇಕು. ಕಾಂಪೋಸ್ಟ್ ಮಾರಾಟ ಮಾಡಿದ ಹಣ ಎಲ್ಲಿಗೆ ಜಮೆಯಾಗಿದೆ ಎಂದು ತಿಳಿಸಬೇಕು ಎಂದರು.**

# ಎಲ್ಲರನ್ನೂ ಮೆಚ್ಚಿಸುವಂತೆ ಒಳಮೀಸಲಾತಿ ಇತ್ಯರ್ಥ

## ಎಸ್ಸಿ ಮೋರ್ಚಾ ಘಟಕದ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣ ಸ್ವಾಮಿ



ದಾವಣಗೆರೆ, ಸೆ. 7 - ಎಲ್ಲರನ್ನೂ ಮೆಚ್ಚಿಸುವ ರೀತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಒಳಮೀಸಲಾತಿ ವಿಷಯವನ್ನು ಇತ್ಯರ್ಥಪಡಿಸಲಾಗುವುದು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಘಟಕದ ರಾಜ್ಯಾಧ್ಯಕ್ಷ ಎ. ಛಲವಾದಿ ನಾರಾಯಣ ಸ್ವಾಮಿ ತಿಳಿಸಿದ್ದಾರೆ.


ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಒಳಮೀಸಲಾತಿ ಚರ್ಚೆ ಹೊಸದಲ್ಲ. ಒಳ ಮೀಸಲಾತಿ ಕೇಳುವುದು ಸಹಜ. ಸದಾಶಿವ ಆಯೋಗದ ವರದಿ, ಹೋರಾಟಗಳು - ಒತ್ತಡ ಎಲ್ಲವನ್ನೂ ಸರ್ಕಾರ ಗಮನಿಸುತ್ತಿದೆ. ಸಾಧಕ - ಬಾಧಕಗಳನ್ನು ಗಮನಿಸಿ ಎಲ್ಲರಿಗೂ ನ್ಯಾಯ ಒದಗಿಸುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎಂದವರು ಹೇಳಿದ್ದಾರೆ.

ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ಶೇ.10ರ ಮೀಸಲಾತಿ ಪ್ರಕಟಿಸಿದೆ. ಆದರೆ, ಶೇ.50ರ ಮೀಸಲಾತಿ ಮಿತಿ ಇರುವುದರಿಂದ ಇದನ್ನು ಜಾರಿಗೆ ತರುವುದಕ್ಕೆ ವಿರೋಧ ವ್ಯಕ್ತವಾಗುತ್ತಿದೆ ಎಂಬ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಮೇಲ್ವರ್ಗದ ಆರ್ಥಿಕ ಹಿಂದುಳಿದವರಿಗೂ ಮೀಸಲಾತಿ ಕಲ್ಪಿಸಿರುವುದರಿಂದ ಇಂದು ಮೀಸಲಾತಿ ಹೊರತು ಪಡಿಸದ ಯಾವ ಜಾತಿಯೂ ಇಲ್ಲದಂತಾಗಿದೆ. ಎಲ್ಲರೂ ಭೇದ ಭಾವ ಇಲ್ಲದೇ ಮೀಸಲಾತಿಗೆ ಬಂದಿರುವುದು ತಮಗೆ ಸಮಾಧಾನ ತಂದಿದೆ ಎಂದರು.

ಮೀಸಲಾತಿಗೆ ಸುಪ್ರೀಂ ಕೋರ್ಟ್ ಶೇ.50ರ ಮಿತಿ ನಿಗದಿ ಪಡಿಸಿದೆ. ಆದರೆ, ತಮಿಳುನಾಡಿನಲ್ಲಿ ಶೇ.69ರ ಮೀಸಲಾತಿಯವರೆಗೂ ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ಈ ಎಲ್ಲ ವಿಷಯಗಳನ್ನು ಪರಿಗಣಿಸಿ, ಮೀಸಲಾತಿ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ನಾರಾಯಣ ಸ್ವಾಮಿ ಹೇಳಿದರು. ಇತ್ತೀಚಿನ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ದಲಿತರ ಸಂಖ್ಯೆಯೇ ಎಲ್ಲರಿಗಿಂತ ಹೆಚ್ಚಾಗಿದೆ. ದಲಿತರು ಒಗ್ಗಟ್ಟಾದರೆ ನಾವೇ ನಿರ್ಣಾಯಕರಾಗುತ್ತೇವೆ. ಹೀಗಾಗಿ ದಲಿತರನ್ನು ಬಿಜೆಪಿ ಪರವಾಗಿ ಸಂಘಟಿಸುತ್ತಿರುವುದಾಗಿ ಹೇಳಿದ ಅವರು, ಮುಂದಿನ ಬಾರಿ ಬಿಜೆಪಿ ದಲಿತ ಮತದಾರರ ನೆರವಿನೊಂದಿಗೆ 150 ರಿಂದ 170 ಸ್ಥಾನಗಳನ್ನು ಪಡೆದು, ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಎಸ್‌ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಬಸವರಾಜ ನಾಯ್ಕ, ಜಿಲ್ಲಾಧ್ಯಕ್ಷ ಹನುಮಂತ ನಾಯ್ಕ, ಬಿಜೆಪಿ ಮುಖಂಡರಾದ ಮಂಜಾನಾಯ್ಕ, ಅಂಜಿನಪ್ಪ, ಜಿ.ವಿ. ಗಂಗಾಧರ, ನಾಗರಾಜ ಲೋಕಿಕೆರೆ ಮತ್ತಿತರರು ಉಪಸ್ಥಿತರಿದ್ದರು.

# ಸಾಂಪ್ರದಾಯಿಕ ದಸರಾ ಬಗ್ಗೆ ಇಂದು ತೀರ್ಮಾನ



ಬೆಂಗಳೂರು, ಸೆ. 7- ಕೊರೊನಾ ಸಾಂಕ್ರಾಮಿಕ ರೋಗದ ನಡುವೆಯೇ ವಿಶ್ವವಿಖ್ಯಾತ ದಸರಾ ಮಹೋತ್ಸವವನ್ನು ಸರಳವಾಗಿ ಆಚರಿಸಬೇಕೇ, ಸಾಂಪ್ರದಾಯಿಕವಾಗಿ ವಿಜೃಂಭಣೆಯಿಂದ ನಡೆಸಬೇಕೇ ಎಂಬ ಬಗ್ಗೆ ನಾಳೆ ಮಂಗಳವಾರ ರಾಜ್ಯ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ದಸರಾ ಉನ್ನತ ಮಟ್ಟದ ಸಮಿತಿ ಸಭೆ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ನಾಡ ಹಬ್ಬ ದಸರಾವನ್ನು ಎಂದಿನಂತೆ ವಿಜೃಂಭಣೆಯಿಂದ ಆಚರಿಸಿ, ಇದರಿಂದ ಕೊರೊನಾ ಸೋಂಕಿನಿಂದ ನಲುಗಿರುವ ಪ್ರವಾಸೋದ್ಯಮದ ಚಟುವಟಿಕೆಗೆ ಅವಕಾಶ ಕಲ್ಪಿಸಿದಂತಾಗುತ್ತದೆ. ಆರ್ಥಿಕ ಚಟುವಟಿಕೆಗೂ ಜೀವ ಕೊಟ್ಟಂತಾಗುತ್ತದೆ ಎಂಬ ವಾದ ಒಂದೆಡೆ ಇದೆ.

ಕೊರೊನಾ ಸೋಂಕು ತಹಬಂದಿಗೆ ಬಂದಿಲ್ಲ. ಇಂತಹ ಸನ್ನಿವೇಶದಲ್ಲಿ ಸಾಂಪ್ರದಾಯಿಕವಾಗಿ ಸರಳ ದಸರಾ ಆಚರಣೆ ಮಾಡೋಣ ಎಂಬ ವಾದವೂ ಇದೆ.

ಇನ್ನೊಂದು ವರ್ಗ ಮೆರವಣಿಗೆ ರದ್ದು ಮಾಡಿ, ಉಳಿದ ಚಟುವಟಿಕೆಗಳಿಗೆ (4ನೇ ಪುಟಕ್ಕೆ)

# ಸೆ.19, 20ಕ್ಕೆ ಜಿಲ್ಲೆಯಲ್ಲಿ ಬೃಹತ್ ಇ-ಲೋಕ್ ಅದಾಲತ್ : ನ್ಯಾ. ಗೀತಾ



ದಾವಣಗೆರೆ, ಸೆ.7- ಇದೇ ಸೆ.19 ಮತ್ತು 20ರಂದು ಜಿಲ್ಲೆಯಲ್ಲಿ ಬೃಹತ್ ಇ-ಲೋಕ್ ಅದಾಲತ್ತನ್ನು ನಡೆಸಲಾಗುವುದು ಎಂದು ಒಂದನೇ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಬಿ. ಗೀತಾ ತಿಳಿಸಿದರು.

ಅವರು, ಇಂದು ನಗರದ ದೇವರಾಜ ಅರಸು ಬಡಾವಣೆಯಲ್ಲಿನ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲೆಯಲ್ಲಿನ ಎಲ್ಲಾ ಕಾನೂನು ತಾಲ್ಲೂಕು ಸೇವಾ ಸಮಿತಿಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಇ-ಲೋಕ್ ಅದಾಲತ್ ನಡೆಸುವ ಬಗ್ಗೆ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಇ-ಲೋಕ್ ಅದಾಲತ್ ನ ಪ್ರತಿಯೊಂದು ಪೀಠದಲ್ಲಿ ಒಬ್ಬರು ಹಾಲಿ ನ್ಯಾಯಾಧೀಶರು ಹಾಗೂ ಒಬ್ಬರು ಪರಿಣಿತ ವಕೀಲರು ಸಂಧಾನಕಾರರಾಗಿರುತ್ತಾರೆ. ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ಇನ್ನೂ ದಾಖಲು ಮಾಡದೇ ಇರುವ ರಾಜಿಯಾಗುವಂತಹ ಎಲ್ಲಾ ಪ್ರಕರಣಗಳಲ್ಲಿ ಪಕ್ಷಗಾರರು ಸದರಿ ಪೀಠಗಳ ಮೂಲಕ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು. ಅದಕ್ಕಾಗಿ ಪಕ್ಷಗಾರರು ನ್ಯಾಯಾಲಯಕ್ಕೆ ಬರುವ ಅವಶ್ಯಕತೆ ಇಲ್ಲ. ಪಕ್ಷಗಾರರು ತಮ್ಮ ಮನೆಯಿಂದಲೇ ಅಥವಾ ತಮ್ಮ ವಕೀಲರ ಕಛೇರಿಯ ಮೂಲಕ ಪ್ರಕರಣಗಳಲ್ಲಿ ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಹೇಳಿದರು.

ಲೋಕ್ ಅದಾಲತ್ ಅಥವಾ ಜನತಾ ನ್ಯಾಯಾಲಯದ ಮೂಲಕ ಪಕ್ಷಗಾರರು ರಾಜೀ ಅಥವಾ ಸಂಧಾನದ ಮೂಲಕ ತಮ್ಮ ಪ್ರಕರಣಗಳನ್ನು ಸುಲಭವಾಗಿ, ಶೀಘ್ರವಾಗಿ ಯಾವುದೇ ಶುಲ್ಕವಿಲ್ಲದೇ ಇತ್ಯರ್ಥಪಡಿಸಿ ಕೊಳ್ಳಬಹುದು. ಲೋಕ್ ಅದಾಲತ್‌ನಲ್ಲಿ ಮಾಡುವ ಅವಾರ್ಡ್ ಕಾನೂನು ಬದ್ಧವಾಗಿ ರುತ್ತದೆ ಮತ್ತು ನ್ಯಾಯಾಲಯದಲ್ಲಿ ತೀರ್ಮಾನವಾದ ಪ್ರಕರಣಗಳಂತೆಯೇ (4ನೇ ಪುಟಕ್ಕೆ)

# 199 ಪಾಸಿಟಿವ್, 3 ಸಾವು

ದಾವಣಗೆರೆ, ಸೆ. 7- ಜಿಲ್ಲೆಯಲ್ಲಿ ಸೋಮವಾರ 199 ಜನರಲ್ಲಿ ಕೊರೊನಾ ಪಾಸಿಟಿವ್ ದೃಢಪಟ್ಟ ಬಗ್ಗೆ ವರದಿಯಾಗಿದೆ. 3 ಜನರು ಸಾವನ್ನಪ್ಪಿದ್ದು, 173 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

ಇಲ್ಲಿಯವರೆಗೆ ಜಿಲ್ಲೆಯಲ್ಲಿ 11397 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 8366 ಜನರು ಗುಣಮುಖರಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 2815 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 96, ಹರಿಹರ 27, ಜಗಳೂರು 14, ಚನ್ನಗಿರಿ 31, ಹೊನ್ನಾಳಿ 25 ಹಾಗೂ ಹೊರ ಜಿಲ್ಲೆಯ 6 ಜನರಲ್ಲಿ ಸೋಂಕು ದೃಢಪಟ್ಟಿದೆ.

ದಾವಣಗೆರೆಯ ಬಂಬೂ ಬಜಾರ್‌ನ 30 ವರ್ಷದ ಪುರುಷ ಸೋಂಕಿಗೆ ತುತ್ತಾಗಿ ಮೃತಪಟ್ಟಿದ್ದಾರೆ. ಇವರಿಗೆ ಕಿಡ್ನಿ ಸಮಸ್ಯೆ ಇರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ. ದೇವರಾಜ ಅರಸು ಬಡಾವಣೆಯ 64 ವರ್ಷದ ಪುರುಷ ಹಾಗೂ ಹರಿಹರ ಎ.ಕೆ. ಕಾಲೋನಿಯ 55 ವರ್ಷದ ಪುರುಷ ಸಹ ಸೋಂಕಿನಿಂದ ಮೃತಪಟ್ಟಿದ್ದಾರೆ.

# ಮೇಲಾಧಿಕಾರಿ ಕಿರುಕುಳ : ಆಟೋ ಚಾಲಕನಾದ ವೈದ್ಯ

ದಾವಣಗೆರೆ. ಸೆ.7- ಮೇಲಾಧಿಕಾರಿಗಳ ಕಿರುಕುಳದ ಹಿನ್ನೆಲೆಯಲ್ಲಿ ಜೀವನ ನಿರ್ವಹಣೆಗಾಗಿ ಆಟೋ ಚಾಲನೆ ಮಾಡುತ್ತಿರುವ ವೈದ್ಯ ಎಂ.ಹೆಚ್. ರವೀಂದ್ರನಾಥ್ ಅವರಿಗೆ ಐಎಂಎ ದಾವಣಗೆರೆ ಸಂಘ ಬೆಂಬಲಿಸುವ ಜೊತೆಗೆ ಅವರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ ಎಂದು ಐಎಂಎ ಪದಾಧಿಕಾರಿ ಡಾ. ಜಯಂತ್ ತಿಳಿಸಿದರು.

ಅಧಿಕಾರಿಗಳ ಬೇಜವಾಬ್ದಾರಿತನದಿಂದ ರವೀಂದ್ರ ಅವರು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಸಂಘದಿಂದ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಹೋರಾಟ ನಡೆಸಲಿದ್ದೇವೆ ಎಂದು ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

### ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಬೆಂಬಲಕ್ಕೆ ನಿಂತ ಐಎಂಎ

ವೈದ್ಯ ಡಾ. ರವೀಂದ್ರನಾಥ್ ಮಾತನಾಡಿ, ಬಳ್ಳಾರಿಯಲ್ಲಿ ಆರ್‌ಸಿಎಚ್ ಆಗಿ ಕೆಲಸ ಮಾಡುತ್ತಿದ್ದ ವೇಳೆ ಆಗಿನ ಐಎಎಸ್ ಅಧಿಕಾರಿಯೊಬ್ಬರು ಕಾನೂನು ಪ್ರಕ್ರಿಯೆ ವಿಚಾರದಲ್ಲಿ ನನ್ನ ಮೇಲೆ ಸಿಟ್ಟಿಗೆದ್ದು ಕಿರುಕುಳ ನೀಡಲು ಪ್ರಾರಂಭಿಸಿದ್ದರು. ಅವರು ವರ್ಗವಾದ ನಂತರ ಬಂದ ಅಧಿಕಾರಿಗೂ ನನ್ನ ಬಗ್ಗೆ ಇಲ್ಲ-ಸಲ್ಲದ್ದನ್ನು ಹೇಳಿ ಅವರೂ ಸಹ ನನಗೆ ಕಿರುಕುಳ ನೀಡುವಂತೆ ಮಾಡಿದರು. ಬಳ್ಳಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಲಸಿಕಾಧಿಕಾರಿ ಆಗಿದ್ದ ಸಂದರ್ಭದಲ್ಲಿ ಟೆಂಡರ್ ಟೆಕ್ನಿಕಲ್ ಬಿಡ್ ಇವ್ಯಾಲುಯೇಷನ್ ಸಂಬಂಧ ದಾಖಲೆ ಇಲ್ಲ ಎಂಬ ಕಾರಣಕ್ಕೆ 2019ರ ಜೂನ್ 6ರಂದು ಅಮಾನತ್ತುಗೊಳಿಸಲಾಯಿತು. ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಕ್ಲರ್ಕ್ ಮಾಡಿದ ತಪ್ಪಿಗೆ ನನ್ನನ್ನು ಗುರಿ ಮಾಡಿ ಅಮಾನತ್ತು ಮಾಡಲಾಯಿತು ಎಂದು ನೋವು ತೋಡಿಕೊಂಡರು.

ಅಮಾನತ್ತು ಆದ ನಾಲ್ಕು ದಿನಗಳಲ್ಲೇ ಬೆಳಗಾವಿಯ ಕೆಎಟಿಯ ಮೊರೆ ಹೋದೆ. ಎಲ್ಲಾ ದಾಖಲೆಗಳನ್ನು ಒದಗಿಸಿದೆ. ತೀರ್ಪು ನನ್ನ ಪರವಾಗಿ ಬಂತು. ಆಗ ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕು ಆಸ್ಪತ್ರೆಗೆ ನಿಯೋಜನೆ ಮಾಡಲಾಯಿತು. ಪುನಃ ಡಿಸೆಂಬರ್ ತಿಂಗಳಲ್ಲಿ ಕೆಎಟಿ ಮೊರೆ ಹೋದೆ. 2020ರ ಜನವರಿಯಲ್ಲಿ ತೀರ್ಪು ಬಂದಿದ್ದು, ಉನ್ನತ ಅಧಿಕಾರಿಗಳು ನನಗೆ ಇಲ್ಲಿಯವರೆಗೂ ಜಿಲ್ಲಾ ಮಟ್ಟದ ಹುದ್ದೆ ತೋರಿಸಿಲ್ಲ. ಎರಡು ಬಾರಿ ಕೋರ್ಟ್ ನಲ್ಲಿ ತೀರ್ಪು ಬಂದಿದೆ. ಅದರ ಪ್ರಕಾರ ನನಗೆ ಪೋಸ್ಟಿಂಗ್ ಕೊಟ್ಟಿಲ್ಲ. ಹಣ ನೀಡದೇ ಇದ್ದರೆ ಪೋಸ್ಟಿಂಗ್ ನೀಡುವುದಿಲ್ಲ. ಅಧಿಕಾರಿಗಳ ಕಾಟಕ್ಕೆ ಬೇಸತ್ತು ಜೀವನೋಪಾಯಕ್ಕಾಗಿ ಆಟೋ ಓಡಿಸುತ್ತಿದ್ದೇನೆ. 24 ವರ್ಷ ಸೇವೆ ಸಲ್ಲಿಸಿದ್ದೇನೆ. 15 ತಿಂಗಳ ವೇತನ ನೀಡಿಲ್ಲ. ನನಗೆ ಜಿಲ್ಲಾ ಮಟ್ಟದ ಹುದ್ದೆ ನೀಡಬೇಕು. ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆಯಡಿ ಕೋರ್ಟ್‌ಗೆ ಮೊರೆ ಹೋಗಿದ್ದೇನೆ ಎಂದರು.

# ರಾಣೇಬೆನ್ನೂರು : ಗುರು ಪರಂಪರೆ ಭಾರತದಲ್ಲಿ ಮಾತ್ರ ಸಾಧ್ಯ



**ಪ್ರಧಾನ ಅರ್ಚಕ ಸಂತೋಷ ಪೂಜಾರ**

ರಾಣೇಬೆನ್ನೂರು, ಸೆ.7- ಭಾರತದ ನೆಲದಲ್ಲಿ ಗುರು ಪರಂಪರೆ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಈ ಪರಂಪರೆ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡಲು ಸಹಕಾರಿಯಾಗಲಿದೆ ಎಂದು ದೇವರಗುಡ್ಡ ಮಾಲತೇಶ ದೇವಸ್ಥಾನದ ಪ್ರಧಾನ ಅರ್ಚಕ ಸಂತೋಷ ಭಟ್ ಪೂಜಾರ್ ಹೇಳಿದರು.

ಅವರು ದೇವಸ್ಥಾನದ ಆವರಣದಲ್ಲಿ ಶಿಕ್ಷಕರ ದಿನಾಚರಣೆಯ ನಿಮಿತ್ತ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡುತ್ತಿದ್ದರು. ಎಲ್ಲರ ಜೀವನದ ಪ್ರತಿಯೊಂದು ಹಂತದಲ್ಲಿ ಗುರುಗಳು ತಂದೆ, ತಾಯಿ, ಅಣ್ಣ, ತಮ್ಮ ಮತ್ತು ಸ್ನೇಹಿತ ಹೀಗೆ ಹಲವಾರು ರೂಪದಲ್ಲಿದ್ದು ಮಕ್ಕಳಲ್ಲಿ ಸಾಮಾಜಿಕ ಜ್ಞಾನವನ್ನು ತುಂಬುತ್ತಾರೆ. ಇದು ಭಾರತದಲ್ಲಿ ಮಾತ್ರ ಸಾಧ್ಯ ಎಂದರು.

ಅಗಡಿ ಆನಂದ ವನದ ಗುರುದತ್ತಮೂರ್ತಿ ಚಕ್ರವರ್ತಿಸ್ವಾಮಿ ಮಾತನಾಡಿ, ಯಾವುದೇ ಕೆಲಸ ಮಾಡುವ ಮೊದಲು ಗುರು ಕೃಪೆ ಪಡೆದರೆ ಆ ಕೆಲಸ ಯಶಸ್ಸು ಪಡೆಯಲಿದೆ ಎಂದು ಹೇಳಿದರು.

ತಾಲ್ಲೂಕಿನ ವಿವಿಧ ಗ್ರಾಮಗಳ ಹದಿನೈದು ಶಿಕ್ಷಕರನ್ನು ಸನ್ಮಾನಿಸಲಾದ ಈ ಕಾರ್ಯಕ್ರಮದಲ್ಲಿ ಭಂಡಾರದ ಗುರು ಮಲ್ಲಪ್ಪಯ್ಯ ಒಡೆಯರ್, ಗ್ರಾಮದ ಗಣ್ಯರಾದ ನಿಂಗಪ್ಪ ಮುದ್ದಿ, ಹನುಮಂತಪ್ಪ ನಾಯ್ಕರ್, ಪಕ್ಕೀರಪ್ಪ ಐಗಳ, ನಾಗರಾಜ ಸಂಶಿ, ಪ್ರಕಾಶ ಬಳ್ಳಾರಿ, ಸಿದ್ದಪ್ಪ ಬಾತಿ, ಗಿರೀಶ್ ಬಾತಿ, ದಿಳ್ಳೆಪ್ಪ ಐಗಳ್ ಮತ್ತಿತರರಿದ್ದರು.

# ರೈಲ್ವೆ ಮೇಲ್ಸೇತುವೆಗೆ ಸಿದ್ಧಗಂಗಾ ಶ್ರೀ ಹೆಸರಿಡಿ



ದಾವಣಗೆರೆ, ಸೆ.7 - ದೇವರಾಜ ಅರಸು ಬಡಾವಣೆಯಲ್ಲಿನ ದೂಡಾ ಕಚೇರಿ ಎದುರು ಹಾದು ಹೋಗಿರುವ ರೈಲ್ವೆ ಮೇಲ್ಸೇತುವೆಗೆ ತುಮಕೂರಿನ ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ. ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ ಅವರ ಹೆಸರನ್ನು ನಾಮಕರಣ ಮಾಡಬೇಕೆಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಘಟಕ ಆಗ್ರಹಿಸಿದೆ.

ಡಾ. ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿಯವರು ಎಲ್ಲಾ ಸಮಾಜದವರನ್ನು ಅಪ್ಪಿಕೊಂಡು ಎಲ್ಲಾ ವರ್ಗ, ಜಾತಿಯ ವಿದ್ಯಾರ್ಥಿಗಳಿಗೆ ಜ್ಞಾನ, ಅನ್ನ ದಾಸೋಹ ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತಂದಿದ್ದಾರೆ. ಹೀಗಾಗಿ ಈ ಸ್ವಾಮೀಜಿಯವರನ್ನು ಸ್ಮರಿಸುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಈ ರೈಲ್ವೆ ಮೇಲ್ಸೇತುವೆಗೆ ಶ್ರೀಗಳ ಹೆಸರನ್ನು ನಾಮಕರಣ ಮಾಡಬೇಕೆಂದು ಘಟಕದ ಅಧ್ಯಕ್ಷ ಜಿ. ಶಿವಯೋಗಪ್ಪ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಯಾರನ್ನೂ ದ್ವೇಷಿಸದೇ ಎಲ್ಲಾ ವರ್ಗದ ಜನರನ್ನು ಪ್ರೀತಿಸುತ್ತಿದ್ದ ಸಿದ್ಧಗಂಗಾ ಶ್ರೀಗಳ ಹೆಸರನ್ನು ರೈಲ್ವೇ ಮೇಲ್ಸೇತುವೆಗೆ ಇಡಬೇಕೆಂದು ಒತ್ತಾಯಿಸಿ, ಇಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಡಾ.ಶಾಮನೂರು ಶಿವಶಂಕರಪ್ಪ, ಎಸ್.ಎ.ರವೀಂದ್ರನಾಥ್, ನಗರ ಪಾಲಿಕೆ ಮೇಯರ್ ಬಿ.ಜಿ.ಅಜಯಕುಮಾರ್ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಸಂಘದ ಎಚ್.ವಿ. ಹಾಲೇಶ್, ದಾಕ್ಷಾಯಣಮ್ಮ, ಟಿ.ಎಂ. ಮಲ್ಲಿಕಾರ್ಜುನ, ರಾಜೇಶ್ವರಿ ಮತ್ತಿತರರು ಇದ್ದರು.

# 4 ಲಕ್ಷ ದಾಟಿದ ಕೊರೊನಾ

ಬೆಂಗಳೂರು, ಸೆ. 7 – ರಾಜ್ಯದಲ್ಲಿ ಒಟ್ಟು ಕೊರೊನಾ ಸೋಂಕಿತರ ಸಂಖ್ಯೆ ಸೋಮವಾರದಂದು 4 ಲಕ್ಷದ ಗಡಿ ದಾಟಿದೆ. ಒಂದೇ ದಿನದಲ್ಲಿ 5,773 ಸೋಂಕು ಪ್ರಕರಣಗಳು ಕಾಣಿಸಿಕೊಂಡಿದ್ದು, 141 ಸಾವುಗಳು ಸಂಭವಿಸಿವೆ ಎಂದು ರಾಜ್ಯ ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಇದೇ ದಿನದಂದು 8,015 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಗುಣವಾದವರ ಸಂಖ್ಯೆ ಮೂರು ಲಕ್ಷದ ಗಡಿ ದಾಟಿದೆ. ರಾಜ್ಯದಲ್ಲಿ ಸೋಮವಾರ ಪತ್ತೆಯಾದ ಒಟ್ಟು 5,773 ಸೋಂಕಿತರಲ್ಲಿ ಬೆಂಗಳೂರು ನಗರದವರೇ 2,942 ಸಂಖ್ಯೆಯಷ್ಟಿದ್ದಾರೆ. ಸೋಮವಾರ ಸಂಜೆಯ ವೇಳೆಗೆ ಒಟ್ಟು 4,04,324 ಸೋಂಕಿತರು ಪತ್ತೆಯಾಗಿದ್ದಾರೆ. ಇವರಲ್ಲಿ 6,534 ಜನರು ಮರಣ ಹೊಂದಿದ್ದಾರೆ ಹಾಗೂ 3,00,770 ಜನರು ಗುಣವಾಗಿ ಬಿಡುಗಡೆಯಾಗಿದ್ದಾರೆ.

ರಾಜ್ಯದಲ್ಲೀಗ 97,001 ಸಕ್ರಿಯ ಸೋಂಕು ಪ್ರಕರಣಗಳಿವೆ. ಇವರಲ್ಲಿ 794 ಜನರು ಐಸಿಯುನಲ್ಲಿದ್ದಾರೆ.

# ಹರಿಹರ ನಗರಕ್ಕೆ 10, 11 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ


ಹರಿಹರ, ಸೆ.7- ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ ಕೈಗೊಂಡಿರುವ (24x7) ಬೃಹತ್ ನೀರು ಸರಬರಾಜು ಕಾಮಗಾರಿಗೆ ಸಂಬಂಧಿಸಿದಂತೆ ಹೊಸದಾಗಿ ಹಳೇ ಪಂಪ್ ಹೌಸ್ ಹತ್ತಿರ ನಿರ್ಮಿಸಿದ ನೀರು ಶುದ್ಧೀಕರಣ ಘಟಕದ ಹತ್ತಿರ (ಡಬ್ಲ್ಯೂ.ಟಿ.ಪಿ) ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸುವುದು ಮತ್ತು ಇತರೆ ವಿದ್ಯುತ್ ಕಾಮ ಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಹರಿಹರ ನಗರದ ಸಾರ್ವಜನಿಕರಿಗೆ ಇದೇ ದಿನಾಂಕ 10 ಮತ್ತು 11 ರಂದು ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹರಿಹರ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.



**ಮಳೆಗೆ ನೆಲಕಚ್ಚಿದ ಮೆಕ್ಕೆಜೋಳ**

ದಾವಣಗೆರೆ, ಸೆ.7- ತಾಲ್ಲೂಕಿನ ಹೆಮ್ಮನಬೇತೂರು ಗ್ರಾಮದಲ್ಲಿ ನಿನ್ನೆ ಸುರಿದ ಭಾರೀ ಮಳೆಗೆ ಬಸವರಾಜಪ್ಪ ಮತ್ತು ರುದ್ರಪ್ಪ ಎಂಬುವರ ಎರಡು ಎಕರೆ ಜಮೀನಿನಲ್ಲಿ ಮೆಕ್ಕೆಜೋಳ ಸಂಪೂರ್ಣವಾಗಿ ನೆಲಕಚ್ಚಿ ಹಾನಿಗೀಡಾಗಿದೆ. ಸಂಬಂಧಿಸಿದ ಯಾವುದೇ ಇಲಾಖೆ ಅಧಿಕಾರಿಗಳು ಪರಿಶೀಲನೆಗೆ ಆಗಮಿಸಿಲ್ಲ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಹೃದಯಪೂರ್ವಕ ಅಭಿನಂದನೆಗಳು**



ದಾವಣಗೆರೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯರಾಗಿ ನೇಮಕಗೊಂಡಿರುವ

**ಎಸ್. ಪರಮೇಶ್ವರಪ್ಪ ಬಣಕಾರ**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

◆ ಬಸವರಾಜು ಗಾಡಿ ◆ ರಮೇಶ್ ಎಂ.ಪಿ. ◆ ನಾಗರಾಜು ಹೆಚ್. ಕಲ್ಲಳ್ಳಿ ◆ ರಾಮಣ್ಣ ಟಿ.ಬಿ. ◆ ಕೆ. ರಾಜು (ಡೆವಲಪರ್ಸ್) ◆ ವಿರೂಪಾಕ್ಷಪ್ಪ ರೈಸ್ ಮಿಲ್ ◆ ವೀರಣ್ಣ ಗಾಡಿ ◆ ಜಿತೇಂದ್ರ ಗಾಡಿ ◆ ಶಿವಯೋಗ ಸ್ವಾಮಿ

# ಶಿಕ್ಷಕರಿಗೂ ವಾರಿಯರ್ಸ್ ಎಂದು ಪರಿಗಣಿಸಲು ಸರ್ಕಾರಕ್ಕೆ ಮನವಿ

ರಾಣೇಬೆನ್ನೂರು, ಸೆ.7 - ಸೇವೆಯಲ್ಲಿರುವ ಶಿಕ್ಷಕರನ್ನು ವಾರಿಯರ್ಸ್ ಎಂದು ಪರಿಗಣಿಸಬೇಕು. ಕೋವಿಡ್‌ನಿಂದ ನಿಧನರಾದವರಿಗೆ ಇತರರಿಗೆ ಕೊಡುವ ಧನಸಹಾಯ ಕೊಡುವಂತೆ ಮುಖ್ಯಮಂತ್ರಿಗಳಿಗೆ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದಾಗಿ ಶಾಸಕ ಅರುಣಕುಮಾರ ಗುತ್ತೂರ ಹೇಳಿದರು.

ಇಲ್ಲಿನ ಶಿಕ್ಷಕರ ಸಹಕಾರಿ ಸಂಘದ ಸಭಾ ಭವನದಲ್ಲಿ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ, ಶಿಕ್ಷಕರು ಮಾಡಿದ ಮನವಿಗಳನ್ನು ಪ್ರಸ್ತಾಪಿಸಿ ಅವರು ಮಾತನಾಡುತ್ತಿದ್ದರು.

ಈಗಿರುವ ಈ ಭವನ ಚಿಕ್ಕದಾಗಿದ್ದು, ನಗರದ ನೂತನ ಬಡಾವಣೆಯಲ್ಲಿ 20 ಗುಂಟೆ ನಿವೇಶನ ಮತ್ತು ಸದರಿ ನಿವೇಶನದಲ್ಲಿ ಸುಸಜ್ಜಿತ ಕಟ್ಟಡವನ್ನೂ ಸಹ ಕಟ್ಟಿಸಿ ಮುಂದಿನ ಶಿಕ್ಷಕರ ದಿನಾಚರಣೆ ಒಳಗಾಗಿ ಕೊಡುವುದಾಗಿ



ಶಾಸಕರು ಭರವಸೆ ನೀಡಿದರು.

ತಪ್ಪಿತಸ್ಥರನ್ನು ಸರಿದಾರಿಗೆ ತರುವ ಶಿಕ್ಷಕರು ತಪ್ಪುಗಳನ್ನು ಮಾಡಬಾರದು ಎಂದ ಶಾಸಕರು, ಉತ್ತಮ ನಾಗರಿಕರನ್ನು ತಯಾರು ಮಾಡಿ ಬಲಿಷ್ಠ ರಾಷ್ಟ್ರ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುವ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದುದು ಎಂದರು.

ಜಿ.ಪಂ ಸದಸ್ಯರಾದ ಏಕನಾಥ್ ಭಾನುವಳ್ಳಿ, ಶಿವಾನಂದ ಕನ್ನಪ್ಪಳವರ, ಮಂಗಳಗೌರಿ ಪೂಜಾರ, ತಾಪಂ ಅಧ್ಯಕ್ಷೆ ಗೀತಾ ಲಮಾಣಿ, ಉಪಾಧ್ಯಕ್ಷೆ ಕಸ್ತೂರಿ ಹೊನ್ನಾಳಿ, ಎಪಿಎಂಸಿ ಅಧ್ಯಕ್ಷ ಬಸವರಾಜ ಸವಣೂರ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ, ತಹಶೀಲ್ದಾರ್ ಬಸನಗೌಡ ಕೋಟೂರ, ಇಲಾಖೆ ಅಧಿಕಾರಿ ಶ್ರೀಧರ, ಈಓ ಎಸ್.ಎಂ.ಕಾಂಬಳೆ ಮತ್ತಿತರಿದ್ದರು.

### ಶಾಸಕರ ಪಗಾರ...

ತಮಗೆ ಪ್ರತಿ ವರ್ಷ ಸುಮಾರು 15 ರಿಂದ 20 ಲಕ್ಷದಷ್ಟು ಸರ್ಕಾರದ ಪಗಾರ ಬರುತ್ತೆ. ಅದರಲ್ಲಿಯೇ ತೊಂದರೆಯಲ್ಲಿರುವವರಿಗೆ ಸಹಾಯ ಮಾಡುವ ಬಯಕೆ ನನ್ನದಾಗಿದೆ. ಕಾರಣ ನಿವೃತ್ತರಾದವರು ಅಥವಾ ನಿಧನರಾದವರ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಇದ್ದವರು ನನ್ನನ್ನ ಸಂಪರ್ಕಿಸಿರಿ. ಸರ್ಕಾರ ಕೊಡುವ ಪಗಾರದಲ್ಲಿ ಸಹಾಯ ಮಾಡುತ್ತೇನೆ ಎಂದು ಶಾಸಕ ಅರುಣಕುಮಾರ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು.

### ಶಿಕ್ಷಕಗೆ ಹೊಡೆದ ಶಾಸಕ !

ತಾವು ಶಾಲೆಯಲ್ಲಿ ಅಭ್ಯಾಸ ಮಾಡುವದಕ್ಕಿಂತ ಏನಾದರು ಕೆಲಸ ಮಾಡುವ ಆಸಕ್ತಿ ಹೆಚ್ಚು ಇತ್ತು, ಹಾಗಾಗಿ ಆಗಾಗ ಶಾಲೆ ತಪ್ಪಿಸುತ್ತಿದ್ದ ನನಗೆ ಶಿಕ್ಷಕರಿಂದ ಭಡಿ ಏಟುಗಳು ಬೀಳುತ್ತಿದ್ದವು. ಆ ಏಟುಗಳ ಪ್ರತಿಕಾರಕ್ಕೆ ಸಿಟ್ಟಿನಿಂದ ಇಟ್ಟಿಗೆ ತುಂಡಿನಿಂದ ಶಿಕ್ಷಕರಿಗೆ ಹೊಡೆದಿದ್ದೆ. ಆ ತಪ್ಪಿಗಾಗಿ ಅಜ್ಜನಿಂದ ಹೊಡೆಸಿಕೊಂಡು 8 ದಿನಗಳ ಕಾಲ ಜ್ವರದಿಂದ ಬಳಲಿದ್ದೆ. ಆಗ ನಮ್ಮ ತಪ್ಪುಗಳಿಗೆ ಮನೆಯ ಹಿರಿಯರಿಂದ ಶಿಕ್ಷೆ ಕಾದಿತ್ತು ಎಂದು ಶಾಸಕ ಅರುಣಕುಮಾರ ಪ್ರಾಥಮಿಕ ಶಾಲೆಗೆ ಹೋಗುವಾಗ ನಡೆದ ಘಟನೆಯನ್ನು ವಿವರಿಸಿದರು.

# ನೂತನ ಶಿಕ್ಷಣ ನೀತಿ ಜಾರಿಗೆ ತರುವುದಿಲ್ಲ : ಪಶ್ಚಿಮ ಬಂಗಾಳ

ಕೊಲ್ಕೊತಾ, ಸೆ. 7 – ನೂತನ ಶಿಕ್ಷಣ ನೀತಿ ಒಕ್ಕೂಟ ವ್ಯವಸ್ಥೆಯನ್ನು ಕಡೆಗಣಿಸಿದೆ ಎಂದು ಹೇಳಿರುವ ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಪಾರ್ಥ ಚಟರ್ಜಿ, ಈ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರುವುದಿಲ್ಲ ಎಂದಿದ್ದಾರೆ.

ನೂತನ ಶಿಕ್ಷಣ ನೀತಿ ಕುರಿತು ಆಯೋಜಿಸಲಾಗಿದ್ದ ರಾಜ್ಯಪಾಲರ ಸಮಾವೇಶದಲ್ಲಿ ಪಾಲ್ಗೊಂಡು ನಂತರ ಮಾತನಾಡುತ್ತಿದ್ದ ಅವರು, ಸದ್ಯಕ್ಕೆ ರಾಜ್ಯದಲ್ಲಿ ಈ ನೀತಿಯನ್ನು ಜಾರಿಗೆ ತರುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ.

ಸಂಬಂಧಿಸಿದ ಎಲ್ಲರ ಜೊತೆಗೆ ಶಿಕ್ಷಣ ನೀತಿ ಕುರಿತು ಚರ್ಚೆಯಾಗಬೇಕಿದೆ. ನೀತಿಯ ಕೆಲ ಅಂಶಗಳ ಬಗ್ಗೆ ನಮ್ಮ ಆಕ್ಷೇಪಗಳಿರುವುದನ್ನು ತಿಳಿಸಿದ್ದೇವೆ. ಬಂಗಾಳವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಈ ನೀತಿ ರೂಪಿಸಲಾಗಿದೆ ಎಂದವರು ಹೇಳಿದ್ದಾರೆ.

ರಾಜ್ಯ ಪ್ರಸಕ್ತ ಕೊರೊನಾ ಪರಿಸ್ಥಿತಿಯ ಕಡೆಗೆ ಗಮನ ಹರಿಸುತ್ತಿದೆ. ಹೀಗಾಗಿ ನೂತನ ಶಿಕ್ಷಣ ನೀತಿ ಜಾರಿಯ ಬಗ್ಗೆ ಸದ್ಯಕ್ಕೆ ಮುಂದಾಗುವುದಿಲ್ಲ. ರಾಷ್ಟ್ರ ಮಟ್ಟದಲ್ಲಿ ಪದವಿ ಪೂರ್ವ ಶಿಕ್ಷಣಕ್ಕೆ ಏಕರೂಪದ ಪರೀಕ್ಷೆಗೆ ನಮ್ಮ ವಿರೋಧವಿದೆ. ಎಂಫಿಲ್ ರದ್ದತಿ ಸೇರಿದಂತೆ ಹಲವು ವಿಷಯಗಳಿಗೆ ಆಕ್ಷೇಪವಿದೆ ಎಂದವರು ಹೇಳಿದ್ದಾರೆ.

# ಕೋರ್ಟ್‌ಗಳಲ್ಲಿ ವಕೀಲರು ನೇರವಾಗಿ ಕಡತ ಸಲ್ಲಿಸಲು ಒತ್ತಾಯ

**ಕೊರೊನಾಗೆ ಮೊದಲಿನ ಸ್ಥಿತಿಗೆ ನ್ಯಾಯಾಲಯಗಳು ಮರಳಲು ವಕೀಲರ ಮಂಡಳಿ ಮನವಿ**

ಬೆಂಗಳೂರು, ಸೆ. 7 – ಲಾಕ್‌ಡೌನ್‌ಗೆ ಮೊದಲಿದ್ದ ರೀತಿಯಲ್ಲಿ ನೇರವಾಗಿ ಪ್ರಕರಣಗಳ ಕಡತಗಳನ್ನು ಸಲ್ಲಿಸಲು ಅನುಮತಿ ನೀಡುವಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ ಓಕಾ ಅವರಿಗೆ ರಾಜ್ಯ ವಕೀಲರ ಮಂಡಳಿ ಒತ್ತಾಯಿಸಿದೆ.

ರಾಜ್ಯದ ನ್ಯಾಯಾಲಯಗಳಲ್ಲಿ ಸಾಮಾನ್ಯ ಪರಿಸ್ಥಿತಿ ನೆಲೆಗೊಳಿಸುವುದೂ ಸೇರಿದಂತೆ ಹಲವಾರು ನಿರ್ಣಯಗಳನ್ನು ಮಂಡಳಿಯ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ.

ಲಾಕ್‌ಡೌನ್‌ಗೆ ಮುಂಚೆ ವಕೀಲರು ನೇರವಾಗಿ ನ್ಯಾಯಾಲಯದ ಎದುರು ಹಾಜರಾಗಿ ಕಡತಗಳನ್ನು ಸಲ್ಲಿಸುತ್ತಿದ್ದ ರೀತಿಯಲ್ಲೇ ಈಗಲೂ ಕಡತಗಳನ್ನು ಸಲ್ಲಿಸಲು ಅನುಮತಿ ನೀಡಬೇಕೆಂದು ಮುಖ್ಯ ನ್ಯಾಯಮೂರ್ತಿ ಬಳಿ ಮನವಿ ಮಾಡಿಕೊಳ್ಳಲು ಮಂಡಳಿ ನಿರ್ಧರಿಸಿರುವುದಾಗಿ, ಸಭೆಯ ನಿರ್ಣಯದಲ್ಲಿ ಹೇಳಲಾಗಿದೆ.

ಆನ್‌ಲೈನ್ ಮೂಲಕ ಮಾತ್ರ ನ್ಯಾಯಾಲಯಗಳು ನಡೆಯುತ್ತಿರುವುದರಿಂದ ಹಾಗೂ ಭೌತಿಕ ಹಾಜರಾತಿಯಲ್ಲಿ ಪೂರ್ಣ ಪ್ರಮಾಣದ ಕಾರ್ಯ ನಿರ್ವಹಣೆ ನಡೆಯದ ಕಾರಣ ಹಲವಾರು ವಕೀಲರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮಂಡಳಿ ಹೇಳಿದೆ.

ಇದರಿಂದಾಗಿ ವಕೀಲರು ಹಾಗೂ ಕಕ್ಷಿದಾರರೂ ಸಹ ಸಮಸ್ಯೆ ಹಾಗೂ ಸಂಕಷ್ಟಗಳನ್ನು ಎದುರಿಸುವಂತಾಗಿದೆ ಎಂದು ಹೇಳಿರುವ ವಕೀಲರ ಒಕ್ಕೂಟ, ತಮ್ಮ ವಾಹನಗಳನ್ನು ನ್ಯಾಯಾಲಯಗಳ ಆವರಣದಲ್ಲಿ ತರಲು ಅವಕಾಶ ನೀಡಬೇಕು ಎಂದೂ ಸಹ ಕೇಳಿದೆ.

ಸುರಕ್ಷತಾ ಕ್ರಮಗಳೊಂದಿಗೆ ನ್ಯಾಯಾಲಯಗಳಲ್ಲಿ ಟೈಪಿಸ್ಟ್, ಕೆಫೆಟೇರಿಯಾ ಹಾಗೂ ನೋಟರಿಗಳು ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕಿದೆ ಎಂದೂ ಸಹ ಅಭಿಪ್ರಾಯ ಪಡಲಾಗಿದೆ.

# ಸೆ.19, 20ಕ್ಕೆ ಜಿಲ್ಲೆಯಲ್ಲಿ ಇ-ಲೋಕ್ ಅದಾಲತ್

**(3ನೇ ಪುಟದಿಂದ)** ಅದರ ತೀರ್ಪನ್ನು ಜಾರಿಗೊಳಿಸಬಹುದೆಂದರು. ಪಕ್ಷಗಾರರು ಸ್ವ ಇಚ್ಛೆಯಿಂದ ರಾಜಿಗೆ ಒಪ್ಪಿಕೊಂಡರೆ ಮಾತ್ರ ಲೋಕ್ ಅದಾಲತ್‌ನಲ್ಲಿ ಪ್ರಕರಣಗಳು ತೀರ್ಮಾನವಾಗುತ್ತದೆ. ಒಂದು ವೇಳೆ ಉಭಯ ಪಕ್ಷಗಾರರಿಗೆ ಒಪ್ಪಿಗೆ ಇರದಿದ್ದರೆ ಯಾವುದೇ ತೀರ್ಮಾನವಾಗುವುದಿಲ್ಲ. ಅಂತಹ ಪ್ರಕರಣಗಳನ್ನು ಪುನಃ ನ್ಯಾಯಾಲಯದಲ್ಲಿಯೇ ಕಾನೂನು ಬದ್ದವಾಗಿ ತೀರ್ಮಾನ ಮಾಡಲಾಗುತ್ತದೆ. ಆ ರೀತಿ ರಾಜೀ ಮಾಡಿಕೊಂಡ ಪ್ರಕರಣಗಳು ನ್ಯಾಯಯುತವಾಗಿ ಮತ್ತು ಕಾನೂನುಬದ್ಧವಾಗಿ ಇದ್ದರೆ ಮಾತ್ರ ಲೋಕ್ ಅದಾಲತ್ ನಲ್ಲಿ ಇತ್ಯರ್ಥ ಮಾಡಲಾಗುತ್ತದೆ ಎಂದರು.

ಈ ಅದಾಲತ್ ನಲ್ಲಿ ವಾಹನ ಅಪಘಾತಕ್ಕೆ ಸಂಬಂಧಿಸಿದ ಪ್ರಕರಣ, ಹಣ ವಾಪಸ್ಸಾತಿ ಪ್ರಕರಣ, ಬಾಡಿಗೆದಾರ ಮತ್ತು ಮಾಲೀಕರ ನಡುವಿನ ದಾವೆಗಳು, ಇತರೆ ಸಿವಿಲ್ ವ್ಯಾಜ್ಯಗಳು, ರಾಜೀ ಮಾಡಿಕೊಳ್ಳಬಹುದಾದ ಕ್ರಿಮಿನಲ್ ಕೇಸುಗಳು, ಚೆಕ್ ಬೌನ್ಸ್, ಕೌಟುಂಬಿಕ ಕಲಹಗಳು (ವಿಚ್ಛೇದನ ಹೊರತುಪಡಿಸಿ) ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು. ಈ ಅದಾಲತ್ ನಲ್ಲಿ ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಪ್ರಕರಣಗಳ ಸಂಪೂರ್ಣ ನ್ಯಾಯಾಲಯಗಳ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ನ್ಯಾಯಾಲಯಗಳ ಶುಲ್ಕ ಕೊಡಬೇಕಿಲ್ಲ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ ವಿಳಾಸ disadavangere@gmail.com ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅವರ ದೂರವಾಣಿ ಸಂಖ್ಯೆ 9449624370 ಅನ್ನು ಸಂಪರ್ಕಿಸುವಂತೆ ವಿನಂತಿಸಿದರು.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಾಬಪ್ಪ ಮಾತನಾಡಿ, ಈ ಅದಾಲತ್ ಮೂಲಕ ಜಿಲ್ಲೆಯಲ್ಲಿನ ಇತ್ಯರ್ಥಪಡಿಸಬಹುದಾದ ಸುಮಾರು 2 ಸಾವಿರ ವಿವಿಧ ಪ್ರಕರಣಗಳ ರಾಜೀ ಪಡಿಸುವ ಗುರಿ ಹೊಂದಲಾಗಿದೆ ಎಂದ ಅವರು, ಕೋವಿಡ್-19 ಸಾಂಕ್ರಾಮಿಕ ಕಾಯಿಲೆ ಹಿನ್ನೆಲೆಯಲ್ಲಿ ನ್ಯಾಯಾಲಯದಲ್ಲಿ ಕಕ್ಷಿದಾರರು ಸಾಕ್ಷಿಗಳನ್ನು ಒದಗಿಸಲು ತೊಂದರೆಯಾಗುತ್ತಿರುವುದರಿಂದ ನಗರದ ಹೈಸ್ಕೂಲ್ ಮೈದಾನದ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ನಾಲ್ಕು ರಿಮೋಟ್ ಕೊಠಡಿಗಳನ್ನು ತೆರೆಯಲಾಗಿದ್ದು, ಸಾಕ್ಷಿದಾರರು ತಮ್ಮ ಹೇಳಿಕೆಗಳನ್ನು ದಾಖಲಿಸಬಹುದು. ಅಲ್ಲಿ ಕಂಪ್ಯೂಟರ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಗೋಷ್ಠಿಯಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಎಚ್. ಅರುಣ್ ಕುಮಾರ್, ಮುಖ್ಯ ಆಡಳಿತಾಧಿಕಾರಿ ಶ್ರೀಧರ್, ಆಡಳಿತ ಶಿರಸ್ತೇದಾರ್ ಮಾರುತಿ ಇದ್ದರು.

# ದಸರಾ ಬಗ್ಗೆ ಇಂದು ತೀರ್ಮಾನ

**(3ನೇ ಪುಟದಿಂದ)** ಅವಕಾಶ ಮಾಡೋಣ ಎಂಬ ವಾದವೂ ಕೇಳಿ ಬಂದಿದೆ. ಆದರೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ನೀಡುವ ವರದಿ, ಸ್ಥಳೀಯ ಜನ ಪ್ರತಿನಿಧಿಗಳು ನೀಡುವ ಸಲಹೆಗಳನ್ನು ಆಧರಿಸಿ, ಮುಖ್ಯಮಂತ್ರಿಯವರು ತೀರ್ಮಾನ ಕೈಗೊಳ್ಳಲಿದ್ದಾರೆ.

# ಆಂಟಿಬಡಿಗಳಿಂದ ಗ್ಯಾರಂಟಿ ಇಲ್ಲ

**(1ನೇ ಪುಟದಿಂದ)** ವ್ಯಕ್ತಿಗಳಲ್ಲಿನ ಸೋಂಕು ಯಾವ ಹಂತದಲ್ಲಿದೆ ಎಂಬ ಬಗ್ಗೆ ಯಾವುದೇ ಸುಳಿವು ಸಿಗುವುದಿಲ್ಲ ಎಂದಿದ್ದಾರೆ.

ದೇಹದಲ್ಲಿ ಎರಡು ರೀತಿಯ ಆಂಟಿಬಡಿಗಳಿರುತ್ತವೆ. ಕೆಲವು ನ್ಯೂಟ್ರಲೈಸಿಂಗ್ ಆಂಟಿಬಡಿಗಳು (ಎನ್‌ಎಬಿಎಸ್) ಹಾಗೂ ಕೆಲವು ಸಾಮಾನ್ಯ ಆಂಟಿಬಡಿ ಆಗಿರುತ್ತವೆ. ಎನ್‌ಎಬಿಎಸ್‌ಗಳು ಕೊರೊನಾ ಹರಡುವುದನ್ನು ತಡೆಯುತ್ತವೆ. ಉಳಿದಂತೆ ಸಾಮಾನ್ಯ ಆಂಟಿಬಡಿಗಳು ರೋಗ ಬಂದಿರುವುದನ್ನಷ್ಟೇ ಸೂಚಿಸುತ್ತವೆ ಎಂದು ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಎಜುಕೇಷನ್ ಹಾಗೂ ರೀಸರ್ಚ್ (ಐಐಎಸ್‌ಇಆರ್)ನ ವಿನೀತಾ ಬಾಲ್ ಹೇಳಿದ್ದಾರೆ.

ಎನ್‌ಎಬಿಎಸ್‌ಗಳು ಸಾಕಷ್ಟಿದ್ದರೆ ಹಾಗೂ ಬ ಹಳ ಕಾಲ ಇದ್ದರೆ ಮಾತ್ರ ವೈರಸ್ ಮತ್ತೊಮ್ಮೆ ಬರುವುದನ್ನು ತಡೆಯಬಹುದು ಎಂದು ಭಾವಿಸಬಹುದಾಗಿದೆ ಎಂದು ಬಾಲ್ ಹೇಳಿದ್ದಾರೆ.

ಎಷ್ಟು ಹಂತದ ಎನ್‌ಎಬಿಎಸ್ ಇದ್ದರೆ ರೋಗ ತಡೆಯಲು ಸಾಧ್ಯ ಎಂಬುದರ ಬಗ್ಗೆ ಒಮ್ಮತವಿಲ್ಲ. ಪ್ಲಾಸ್ಮಾ ಥೆರಪಿಯ ಉಪಯುಕ್ತತೆಯೂ ಸ್ಪಷ್ಟವಾಗಿಲ್ಲ ಎಂದೂ ಅವರು ತಿಳಿಸಿದ್ದಾರೆ.

ದೇಶದಲ್ಲಿ ಇತ್ತೀಚೆಗೆ ಹಲವಾರು ಸೆರೋ ಸರ್ವೇಗಳನ್ನು ನಡೆಸುವ ಮೂಲಕ ವ್ಯಕ್ತಿಗಳ ದೇಹದಲ್ಲಿರುವ ಆಂಟಿಬಡಿಗಳನ್ನು ಪತ್ತೆ ಮಾಡಲಾಗುತ್ತಿದೆ. ಆಂಟಿಬಡಿಗಳು ಇರುವ ವ್ಯಕ್ತಿಗಳ ಸಂಖ್ಯೆಯನ್ನು ಆಧರಿಸಿ ರೋಗ ಹರಡಿರುವ ಪ್ರಮಾಣವನ್ನು ಗುರುತಿಸಲಾಗುತ್ತಿದೆ.

ಇದುವರೆಗೂ ನಡೆಸಲಾಗಿರುವ ಕೊರೊನಾ ಟೆಸ್ಟ್‌ಗಳಲ್ಲಿ ಬಹುತೇಕವು ಪಾಸಿಟಿವ್ ಇಲ್ಲವೇ ನೆಗೆಟಿವ್ ಗುರುತಿಸುವ ಉದ್ದೇಶ ಮಾತ್ರ ಹೊಂದಿವೆ. ಆಂಟಿಬಡಿಗಳ ಹಂತ ಹಾಗೂ ಅದರಿಂದ ರೋಗದಿಂದ ರಕ್ಷಣೆ ದೊರೆಯುವ ಬಗ್ಗೆ ಅಧ್ಯಯನ ನಡೆದಿಲ್ಲ. ಹೀಗಾಗಿ ಆಂಟಿಬಡಿಗಳ ಕಾರಣದಿಂದ ರೋಗದಿಂದ ರಕ್ಷಣೆ ಸಿಗುವ ಬಗ್ಗೆ ಸ್ಪಷ್ಟವಾಗಿ ಹೇಳಲಾಗದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಈ ನಡುವೆ, ವಿಶ್ವದ ಹಲವೆಡೆಗಳಿಂದ ವ್ಯಕ್ತಿಗಳಿಗೆ ಎರಡನೇ ಬಾರಿಗೆ ಕೊರೊನಾ ಸೋಂಕು ಬಂದ ಪ್ರಕರಣಗಳು ವರದಿಯಾಗುತ್ತಿವೆ. ಇದರಿಂದಾಗಿ ಆಂಟಿಬಡಿಗಳ ಮೂಲಕ ಕೊರೊನಾದಿಂದ ರಕ್ಷಣೆ ಸಿಗಬಹುದು ಎಂಬ ಆಶಾಭಾವನೆಗೆ ಧಕ್ಕೆಯಾಗುತ್ತಿದೆ.

ಈ ಬಗ್ಗೆ ಹೆಚ್ಚಿನ ವಿವರ ನೀಡಿರುವ ವಿನೀತಾ ಬಾಲ್, ಮತ್ತೆ ಸೋಂಕು ಬಂದಿತು ಎಂಬ ಮಾತ್ರಕ್ಕೆ ವ್ಯಕ್ತಿಗಳು ಅಸ್ವಸ್ಥರಾಗುವುದಿಲ್ಲ ಎಂದಿದ್ದಾರೆ.

ಮೊದಲು ಸೋಂಕು ಬಂದ ವ್ಯಕ್ತಿಗಳಲ್ಲಿ ಆಂಟಿಬಡಿಗಳು ಇಲ್ಲವಾದರೂ ಸಹ, 'ರಕ್ಷಣಾತ್ಮಕ ರೋಗ ನಿರೋಧಕತೆ' ಇರುತ್ತದೆ. ಇದು ನಂತರದ ಮರು ಸೋಂಕು ಎದುರಿಸಲು ನೆರವಾಗುತ್ತದೆ. ಇದರಿಂದಾಗಿ ರೋಗದ ತೀವ್ರತೆ ಹಾಗೂ ಸಾವು ತಪ್ಪಿಸಲು ನೆರವಾಗುತ್ತದೆ ಎಂದವರು ಹೇಳಿದ್ದಾರೆ.

# ಹರಿಹರ : ಉದ್ಯೋಗಾವಕಾಶ ಕಲ್ಪಿಸಲು ಉಚಿತ ತರಬೇತಿಗೆ ಅರ್ಜಿ

ಹರಿಹರ, ಸೆ.7- ಇಲ್ಲಿನ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ, ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಮೂಲಕ ನಿರುದ್ಯೋಗಿ ಯುವಕ, ಯುವತಿಯರಿಗಾಗಿ ಉದ್ಯೋಗಾವಕಾಶ ಕಲ್ಪಿಸಲು ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ, ಐಟಿಐ, ಡಿಪ್ಲೋಮಾ ಹಾಗೂ ಬಿಇ ಪಾಸ್ ಆಗಿರುವ ಅಭ್ಯರ್ಥಿಗಳಿಗೆ 2 ತಿಂಗಳ ಅವಧಿಯ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 11 ಕೊನೆಯ ದಿನ. ವಿವರಕ್ಕೆ ಪ್ರಾಂಶುಪಾಲರು, ಜಿಟಿಟಿಸಿ 22 ಸಿ ಅಂಡ್ ಡಿ ಕೆಐಎಡಿಬಿ, ಇಂಡಸ್ಟ್ರಿಯಲ್ ಏರಿಯಾ ಹರ್ಲಾಪುರ ಕೆಎಸ್‌ಆರ್‌ಟಿಸಿ ಡಿಪೋ ಹತ್ತಿರ, ಹರಿಹರ, ಫೋ: 08192-243937, 7019600676 ಸಂಪರ್ಕಿಸಲು ತಿಳಿಸಿದ್ದಾರೆ.

# ಸಾಕ್ಷರತೆಯಲ್ಲಿ ಕೇರಳ ಪ್ರಥಮ, ಆಂಧ್ರ ಕೊನೆ

ನವದೆಹಲಿ, ಸೆ. 7 - ಶೇ.96.2ರಷ್ಟು ಸಾಕ್ಷರರನ್ನು ಹೊಂದಿರುವ ಕೇರಳ, ರಾಷ್ಟ್ರೀಯ ಅಂಕಿ ಅಂಶಗಳ ಕಚೇರಿ (ಎನ್‌ಎಸ್‌ಓ) ರೂಪಿಸಿರುವ ವರದಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಆಂಧ್ರ ಪ್ರದೇಶವು ಶೇ.66.4ರಷ್ಟು ಸಾಕ್ಷರತೆಯೊಂದಿಗೆ ಕೊನೆಯ ಸ್ಥಾನದಲ್ಲಿದೆ.



ರಾಷ್ಟ್ರೀಯ ಸಾಕ್ಷರತೆಯ ಸರಾಸರಿ ಶೇ. 77.7 ಆಗಿದೆ. ಕರ್ನಾಟಕ ಶೇ.77.2ರ ಸಾಕ್ಷರತೆಯೊಂದಿಗೆ ಸರಾಸರಿಗಿಂತ ಕೆಳ ಮಟ್ಟದಲ್ಲಿದೆ.

ಕೇರಳದ ನಂತರದ ಸ್ಥಾದನಲ್ಲಿರುವ ದೆಹಲಿ ಶೇ.88.7ರಷ್ಟು ಸಾಕ್ಷರರನ್ನು ಹೊಂದಿದೆ. ಉತ್ತರಾಖಂಡದಲ್ಲಿ ಶೇ.87.6ರಷ್ಟು ಸಾಕ್ಷರರಿದ್ದಾರೆ. ಹಿಮಾಚಲದಲ್ಲಿ ಶೇ.86.6 ಹಾಗೂ ಅಸ್ಸಾಂನಲ್ಲಿ ಶೇ.85.9ರಷ್ಟು ಸಾಕ್ಷರರಿದ್ದಾರೆ.

ಮತ್ತೊಂದೆಡೆ ರಾಜಸ್ಥಾನದಲ್ಲಿ ಶೇ.69.7ರಷ್ಟು ಮಾತ್ರ ಸಾಕ್ಷರರಿದ್ದಾರೆ. ಬಿಹಾರದ ಸಾಕ್ಷರತೆ ಶೇ.70.9 ಹಾಗೂ ತೆಲಂಗಾಣದ ಸಾಕ್ಷರತೆ ಶೇ.72.8ರಷ್ಟಿದೆ.

ದೇಶದ ಒಟ್ಟಾರೆ ಸಾಕ್ಷರತೆ ಶೇ.77.7ರಷ್ಟಿದೆ. ಗ್ರಾಮೀಣ ಭಾಗದಲ್ಲಿ ಶೇ.73.5 ಹಾಗೂ ನಗರ ಭಾಗಗಳಲ್ಲಿ ಶೇ.87.7ರಷ್ಟು ಸಾಕ್ಷರತೆ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಪುರುಷರಲ್ಲಿ ಶೇ.84.7 ಹಾಗೂ ಮಹಿಳೆಯರಲ್ಲಿ ಶೇ.70.3ರಷ್ಟು ಸಾಕ್ಷರರಿದ್ದಾರೆ. ದೇಶದ ಎಲ್ಲ ರಾಜ್ಯಗಳಲ್ಲಿ ಪುರುಷರ ಸಾಕ್ಷರತೆ ಮಹಿಳೆಯರಿಗಿಂತ ಹೆಚ್ಚಾಗಿದೆ.

# ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆಯಲ್ಲಿ ಭಾರತ ಯಶಸ್ವಿ



ನವದೆಹಲಿ, ಸೆ. 7 - ದೇಶೀಯವಾಗಿ ರೂಪಿಸಲಾಗಿರುವ ಹೈಪರ್ ಸಾನಿಕ್ ಟೆಕ್ನಾಲಜಿ ಡೆಮಾನ್‌ಸ್ಟ್ರೇಷನ್ ವೆಹಿಕಲ್ (ಹೆಚ್‌ಎಸ್‌ಟಿಡಿವಿ) ಅನ್ನು ಸೋಮವಾರ ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ. ಕೆಲವೇ ದೇಶಗಳು ಈ ರೀತಿಯ ಕ್ಷಿಪಣಿಗಳನ್ನು ಹೊಂದಿವೆ.

ಹೈಪರ್‌ಸಾನಿಕ್ ಪ್ರಪಲ್ಷನ್ ತಂತ್ರಜ್ಞಾನ ಒಳಗೊಂಡಿರುವ ಹೆಚ್‌ಎಸ್‌ಟಿಡಿವಿ ಅನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿ.ಆರ್.ಡಿ.ಓ.) ಅಭಿವೃದ್ಧಿ ಪಡಿಸಿದೆ. ಇದು ಭಾರತವು ದೂರಗಾಮಿ ಕ್ಷಿಪಣಿಗಳನ್ನು ಹೊಂದಲು ನೆರವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹೆಚ್‌ಎಸ್‌ಟಿಡಿವಿ ಕ್ಷಿಪಣಿಗಳು ಶಬ್ದಕ್ಕಿಂತ ಆರು ಪಟ್ಟು ಹೆಚ್ಚು ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿವೆ. ಅಮೆರಿಕ, ರಷ್ಯಾ ಹಾಗೂ ಚೀನಾ ಸೇರಿದಂತೆ ಕೆಲವೇ ದೇಶಗಳು ಈ ರೀತಿಯ ಸಾಮರ್ಥ್ಯ ಹೊಂದಿವೆ.

ಬೆಳಿಗ್ಗೆ 11.03ಕ್ಕೆ ಒಡಿಶಾ ಕರಾವಳಿಯಲ್ಲಿರುವ ವೀಲರ್ ದ್ವೀಪದ ಎ.ಪಿ.ಜೆ. ಅಬ್ದುಲ್ ಕಲಾಂ ದ್ವೀಪದಿಂದ ಕ್ಷಿಪಣಿ ಪರೀಕ್ಷೆ ನಡೆಸಲಾಗಿತ್ತು ಎಂದು ರಕ್ಷಣಾ ಇಲಾಖೆಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಬಹುತೇಕ ಕ್ಷಿಪಣಿಗಳಲ್ಲಿ ರ್‍ಯಾಮ್‌ಜೆಟ್ ಇಂಜಿನ್ ಬಳಸಲಾಗುತ್ತದೆ. ಹೆಚ್‌ಎಸ್‌ಟಿಡಿವಿ ಕ್ಷಿಪಣಿಗಳಲ್ಲಿ ಸ್ಕ್ರಾಮ್‌ಜೆಟ್ ಇಂಜಿನ್ ಬಳಸಲಾಗುತ್ತದೆ. ರ್‍ಯಾಮ್‌ಜೆಟ್ ಇಂಜಿನ್‌ಗಳು ಶಬ್ದದ ವೇಗದ ಮೂರು ಪಟ್ಟು ವೇಗದಲ್ಲಿ ಮಾತ್ರ ಚಲಿಸಬಲ್ಲವು.

ಪರೀಕ್ಷೆ ಎಲ್ಲಾ ಮಾನದಂಡಗಳಲ್ಲಿ ಯಶಸ್ವಿಯಾಗಿದೆ. ವರ್ಷದ ಹಿಂದೆ ನಡೆಸಲಾದ ಇದೇ ರೀತಿಯ ಪ್ರಯತ್ನ ನಿರೀಕ್ಷಿತ ಫಲಿತಾಂಶ ನೀಡಿರಲಿಲ್ಲ.

ಡಿಆರ್‌ಡಿಓ ಮೈಲಿಗಲ್ಲಿನ ಯಶಸ್ಸು ಸಾಧಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ದೇಶೀಯ ರಕ್ಷಣಾ ಉದ್ಯಮಗಳ ಸಹಭಾಗಿತ್ವದಲ್ಲಿ ಮುಂದಿನ ಪೀಳಿಗೆಯ ಹೈಪರ್‌ಸಾನಿಕ್ ಉಪಕರಣಗಳನ್ನು ರೂಪಿಸಬಹುದು ಎಂಬುದನ್ನು ಈ ಪ್ರಯೋಗ ಸಾಬೀತುಪಡಿಸಿದೆ ಎಂದು ಡಿಆರ್‌ಡಿಓ ಅಧಿಕಾರಿಯೊಬ್ಬರು ಹೇಳಿದ್ದಾರೆ.

# ಜಿಲ್ಲೆಯಲ್ಲಿ ಸ್ವಾಮಿತ್ವ

**(3ನೇ ಪುಟದಿಂದ)** ತಲುಪಬೇಕಾದ ಕಾರ್ಡ್ ತಿಪ್ಪೆಗೆ ಹಾಕಿದವರನ್ನು ಸಸ್ಪೆಂಡ್ ಮಾಡಿ ಎಂದು ಅಧಿಕಾರಿಗೆ ಸೂಚಿಸಿದರು. ಈ ಬಗ್ಗೆ ಪೊಲೀಸ್ ಇಲಾಖೆಯಲ್ಲೂ ಎಫ್‌ಐಆರ್ ಆಗಿರುವುದಾಗಿ ಜಿಲ್ಲಾಧಿಕಾರಿ ತಿಳಿಸಿದರು.

**ಅಧಿಕಾರಿಗಳೇ ಹೊಣೆ:** ಜುಲೈನಿಂದ ವೃದ್ಧಾಪ್ಯ ವೇತನ, ಅಂಗವಿಲಕರ ವೇತನ ಬಂದಿಲ್ಲ ಎಂದು ಫಲಾನುಭವಿಗಳು ದೂರಿದರೆ ಅಧಿಕಾರಿಗಳೇ ಹೊಣೆ ಎಂದು ಸಂಸದರು ಹೇಳಿದರು. ಡಿಸೆಂಬರ್ ಒಳಗೆ ಯಾವ ವೇತನ ಗಳನ್ನೂ ಬಾಕಿ ಉಳಿಸಿಕೊಳ್ಳದಂತೆ ತಾಕೀತು ಮಾಡಿದರು.

ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳು ಮನೆ ಕಟ್ಟಿಕೊಳ್ಳದಿದ್ದರೆ ನೋಟೀಸ್ ನೀಡಿ ರದ್ದು ಮಾಡುವಂತೆ ಡಿಸಿ ಅಧಿಕಾರಿಗಳಿಗೆ ಸೂಚಿಸಿದರು.

**ಖಾತ್ರಿ ಯೋಜನೆಯಲ್ಲಿ ಲೇಬರ್ ವರ್ಕ್‌ಗೆ ಹೆಚ್ಚಿನ ಒತ್ತು:** ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲೆಗೆ 40 ಲಕ್ಷ ಮಾನವ ದಿನಗಳ ಗುರಿ ನೀಡಲಾಗಿದೆ. ನಿನ್ನೆಯವರೆಗೆ 12.72 ಲಕ್ಷ ಮಾನವ ದಿನಗಳ ಬಳಕೆಯಾಗಿದೆ ಎಂದು ಜಿ.ಪಂ. ಮುಖ್ಯ ಕಾರ್ಯದರ್ಶಿ ಆನಂದ್ ತಿಳಿಸಿದರು.

ಸಾಮಗ್ರಿ ಹಾಗೂ ಲೇಬರ್ ರೇಷ್ಯೊ ಸರಿದೂಗಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಸಕ್ತ ವರ್ಷ ಲೇಬರ್ ಕೆಲಸಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಜಿ.ಪಂ. ಅಧ್ಯಕ್ಷೆ ದೀಪಾ ಜಗದೀಶ್, ದಿಶಾ ಸಮಿತಿ ಸದಸ್ಯರು, ತಾ.ಪಂ. ಅಧ್ಯಕ್ಷರು, ಅಧಿಕಾರಿಗಳು ಉಪಸ್ಥಿತರಿದ್ದರು.


**ಹೊಸ ಹೊಸ ಮನೆ ಸೇಲ್ ಗೆ**
30x40 ಜಯನಗರ, 30x40 ಸರಸ್ವತಿ ಬಡಾವಣೆ, 30x40 ಕಾರ್ನರ್ (ಬಾಡಿಗೆ ಬರುವಂತಹ), 30x50 ವಿವೇಕಾನಂದ ಬಡಾವಣೆ (ಬಾಡಿಗೆ ಬರುತ್ತದೆ), 30x50 ಬಾಲಾಜಿ ಲೇಔಟ್
ಬೂಸ್ನೂರ್ ಕಿರಣ್ (ಏಜೆಂಟ್)
98440-63409, 97315-63409
(ಮನೆ ಮಾರಾಟಕ್ಕೆ ಬೇಕೇ ? ವಿಚಾರಿಸಿ)

**ನೀರಾವರಿ ಜಮೀನು ಮಾರಾಟಕ್ಕಿದೆ**
@ರೂ. 21 ಲಕ್ಷ/ಎಕರೆ ಮಾರಾಟಕ್ಕಿದೆ.
74112 50447

**ಮನೆಗಳು ಬಾಡಿಗೆಗೆ ಇವೆ**
S.S. ಬಡಾವಣೆ 'ಎ' ಬ್ಲಾಕ್, ಶಾಮನೂರು ರಸ್ತೆ ಹತ್ತಿರ, ಕರ್ನಾಟಕ ಬ್ಯಾಂಕ್ ಹಿಂಭಾಗ, 2 ಬೆಡ್ ರೂಂ, ಫಸ್ಟ್ ಗ್ರೌಂಡ್ ಫ್ಲೋರ್, ಮೊದಲನೇ ಮಹಡಿಯಲ್ಲಿ.
ಮಂಜುನಾಥ
98444 91792

**ಸೈಟ್ ಮಾರಾಟಕ್ಕೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ನೇತಾಜಿ ಇಂಡೋರ್ ಸ್ಟೇಡಿಯಂ ಹತ್ತಿರ 30X50 ಉತ್ತರ ದಿಕ್ಕಿನ 2 ಸೈಟ್, 54X50 ಉತ್ತರ -ಪಶ್ಚಿಮ ಕಾರ್ನರ್ ಸೈಟುಗಳು ಮಾರಾಟಕ್ಕೆ.
ವಿಚಾರಿಸಿ: 98453 52460
78927 93994

**ಸೈಟು ಮನೆಗಳು ಮಾರಾಟಕ್ಕಿವೆ**
ವಿನೋಬನಗರ ರಿಂಗ್ ರೋಡ್, ಶಾಂತಿ ನಗರ, ಕುಂದುವಾಡ ರಸ್ತೆ , ವಿನಾಯಕ ನಗರ, ಶಂಕರ್ ವಿಹಾರ, ಎಸ್‌ಪಿ ಆಫೀಸ್ ಎದುರು, ಅಶೋಕ ನಗರ, MCC 'A' ಬ್ಲಾಕ್. (ಸೈಟು, ಮನೆ ನಿಮಗೆ ಬೇಕೇ?... ಅಥವಾ ನಿಮ್ಮಲ್ಲಿ ಕೊಡುವುದಿದೆಯೇ?
89517 16682, 89512 21266

**ಬೇಕಾಗಿದ್ದಾರೆ**
ಶಾಲೆಯಲ್ಲಿ ಕೆಲಸ ಮಾಡಲು ಆಯಾ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:
ಎಂ.ಇ.ಎಸ್. ಕಾನ್ವೆಂಟ್
9ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ-04
98804 36414
08192-223608

**ಹೊಸ,ಹೊಸ ಮನೆಗಳು ಮಾರಾಟಕ್ಕಿವೆ**
30x55 East, 40 ಅಡಿ ರೋಡಿಗೆ ಇದೆ 30x40,East ಕೆಳಗಡೆ 2 ಬೆಡ್ ರೂಂ, ಮೇಲುಗಡೆ 2 ಬೆಡ್ ರೂಂ , 30x40West.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410 14130

**HOTEL KITCHEN ITEMS FOR SALE**
Contact :
9886175076
9742097794

**ಲೀಜ್ ಅಥವಾ ಬಾಡಿಗೆಗಿದೆ**
ಶ್ರೀ ಸಿದ್ದಲಿಂಗಸ್ವಾಮಿ, ಕೃಪ ಟ್ರೇಡರ್ಸ್, ಎಪಿಎಂಸಿ 'ಡಿ' ಬ್ಲಾಕ್, ಆಂಜನೇಯ ದೇವಸ್ಥಾನದ ಹತ್ತಿರ, ಪೂರ್ವ ಫೇಸ್, 108x40 ಅಳತೆಯ ಗೋದಾಮು. ಎಲ್ಲಾ ರೀತಿಯ ಸೌಲಭ್ಯಗಳು ಲಭ್ಯವಿವೆ.
ದೂರವಾಣಿ: 9449729633

**ಸಣ್ಣ, ಸಣ್ಣ ಸೈಟ್‌ಗಳು ಮಾರಾಟಕ್ಕಿವೆ**
30x30 Northwest cornner, 30x30 East, 30x40 west, 20x30 North, 20x30 West,
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಶಿಕ್ಷಕಿಯರು ಬೇಕಾಗಿದ್ದಾರೆ**
B.A., B.Ed. - 8 (Eng. Major 2)
B.Sc, B.Ed. (CBZ) - 2
TCH or D.Ed. - 5
ACM SCHOOL
Devaraja Urs Lay-out, C Block, 2nd Cross, Davangere.
89703 21855, 81057 54995

**Wanted**
1) Lab Technologist - 2
2) Marketing Manager - 2
Contact:
Pooja Daignostics & HCRC
8th Main, 8th Cross, P.J Extn, Near Banapuramath Clinic, Davanagere -02
98443 26560, 08192-232075

**ಬೇಕಾಗಿದ್ದಾರೆ**
ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ.
ಮೊ: 8296435527

**Wanted for Ladge**
1) Manager : Graduaters with Experinced. Salry 10,000 to 15,000 /per Month
2) Room Boy : Salary 7,000 to 10,000/per Month
Contact No: 98440 65235

**ಮನೆ/ರೂಂ ಬಾಡಿಗೆಗೆ ಇದೆ**
15x40, ಡಬಲ್ ಬೆಡ್ ರೂಂ ಇರುವ ಮೊದಲನೆ ಮಹಡಿ ಕಟ್ಟಡ ಬಾಡಿಗೆಗೆ ಇದೆ. #369/4 , 17ನೇ ಕ್ರಾಸ್, ಕೆಟಿಜೆ ನಗರ, ಬನ್ನಿಮಹಂಕಾಳಿ ರೋಡ್, ದಾವಣಗೆರೆ.
ಸಂಪರ್ಕಿಸಿ :
99164 87751, 96200 22824

**ಮನೆ ಬಾಡಿಗೆಗೆ ಇದೆ**
ಬನಶಂಕರಿ ಬಡಾವಣೆ ಹಿಂಭಾಗ, ನೂತನವಾಗಿ ಕಟ್ಟಿಸಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.ವಿಚಾರಿಸಿ :
98804 40541
99644 14243

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, 6ನೇ ಕ್ರಾಸ್‌ನಲ್ಲಿ 2ಬೆಡ್ ರೂಂನ ಮೊದಲ ಮಹಡಿಯ ಮನೆ.
ವಿಚಾರಿಸಿ:
94489 80263

**ಬೇಕಾಗಿದ್ದಾರೆ**
ಬೇಕರಿ ಕೌಂಟರ್‌ನಲ್ಲಿ ಸೇಲ್ಸ್ ಮನ್ ಕೆಲಸಕ್ಕೆ SSLC/PUC ಆಗಿರುವ ಯುವಕರು ಬೇಕಾಗಿದ್ದಾರೆ. ಊಟ, ವಸತಿ ಇರುತ್ತದೆ.
ಫೋ. : 9900265620

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮಾರಾಟಕ್ಕೆ**
S.S ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ) ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೆಡಂ ಲೇಔಟ್ ಮನೆ 30×40, ಡಿಸಿಎಂ ಟೌನ್ ಮನೆ-40×50 ರವೀಂದ್ರನಾಥ ಬಡಾವಣೆ ಸೈಟ್-30×50, KHB ಸೈಟ್ - 30×40, ಬಸಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40, 30×42 ( ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
ಸಂಪರ್ಕಿಸಿ: 7899636597
9916525828

**ಮನೆ ಖಾಲಿ ಇದೆ**
#3367/4a, ನೆಲ ಮಹಡಿ 2 BHK ಎಂ.ಸಿ.ಸಿ. ಬಿ ಬ್ಲಾಕ್, ಶಾಮನೂರು ರಸ್ತೆ, ಹೆಚ್.ಪಿ. ಪೆಟ್ರೋಲ್ ಬಂಕ್ ಎದುರು
ಫೋ. : 94487 58967

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 9.00, ಸಂಜೆ 8.00ಕ್ಕೆ ಸಂಪರ್ಕಿಸಿ :
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟಯರ್ ಅಂಗಡಿ ಹತ್ತಿರ, ದಾವಣಗೆರೆ - 2.

**ಉದ್ಯೋಗಕ್ಕಾಗಿ ಶಿಕ್ಷಣ**
SSLC, PUC, ITI Pass/Fail
ಡಿಪ್ಲೋಮಾ ಪೇಷೆಂಟ್ ಕೇರ್, ನರ್ಸಿಂಗ್ ತರಬೇತಿ ನಂತರ ತಕ್ಷಣ ಕೆಲಸ.
NTC, SSLC, PUC ಕರೆಸ್ಪಾಂಡೆನ್ಸ್ ಕೋರ್ಸ್
ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ರೂಂ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯ ಹೊಂದಿರುವ 7 ರೂಂಗಳು ವಕ್ಕಲಿಗರ ಪೇಟೆ, ಆನಂದಸಾಗರ ಹೋಟೆಲ್ ಮೇಲೆ, ಮೊದಲನೇ ಮಹಡಿಯಲ್ಲಿ ವಾಸಕ್ಕೆ/ಆಫೀಸ್/ ಕಛೇರಿಗಳಿಗೂ/ಪಿ.ಜಿ.ಗೂ ಅನುಕೂಲವಿರುವ ರೂಂ ಬಾಡಿಗೆಗೆ ದೊರೆಯುತ್ತವೆ. ಸಂಪರ್ಕಿಸಿ :
94834 44683, 70192 01113

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**House For Rent**
East Facing, 2BHK, Ground Floor, S.S. Layout 'B' Block 4th Main, 7th cross.
90084 18081

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, Duroflex Bed, ಕಿಟಕಿಗೆ Aluminium door ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜ ಪೇಟೆ, ದಾವಣಗೆರೆ
98445 81966

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಬೆಣ್ಣೆ ದೋಸೆ ಹೋಟೆಲ್ ಗೆ ದೋಸೆ ಭಟ್ಟರು ಬೇಕಾಗಿದ್ದಾರೆ. ಕಾಫಿ, ಟೀ ಮಾಡಲು ಅನುಭವವುಳ್ಳ ಮತ್ತು ಹೋಟೆಲ್‌ನಲ್ಲಿ ಎಲ್ಲಾ ತರಹದ ಕೆಲಸ ಮಾಡಲು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ ಹೋಟೆಲ್ ನಲ್ಲಿ ರೂಮ್ ವ್ಯವಸ್ಥೆ ಇರುತ್ತದೆ.
80880 34927, 63666 22418

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಶೀಕರಣ ಸ್ಪೆಷಲಿಸ್ಟ್**
ನಿಮ್ಮ ಧ್ವನಿಯ ಮೂಲಕ ಕೊಳ್ಳೇಗಾಲದ ಕಾಳಿಕಾ ದುರ್ಗಾದೇವಿ ಶಕ್ತಿಯಿಂದ ನಿಮ್ಮ ಸಮಸ್ಯೆಗಳು ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ.
ಪಂಡಿತ್ ಮಂಜುನಾಥ್ ಭಟ್
99724 69752, 90195 64907

**ಜ್ಯೋತಿಷ್ಯ**
97417 65669
ಈ ನಂಬರಿಗೆ ಕರೆ ಮಾಡಿ ನಿಮ್ಮ ಯಾವುದೇ ಸಮಸ್ಯೆಗಳಿಗೆ ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ಪೂಜ್ಯ ಶಕ್ತಿಯಿಂದ ಹಿರಿಯ ಅರ್ಚಕರಿಂದ ವಿಶೇಷ ಪರಿಹಾರ.
ಧರ್ಮಸ್ಥಳ : ಸುಬ್ರಮಣ್ಯ ಗುರೂಜಿ

**ಮಾಂತ್ರಿಕ ಮೋಡಿ ಬೆಟ್ಟಪ್ಪ ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
ಮೊ. : 8971699826

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**K.O.S & N.I.O.S ನೇರ ಪರೀಕ್ಷೆಗಳು**
10ನೇ ತರಗತಿ, 12ನೇ ತರಗತಿ ಪರೀಕ್ಷೆಗೆ ನೇರವಾಗಿ ಕೂಡಬಹುದು. B.A, B.Com, B.Sc, M.A, M.Com, M.Sc, B.Lib, M.Lib, MBA, MCA & Diploma, B.Tech.
Contact :
96200 28627, 98444 65627

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸಂಪರ್ಕಿಸಿ:
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

# ದೇಶದಲ್ಲಿ 42 ಲಕ್ಷದ ಗಡಿ ದಾಟಿದ ಸೋಂಕಿತರು

ನವದೆಹಲಿ, ಸೆ. 7 - ದೇಶದಲ್ಲಿ ಒಂದೇ ದಿನ 90,802 ಕೊರೊನಾ ಪ್ರಕರಣಗಳು ಕಾಣಿಸಿಕೊಂಡಿದ್ದು, ಸೋಂಕು ಪ್ರಕರಣಗಳ ಸಂಖ್ಯೆ 42 ಲಕ್ಷದ ಗಡಿ ದಾಟಿದೆ. ಇದೇ ವೇಳೆ ದೇಶದಲ್ಲಿ ಕೊರೊನಾದಿಂದ ಚೇತರಿಸಿಕೊಂಡವರ ಸಂಖ್ಯೆ ಶೇ.77.30ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದೇ ವೇಳೆ ಒಂದೇ ದಿನದಲ್ಲಿ 1,016 ಜನರು ಸಾವನ್ನಪ್ಪಿದ್ದು, ಒಟ್ಟು ಮೃತರ ಸಂಖ್ಯೆ 71,642ಕ್ಕೆ ತಲುಪಿದೆ. ಕೊರೊನಾದಿಂದ ಸಾವನ್ನಪ್ಪುವವರ ಪ್ರಮಾಣ ಒಟ್ಟು ಸೋಂಕಿತರ ಶೇ.1.70ಕ್ಕೆ ಇಳಿಕೆಯಾಗಿದೆ.

ದೇಶದಲ್ಲೀಗ 8,82,542 ಸಕ್ರಿಯ ಸೋಂಕಿತರಿದ್ದಾರೆ. ಇವರು ಒಟ್ಟು ಸೋಂಕಿತರ ಶೇ.20.99ರಷ್ಟಾಗಿದ್ದಾರೆ. ಆಗಸ್ಟ್ 23ರಂದು ದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 30 ಲಕ್ಷದ ಗಡಿ ದಾಟಿತ್ತು. ಆನಂತರ ಸೆಪ್ಟೆಂಬರ್ 5ರಂದು ಸೋಂಕಿತರ ಸಂಖ್ಯೆ 40 ಲಕ್ಷವನ್ನು ಮೀರಿದೆ.

ಐ.ಸಿ.ಎಂ.ಆರ್. ದಾಖಲೆಗಳ ಪ್ರಕಾರ ಭಾನುವಾರ ಒಂದೇ ದಿನ 7,20,362 ಜನರ ಟೆಸ್ಟ್ ಮಾಡಲಾಗಿದೆ. ಹೊಸ 1,016 ಸಾವುಗಳಲ್ಲಿ 328 ಮಹಾರಾಷ್ಟ್ರ, 95 ಕರ್ನಾಟಕ, 88 ತಮಿಳುನಾಡು, 77 ಉತ್ತರಪ್ರದೇಶ, 70 ಆಂಧ್ರ ಪ್ರದೇಶ ಹಾಗೂ 54 ಪಂಜಾಬ್‌ಗಳಲ್ಲಿ ಸಂಭವಿಸಿವೆ. ಮಹಾರಾಷ್ಟ್ರದಲ್ಲಿ ಇದುವರೆಗೂ 26,604 ಹಾಗೂ ತಮಿಳುನಾಡಿನಲ್ಲಿ 6,836 ಸಾವು ಸಂಭವಿಸಿವೆ. ಕರ್ನಾಟಕದಲ್ಲಿ ಇದುವರೆಗೆ 6,393 ಸಾವುಗಳು ಉಂಟಾಗಿವೆ.

## ಕೊರೊನಾ : ಎಸ್‌ಪಿಬಿ ಗುಣಮುಖ



ಚೆನ್ನೈ, ಸೆ. 7 – ಹಿರಿಯ ಗಾಯಕ ಎಸ್.ಪಿ. ಬಾಲಸುಬ್ರಮಣ್ಯಂ ಅವರು ಕೊರೊನಾದಿಂದ ಮುಕ್ತರಾಗಿದ್ದಾರೆ. ಕೊರೊನಾ ಪರೀಕ್ಷೆಯಲ್ಲಿ ಅವರಿಗೆ ನೆಗೆಟಿವ್ ವರದಿ ಬಂದಿದೆ ಎಂದು ಎಸ್‌ಪಿಬಿ ಪುತ್ರ ಎಸ್.ಪಿ. ಚರಣ್ ಹೇಳಿದ್ದಾರೆ. ತಂದೆಯವರ ಶ್ವಾಸಕೋಶದಲ್ಲಿ ಇನ್ನೂ ಸ್ವಲ್ಪ ಸೋಂಕಿದ್ದು, ಇನ್ನೊಂದು ವಾರದಲ್ಲಿ ಪೂರ್ಣವಾಗಿ ಚೇತರಿಸಿಕೊಳ್ಳಲಿದ್ದಾರೆ ಎಂದು ಚರಣ್ ತಿಳಿಸಿದ್ದಾರೆ. ಕೊರೊನಾ ಪಾಸಿಟಿವ್ ಬಂದ ಹಿನ್ನೆಲೆಯಲ್ಲಿ ಎಸ್‌ಪಿಬಿ ಅವರು ಆಗಸ್ಟ್ 5ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಸತತ 32 ದಿನಗಳಿಂದ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.

## ಮಹಿಳೆಗೆ ಎರಡನೇ ಬಾರಿ ಸೋಂಕು

### ವೈದ್ಯಕೀಯ ಅಧ್ಯಯನಕ್ಕೆ ಸುಧಾಕರ್ ಸೂಚನೆ

ಬೆಂಗಳೂರು, ಸೆ. 7 – 27 ವರ್ಷದ ಮಹಿಳೆಯೊಬ್ಬರು ಎರಡನೇ ಬಾರಿ ಕೊರೊನಾ ಸೋಂಕಿಗೆ ಗುರಿಯಾದ ಬಗ್ಗೆ ವೈದ್ಯಕೀಯ ಅಧ್ಯಯನ ನಡೆಸುವಂತೆ ಅಧಿಕಾರಿಗಳಿಗೆ ಉನ್ನತ ಶಿಕ್ಷಣ ಸಚಿವ ಕೆ. ಸುಧಾಕರ್ ಸೂಚಿಸಿದ್ದಾರೆ.

ಜುಲೈನಲ್ಲಿ ಮೊದಲ ಬಾರಿಯ ಕೊರೊನಾದಿಂದ ಚೇತರಿಸಿಕೊಂಡು ಬಿಡುಗಡೆಯಾಗಿದ್ದ ಮಹಿಳೆ, ಮತ್ತೆ ಸೋಂಕಿಗೆ ಗುರಿಯಾದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಧಾಕರ್, ಈ ವಿಷಯವನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕಿದೆ. ಜನರ ಮನಸ್ಸಿನಲ್ಲಿರುವ ಭಯವನ್ನು ನಿವಾರಿಸಬೇಕಿದೆ ಎಂದಿದ್ದಾರೆ.

ಸಚಿವ ಡಾ. ಕೆ. ಸುಧಾಕರ್ ಅವರು ಮರು ಕೊರೊನಾ ಪ್ರಕರಣಗಳ ವೈದ್ಯಕೀಯ ಅಧ್ಯಯನಕ್ಕೆ ಸೂಚಿಸಿದ್ದಾರೆ ಎಂದು ಅವರ ಕಚೇರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಫೋರ್ಟಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಮಹಿಳೆಗೆ ಎರಡನೇ ಬಾರಿ ಕೊರೊನಾ ಸೋಂಕು ಕಂಡು ಬಂದಿತ್ತು. ಈ ಬಗ್ಗೆ ಸುಧಾಕರ್ ಅವರು ಕೊರೊನಾ ಕಾರ್ಯಪಡೆಯ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದಾರೆ. ಇತರೆ ಕೆಲ ದೇಶಗಳಲ್ಲೂ ಎರಡನೇ ಬಾರಿಗೆ ಕೊರೊನಾ ಸೋಂಕು ಬಂದಿರುವ ಘಟನೆಗಳು ವರದಿಯಾಗಿವೆ.

ಕೊರೊನಾ ಸೋಂಕಿನಿಂದ ಚೇತರಿಸಿಕೊಳ್ಳುವವರಲ್ಲಿ ಬಿಳಿ ರಕ್ತ ಕಣಗಳು ಉತ್ಪಾದನೆಯಾಗಲು ಹದಿನೈದು ದಿನಗಳು ಬೇಕಾಗುತ್ತವೆ. ಇದು ಕೆಲ ರೋಗಿಗಳಲ್ಲಿ ಮರು ಸೋಂಕಿಗೆ ಕಾರಣವಾಗಬಹುದು ಎಂದು ಶಂಕಿಸಲಾಗಿದೆ ಎಂದು ಸುಧಾಕರ್ ಕಚೇರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆದರೆ, ಮರು ಸೋಂಕಿಗೆ ಇದೇ ನಿರ್ದಿಷ್ಟ ಕಾರಣ ಎಂದು ಹೇಳಲಾಗದು. ಈ ಹಿನ್ನೆಲೆಯಲ್ಲಿ ಮರು ಸೋಂಕಿನ ಬಗ್ಗೆ ಸ್ಪಷ್ಟನೆ ಹೊಂದಲು ಸಚಿವರು ಸೂಚಿಸಿದ್ದಾರೆ ಎಂದು ತಿಳಿಸಲಾಗಿದೆ.

# ಶಿಕ್ಷಣದ ಜೊತೆಗೆ ಔದ್ಯೋಗಿಕ ಅವಕಾಶಗಳ ನಿರ್ಮಾಣ ಶಿಕ್ಷಣ ನೀತಿಯ ಆದ್ಯತೆಯಾಗಬೇಕು

***ಘಟನೆ 1 :*** ವಾಟ್ಸ್ ಆ್ಯಪ್‌ನಲ್ಲಿ ವಿಡಿಯೋ ಒಂದು ಹರಿದಾಡುತ್ತಿದೆ. ಅದರಲ್ಲಿ ಬಿಳಿ ಬಣ್ಣದ ನಾಯಿಯೊಂದನ್ನು ಕಟ್ಟಿಹಾಕಲಾಗಿದೆ. ಅದರ ಮೇಲೆ ಸ್ಟೂಡೆಂಟ್ಸ್ ಎಂದು ಬರೆದಿದೆ. ಅದರ ಎದುರಿಗೆ ಕರಿನಾಯಿಯೊಂದು ಬಿಳಿನಾಯಿಗೆ ಎದುರಾಗಿ ನಿರಂತರವಾಗಿ ಬೊಗಳುತ್ತಿದೆ. ಕರಿನಾಯಿಯ ಮೇಲೆ ಆನ್ ಲೈನ್ ಟೀಚಿಂಗ್ ಸ್ಟ್ಯಾಫ್ ಎಂದು ಬರೆಯಲಾಗಿದೆ. ಕರಿನಾಯಿ ಎಷ್ಟು ಬೊಗಳಿದರೂ ಬಿಳಿನಾಯಿ ಕ್ಯಾರೇ ಎನ್ನುವುದಿಲ್ಲ. ಬಿಳಿನಾಯಿಯ ಹತ್ತಿರ ಖಾಲಿ ಪಾತ್ರೆಯೊಂದನ್ನು ಇಡಲಾಗಿದೆ. ಪಕ್ಕದಲ್ಲಿ ಗಮನ ಕೊಟ್ಟು ಕೇಳ್ರೋ ಅಂತ ಬರೆದು ಕೈಮುಗಿದು ನಗುವ ಚಿತ್ರಗಳನ್ನು ಹಾಕಲಾಗಿದೆ.

✦ ✦ ✦

***ಘಟನೆ 2 :*** ಪ್ರತಿಷ್ಠಿತ ಸಂಸ್ಥೆಯೊಂದರ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸಂದರ್ಶನಕ್ಕೆ ವಿಷಯ ತಜ್ಞನಾಗಿ ಹೋಗಿದ್ದೆ. ನೂರಾರು ಅಭ್ಯರ್ಥಿಗಳು ಭಾಗವಹಿಸಿದ್ದ ಸಂದರ್ಶನದಲ್ಲಿ ಬಹಳಷ್ಟು ಜನ ಡಾಕ್ಟರೇಟ್ ಪದವಿ ಪಡೆದವರೇ ಆಗಿದ್ದರು. ಒಬ್ಬ ಅಭ್ಯರ್ಥಿ 'ತರಾಸು ಅವರ ಸಾಮಾಜಿಕ ಕಾದಂಬರಿಗಳು: ಒಂದು ಅಧ್ಯಯನ' ಕುರಿತು ಮಹಾಪ್ರಬಂಧ ಮಂಡಿಸಿ, ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪಡೆದಿದ್ದರು. ಅವರಿಗೆ ನಾನು 'ಐತಿಹಾಸಿಕ ಮತ್ತು ಸಾಮಾಜಿಕ ವಸ್ತು ನಿರ್ವಹಣೆಯಲ್ಲಿ ತರಾಸು ಅವರ ಸೃಜನಶೀಲ ವ್ಯತ್ಯಾಸಗಳನ್ನು ಹೇಗೆ ಗುರುತಿಸುತ್ತೀರಿ?' ಅಂತ ಪ್ರಶ್ನೆ ಕೇಳಿದೆ. ತರಾಸು ಅವರ ಐತಿಹಾಸಿಕ ಕಾದಂಬರಿಗಳನ್ನು ನಾನು ಓದಿಲ್ಲ ಎಂದು ಅವರು ಉತ್ತರಿಸಿದರು.

ಆತ್ಮಗೌರವವಿಲ್ಲದ ಅಧ್ಯಾಪಕರ ಮನೋಧರ್ಮವನ್ನು ಮೊದಲ ಘಟನೆ ಹೇಳಿದರೆ ಎರಡನೇಯದು ಆತ್ಮಾಭಿಮಾನವನ್ನು ಹೊಂದಲು ಅವಶ್ಯಕವಾದ ಅಧ್ಯಯನಶೀಲತೆಯ ಕೊರತೆಯನ್ನು ಸೂಚಿಸುತ್ತದೆ.

ಪ್ರತಿವರ್ಷ ಸೆಪ್ಟೆಂಬರ್ ಐದರಂದು ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಹಾರ ಹಾಕಿ ಶಿಕ್ಷಕರ ಚಾರಿತ್ರ್ಯ ಮತ್ತು ಕೊಡುಗೆಗಳನ್ನು ಕೊಂಡಾಡುವುದು ವಾಡಿಕೆ. ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ ಕುರಿತು ಚರ್ಚೆ ನಡೆಯುತ್ತಿರುವಾಗ ಶಿಕ್ಷಕ ಆ ಹೊಸ ನೀತಿಯ ಪಾಲುದಾರನಾಗಿ ತನ್ನ ಪಾತ್ರ ಮತ್ತು ಜವಾಬ್ದಾರಿಯ ಬಗ್ಗೆ ಆಲೋಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ನಿಯಮಗಳನ್ನು ರೂಪಿಸಿ, ಹಲವರಿಗೆ ಹಲಬಗೆಯ ಹೊಣೆಗಾರಿಕೆಗಳನ್ನು ವಹಿಸುವುದು ನಿಶ್ಚಿತ. ಅಧ್ಯಾಪಕ ಕೇಂದ್ರಿತ ಚಿಂತನ ಕ್ರಮಗಳಿಂದ ಹೊರಬಂದು, ವಿದ್ಯಾರ್ಥಿ ಕೇಂದ್ರಿತ ತರಗತಿಗಳಿಗೇ ಹೊಂದಿಕೊಳ್ಳಲಾಗದ ಗುರು-ಶಿಷ್ಯ ಸಮುದಾಯ, ಇದೀಗ ಪ್ರಾಚೀನವೂ ಕ್ರಿಯಾಶೀಲವೂ ಆದ ಜ್ಞಾನ ಮಾದರಿಗಳನ್ನು ಆಧುನಿಕ ಸಾಮಾಜಿಕ ಪ್ರಗತಿಪಥಕ್ಕೆ ಹೊಂದಿಸುವುದನ್ನು ಕಲಿಯಬೇಕಾಗಿದೆ. ಭಾರತದ ಪರಂಪರಾಗತ ಕೃಷಿಮೂಲ ವಿಜ್ಞಾನ ಮಾದರಿಗಳು ನೇಪಥ್ಯಕ್ಕೆ ಸರಿದು, ಯಾಂತ್ರಿಕ ಸಮೃದ್ಧಿಯ ಅತ್ಯುತ್ಸಾಹ ಎಲ್ಲಾ ಕ್ಷೇತ್ರಗಳಲ್ಲಿ ಮೆರೆದಿರುವಾಗ ಯುವ ಸಮುದಾಯಕ್ಕೆ ಭೌತಿಕ ಪರಿಶ್ರಮ ಮತ್ತು ಬೌದ್ಧಿಕ ಸಂಪನ್ನತೆಯ ಸಮನ್ವಯದ ಮಾರ್ಗಗಳನ್ನು ತೋರಿಸಬೇಕಾಗಿದೆ.

ವಿದ್ಯಾರ್ಥಿಯೊಬ್ಬ ಕಾಲೇಜು ಶಿಕ್ಷಣ ಪಡೆಯುವ ಹೊತ್ತಿಗೆ ಕನಿಷ್ಠ ಪಕ್ಷ ತನ್ನ ಅನ್ನವನ್ನು ತಾನು ಸಂಪಾದಿಸಿಕೊಳ್ಳುವಂತಹ ಔದ್ಯೋಗಿಕ ಅವಕಾಶಗಳ ನಿರ್ಮಾಣ ಶಿಕ್ಷಣ ನೀತಿಯ ಆದ್ಯತೆಯಾಗಬೇಕು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತ ಇಂತಹ ಅನುಭವ ಮತ್ತು ಜ್ಞಾನ ಸೃಷ್ಟಿಯ ಕಮ್ಮಟವಾಗಬೇಕು. ಪುಸ್ತಕ, ಪೆನ್ನು, ಪೆನ್ಸಿಲ್‌ಗಳು ನಿತ್ಯ ಬಳಸುವ ವಸ್ತುಗಳಾಗಿರುವಂತೆ ಗುದ್ದಲಿ, ಸಲಿಕೆಗಳು ವಿರಳ ಬಳಕೆಯ ಸಲಕರಣೆಗಳಾಗಬೇಕು. ನಮ್ಮ ಗ್ರಾಮ ಬದುಕನ್ನು ಆರ್ಥಿಕವಾಗಿ ಸದಾ ಸದೃಢವಾಗಿಡುವ ಎತ್ತು, ಎಮ್ಮೆ, ಆಕಳು, ಆಡು, ಕುರಿ, ಕೋಳಿಗಳನ್ನು ಬರೀ ಮೊಬೈಲು, ಟಿ.ವಿ, ಕಂಪ್ಯೂಟರ್‌ಗಳಲ್ಲಿ ಮಾತ್ರ ನೋಡುವಂತಾಗಿರುವ ನಮ್ಮ ಹುಡುಗರು ತಿಂಗಳಿಗೊಮ್ಮೆ ಪಶುಪಾಲನಾ ಪ್ರೀತಿಯನ್ನು ಅನುಭವಿಸುವಂತಾಗಬೇಕು. ಕುಂಡದ ಗಿಡಗಳ ಚಂದದೆದುರು ಸೆಲ್ಫಿ ತೆಗೆದುಕೊಳ್ಳುವ ಹುಡುಗ-ಹುಡುಗಿಯರಿಗೆ ಆಳವಾಗಿ ಬೇರು ಬಿಟ್ಟು ಆಕಾಶದಲ್ಲಿ ಹರಡಿದ ದಟ್ಟ ನೆರಳಿನ ಆನಂದ ದೊರೆಯಬೇಕು. ಮೊಲವನ್ನೋ ನವಿಲನ್ನೋ ಅಮೃತಶಿಲೆಯ ಹಾಸುಗಲ್ಲಿನ ಮೇಲೆ ಓಡಾಡಿಸುವ ಮಾನವ ಪ್ರತಿಷ್ಠೆಯ ಸಂಭ್ರಮಕ್ಕಿಂತ ಗಿಡಪೊದೆಗಳ ನಡುವೆ ಅವುಗಳ ಚಿನ್ನಾಟದ ಸ್ವಾತಂತ್ರ್ಯವನ್ನು ಕಣ್ತುಂಬಿಕೊಳ್ಳುವ ಹೃದಯಕಲೆ ಅರಳಬೇಕು. ಇಂತಹ ಸಂಗತಿಗಳು ನಗರದಲ್ಲೂ ಸಾಧ್ಯವಾಗುವಂತೆ ನಗರಾಭಿವೃದ್ಧಿ ನೀತಿಯನ್ನು ಪರಿಷ್ಕರಿಸಿ ರೂಪಿಸಬೇಕು. ಈ ಎಲ್ಲಾ 'ಬೇಕು' ಗಳು ಏಕಕಾಲಕ್ಕೆ ವ್ಯಕ್ತಿಯ ಮತ್ತು ದೇಶದ ಆರ್ಥಿಕ ದೃಢತೆಯನ್ನೂ, ಆರೋಗ್ಯದ ನೆಮ್ಮದಿಯನ್ನೂ ಒಳಗೊಂಡಿವೆ. ಆಡುವ ಭಾಷೆಯ ಮೂಲಕ ಜಾತಿ ಅಂತಸ್ತುಗಳ ದಾಕ್ಷಿಣ್ಯವಿಲ್ಲದ ಸಮಾನತೆಯೇ ಅಧಿಕಾರವಾಗಿ ಇದು ಸ್ಥಾಪಿತವಾಗುವ ಕ್ಷಣಕ್ಕಾಗಿ ದೇಶ ಕಾದಿದೆ.

ಶಿಕ್ಷಣವನ್ನು ಕೇವಲ ಹಣ ಮತ್ತು ಉದ್ಯೋಗ ಸಂಪಾದನೆಗಾಗಿ ಪಡೆಯಬಾರದು. ಆತ್ಮೋನ್ನತಿಗಾಗಿ ಜ್ಞಾನ ಪಡೆಯಬೇಕು ಎಂಬ ಉಪದೇಶವನ್ನು ಕೇಳಲು ಯುವ ಸಮುದಾಯ ತಯಾರಿಲ್ಲ. ಆಧುನಿಕ ಶಿಕ್ಷಣ ಲೌಕಿಕ ಬದುಕಿನ ಪ್ರಾಮುಖ್ಯತೆಯನ್ನು ಮುನ್ನೆಲೆಗೆ ತಂದು ನಿಲ್ಲಿಸಿದೆ. ಅದು ಅಪಾರ ಪ್ರಮಾಣದ ಸಂಗ್ರಹ ಬುದ್ಧಿಯ ದುರಾಸೆಯನ್ನು ಕಲಿಸಿದೆ. ಮನುಷ್ಯ ಬದುಕಿನ ನಶ್ವರತೆಯನ್ನು ತಾತ್ವಿಕವಾಗಿ ಒಪ್ಪಿಕೊಂಡರೂ ಇರುವತನಕ ಸುಖಪಡಲು ಬಯಸುತ್ತಾನೆ. ಈ ಸುಖವನ್ನು ಪಡೆಯಲು ಏನು ಬೇಕಾದರೂ ಮಾಡಲು ತಯಾರಿದ್ದಾನೆ. ನ್ಯಾಯದ ಹಾದಿಯಲ್ಲಿ ದಕ್ಕುವ ಸುಖಕ್ಕಾಗಿ ಕಾಯಬೇಕಾಗುತ್ತದೆ. ಅಷ್ಟು ಸಹನೆ ಯಾರಿಗೆ ಬೇಕಾಗಿದೆ? ಅನ್ಯಾಯದ ಅಡ್ಡಹಾದಿಯಲ್ಲಿ ಸುಖ ತಟ್ಟನೆ ಕೈಗೆಟಕುತ್ತದೆ. ಇರುವೆಯಾಗಿ ಸಕ್ಕರೆ ತಿನ್ನುವ ನಿಧಾನ ನೆಮ್ಮದಿಗಿಂತ ಆನೆಯಾಗಿ ಕಬ್ಬಿನ ಗದ್ದೆಗೆ ನುಗ್ಗುವ ಧಾವಂತವೇ ಇಷ್ಟವಾಗುತ್ತಿದೆ. ಜಾಗತಿಕವಾದ ಕೊಳ್ಳುಬಾಕ ಮನೋಧರ್ಮ ಅಗತ್ಯ ತತ್ವದ ಜೀವನ ಕ್ರಮವನ್ನು ನಾಶ ಮಾಡಿದೆ. ಶಿಕ್ಷಣ ವ್ಯವಸ್ಥೆ ಇದರಿಂದ ಹೊರಬರುವ ಉಪಕ್ರಮಗಳನ್ನು ಶೋಧಿಸುತ್ತಾ ಮತ್ತೊಬ್ಬರ ಅನ್ನಕ್ಕೆ ಕಣ್ಣು ಹಾಕುವ ನಯವಂಚಕ ನರಿಬುದ್ಧಿಯನ್ನು ನಾಶಪಡಿಸಬೇಕಾಗಿದೆ. ನೈಸರ್ಗಿಕ ಸಂಪನ್ಮೂಲಗಳು ಎಲ್ಲರಿಗೂ ಎಲ್ಲಾ ಕಾಲಕ್ಕೂ ಒದಗಿಸುವಂತಹ ದೂರದೃಷ್ಟಿಯ, ಸಕಲ ಜೀವಾತ್ಮರಿಗೆ ಲೇಸು ಬಯಸುವ ಕ್ರಿಯಾತ್ಮಕ ನಿಯಮಗಳು ಶಿಕ್ಷಣದ ನೈತಿಕ ಕಾಳಜಿಯಾಗಬೇಕು.

ವಿಶೇಷವಾಗಿ ಕಾಲೇಜು ಮತ್ತು ವಿಶ್ವವಿದ್ಯಾಲಯದ ಶಿಕ್ಷಣ ಈ ಜವಾಬ್ದಾರಿಯನ್ನು ಹೊರಬೇಕು. ಅದರಲ್ಲೂ ಸಮಾಜ ಪರಿವರ್ತನೆಯ ನಿಜ ನೇತಾರರಾದ ಅಧ್ಯಾಪಕರು ಈ ಕರ್ತವ್ಯದ ಪರಿಣಾಮಕಾರಿ ನಿರ್ವಹಣೆಯಲ್ಲಿ ಸಮರ್ಥರೂ ಹೌದು. ಅವರು ಪ್ರತಿನಿತ್ಯ ಮಿಂಚುಗಣ್ಣಿನ ಮುಗಿಲಾಕಾಂಕ್ಷೆಯ ಸಿಡಿಲಕೋಪದ ತರುಣ, ತರುಣಿಯರನ್ನು ಮುಖಾಮುಖಿಯಾಗುತ್ತಾರೆ. ಆ ಕಣ್ಣುಗಳಿಂದ ಬೆಳಕನ್ನೂ ಹೊಮ್ಮಿಸಬಹುದು, ಬೆಂಕಿಯನ್ನೂ ಉಗುಳಿಸಬಹುದು. ಸಮಾನತೆಯ ಕನಸುಗಾರನಾದ ಅಧ್ಯಾಪಕ ಮಾತ್ರ ಸದಾ ಹಣತೆ ಹಚ್ಚುತ್ತಾನೆ.

ತೊಂಬತ್ತರ ದಶಕ ಮುಗಿಯುವವರೆಗೆ ಅಧ್ಯಾಪಕರು ನಿವೃತ್ತಿಯ ಅಂಚಿಗೆ ಬಂದರೂ ಕಾರು ಕೊಳ್ಳಲು, ಮನೆ ಕಟ್ಟಿಕೊಳ್ಳಲು ಆಗದ ಪರಿಸ್ಥಿತಿಯಿತ್ತು. ಅವರು ಬಹುಶ್ರುತ ಜ್ಞಾನದಾಹಿಗಳಾಗಿದ್ದರು. ಅವರು ನಿಜವಾಗಿ ಮಾನವ ಸಂಪನ್ಮೂಲದ ಮಾದರಿಯಂತಿದ್ದರು. ಅವರಿಗೆ ಪಿಹೆಚ್.ಡಿ ಗಾಗಿ ಗೈಡ್‌ಗಳೇ ಸಿಗುತ್ತಿರಲಿಲ್ಲ. ಸಿಕ್ಕರೂ ಪೂರೈಸುವುದು ಕಷ್ಟವಿತ್ತು. ಪೂರೈಸಿದ ಒಂದೊಂದು ಮಹಾಪ್ರಬಂಧಗಳೂ ಅಮೂಲ್ಯವಾದವುಗಳೇ. ಅವರೆಂದೂ ತಾವಾಗಿಯೇ ಡಾಕ್ಟರ್ ಅಂತ ಕರೆದುಕೊಳ್ಳುತ್ತಿರಲಿಲ್ಲ, ಹೆಸರಿಗೆ ಮೊದಲು ಡಾ. ಅಂತ ಬರೆದುಕೊಳ್ಳುತ್ತಿರಲಿಲ್ಲ. ಇಡೀ ಪ್ರಬಂಧದಲ್ಲಿ ವಾಕ್ಯರಚನೆಯ ದೋಷಗಳಾಗಲೀ, ಕಾಗುಣಿತದ ತಪ್ಪುಗಳಾಗಲೀ ಇರುತ್ತಿರಲಿಲ್ಲ. ಪಿಎಚ್.ಡಿ. ಗಾಗಿ ಅವರಿಗೆ ಯಾವ ಉತ್ತೇಜನಕಾರಿ ವೇತನ ಬಡ್ತಿಗಳೂ ಇರಲಿಲ್ಲ. ಅವರು ಇಡೀ ದಿನವನ್ನು ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಕಳೆಯುತ್ತಿದ್ದರು. ಅವರು ಅಪಾರ ಸಂಖ್ಯೆಯ ಪುಸ್ತಕಗಳ ದೊರೆಗಳಾಗಿದ್ದರು. ಕಾರು-ಬಂಗಲೆಯ ಕೊರಗು ಅವರಿಗಿರಲಿಲ್ಲ. ಸಮಾಜ 'ಪಾಪ, ಮೇಷ್ಟ್ರು' ಅಂತ ಸಹಾನುಭೂತಿಯ ಗೌರವ ತೋರುತ್ತಿತ್ತು. ಆದರೆ, ಈಗ ವಸ್ತುಸ್ಥಿತಿ ಸ್ವಲ್ಪ ಬೇರೆಯೇ ಇದೆ. ಅಧ್ಯಾಪಕರ ಆಸಕ್ತಿ ಕೇಂದ್ರಗಳು ಬದಲಾಗಿವೆ. ಸೇವೆಗೆ ಸೇರಿದ ಒಂದೆರಡು ವರ್ಷಗಳಲ್ಲಿಯೇ ಕಾರು, ಬಂಗಲೆ ಮಾಡಿಕೊಳ್ಳುವಷ್ಟು ಸಂಬಳವೂ ಬ್ಯಾಂಕಿನ ಸಾಲವೂ ಸಿಗುತ್ತಿದೆ. ಪಿಎಚ್.ಡಿ ಪದವಿಯ ಆಕಾಂಕ್ಷಿತರಲ್ಲಿ ಬಹುತೇಕರು ಅವರವರ ಜಾತಿಯ ಗೈಡ್‌ಗಳನ್ನೇ ಹುಡುಕುತ್ತಾರೆ. ಮಾನವಿಕ ವಿಷಯಗಳ ಮಹಾಪ್ರಬಂಧಗಳಲ್ಲಿ ಭಾಷಾ ದೋಷಗಳು ಧಾರಾಳವಾಗಿ ಸಿಗುತ್ತವೆ. ಪ್ರೊಫೆಸರ್ ಅಂತ ಪರಿಚಯಿಸಿಕೊಳ್ಳುವ ಕೆಲವರಿಗೆ ಸಿಗ್ಮಂಡ್ ಫ್ರಾಯ್ಡ್ ಹೆಸರಿನ ಸ್ಪೆಲ್ಲಿಂಗ್, ಇಪ್ಪತ್ತು ವರ್ಷಗಳ ಕಾಲ ಕಾಲೇಜು ಶಿಕ್ಷಣ ಇಲಾಖೆಯ ಜೊತೆ ವ್ಯವಹರಿಸಿದರೂ ಕಮೀಷನರ್ ಅಂತ ಬರೆಯಲು ಬರುವುದಿಲ್ಲ ಅಂದರೆ ವಸ್ತು ಸ್ಥಿತಿಯನ್ನು ಊಹಿಸಬಹುದು. ಹೆಸರು ಹೇಳುವಾಗ, ಬರೆಯುವಾಗ ಕಡ್ಡಾಯವಾಗಿ ಡಾ. ಸೇರಿರುತ್ತದೆ. ಡಾಕ್ಟರೇಟ್‌ಗಾಗಿ ಮೂರರಿಂದ ಐದರವರೆಗೆ ಇಂಕ್ರಿಮೆಂಟ್‌ಗಳು ಸಿಗುತ್ತವೆ. ಪುಸ್ತಕಗಳಿಗಿಂತ ನೋಟ್ಸ್ ಪವಿತ್ರವಾದುದು. ಸೆಮಿಸ್ಟರ್‌ನ ಸಿಲಬಸ್ ಒಂದೇ ತಿಂಗಳಲ್ಲಿ ಮುಗಿಯುತ್ತದೆ. ಸೆಮಿನಾರ್‌ಗಳಿಗೆ ಹೋಗದಿದ್ದರೂ ಸರ್ಟಿಫಿಕೇಟ್ ಬರುತ್ತದೆ. ಎಲ್ಲಾ ಕಸರತ್ತುಗಳೂ ಪದೋನ್ನತಿಗೆ ಮೀಸಲು. ಅಧ್ಯಾಪಕರ ವೃತ್ತಿಪರ ಸಾಮರ್ಥ್ಯವನ್ನು ಅಳೆಯುವ ಆಂತರಿಕ ಮತ್ತು ರಾಜ್ಯ ಗುಣಮಟ್ಟ ಭರವಸೆಯ ಕೋಶಗಳ ಹಾಗೂ ನ್ಯಾಕ್ ಗ್ರೇಡಿಂಗ್‌ಗೆ ಹಾಳೆಯ ಮೇಲೆ ಮುದ್ರಿತವಾದ ಅಕ್ಷರಗಳು ಸೀಲು, ಸಹಿ ಇರುವ ದಾಖಲೆಗಳು ಬೇಕು. ಅವು ಬಹುಪಾಲು ಸಂತೆ ಹೊತ್ತಿಗೆ ಮೂರು ಮೊಳ ನೇಯುವಂತಹವೇ ಆಗಿರುತ್ತವೆ. ಲಾಭಕ್ಕೆ ಕರಗುವರೆಡೆ ಜ್ಞಾನೋನ್ನತಿಗೆ ಕೊರಗುವವರಾರನೂ ಕಾಣೆ ಕೂಡಲ ಸಂಗಮದೇವಾ ಎನ್ನುತ್ತಿದ್ದರೇನೋ ಬಸವಣ್ಣನವರು.

ಕೆಲವರು ತಮ್ಮ ನೆಂಟರಿಷ್ಟರ ಹೆಸರಿನಲ್ಲಿ ಶಾಲಾ-ಕಾಲೇಜು ನಡೆಸುತ್ತಿದ್ದಾರೆ. ತಾವು ತಿನ್ನುವ ಅನ್ನ ಕೊಡುವ ಕಾಲೇಜಿನಲ್ಲಿ ಇಂತಹವರನ್ನು ಹುಡುಕಿದರೆ ಪ್ರಯೋಜನವಿಲ್ಲ. ಅವರನ್ನು ಪ್ರಶ್ನಿಸುವ ಪ್ರಿನ್ಸಿಪಾಲರನ್ನು ತೇಜೋವಧೆ ಮಾಡಿ, ಹುದ್ದೆ ಬಿಟ್ಟು ಹೋಗುವಂತೆ ಮಾಡಬಲ್ಲ ಪ್ರಭಾವಿಗಳು ಇವರು. ಅಧಿಕಾರವೇ ಇಲ್ಲದ ಪ್ರಭಾರದ ಪ್ರಾಂಶುಪಾಲರು ಇನ್ನೇನು ಮಾಡಬಲ್ಲರು? ಕಾಲೇಜಿನ ಕೆಲಸ ಹೇಳುವುದೇ ಅಪರಾಧವಾಗಿದೆ. ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಮೈಗಳ್ಳರಿಗೆ ಸಿಗುವ ಸಹಕಾರ ಕರ್ತವ್ಯ ನಿಷ್ಠರಿಗೆ ಸಿಗುವುದಿಲ್ಲ. ಹಾದರಕ್ಕೆ ಆರತಿ ಬೆಳಗುವವರ ನಡುವೆ ಇರಲಾಗದೆ ಗರತಿ ದೂರನಿಲ್ಲುವಂತಾಗಿದೆ.

ಇಂತಹ ಅಶೈಕ್ಷಣಿಕ ವಾತಾವರಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಧ್ಯಾಪಕರು ಎದುರುಗೊಳ್ಳಬೇಕಿದೆ.

ಬದಲಾಗಬಹುದಾದ ಹೊಸ ಆಯಾಮಗಳಿಗೆ ಸಜ್ಜುಗೊಳಿಸುತ್ತಾ ಸಮಾಜದ ಕಣ್ಣಿನಲ್ಲಿ ಟೀಚರ್ಸ್ ಚೀಟರ್ಸ್ ಆಗುವ ಅಪಾಯದಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಬೇಕಾಗಿದೆ. 'ವಿದ್ವಾನ್ ಸರ್ವತ್ರ ಪೂಜ್ಯತೇ' ಅನ್ನುವ ಮಾತು ಸಾರ್ಥಕವಾಗಬೇಕಾದರೆ, ಸಮಾಜದ ಚಾರಿತ್ರ್ಯವನ್ನು ಸಮಾನತೆಯ ಮೂಲಕವೇ ಕಟ್ಟುವ ಕಾಯಕದಲ್ಲಿ ತನ್ನ ಹೊಣೆಗಾರಿಕೆ ಅನನ್ಯವಾದುದು ಎಂದು ನಿರೂಪಿಸಬೇಕಾಗಿದೆ. ಈ ಮೂಲಕ ಶಿಕ್ಷಣದ ಮತ್ತು ಶಿಕ್ಷಕರ ಘನತೆಯನ್ನು ಎತ್ತಿ ಹಿಡಿಯಬೇಕಾಗಿದೆ. ಅದಕ್ಕೆ ಅವಶ್ಯಕವಾದ ಚಾರಿತ್ರಿಕ ಪರಂಪರೆ ನಮ್ಮ ದೇಶಕ್ಕಿದೆ. ನೋಡುವ ವ್ಯವಧಾನ ಬೇಕು ಅಷ್ಟೇ. ಉತ್ತಮಿಕೆಯ ಅಹಮ್ಮನ್ನು ಪೋಷಿಸದೆ, ಎಲ್ಲರನ್ನೂ ಒಳಗೊಳ್ಳುವ ಬಹುಮುಖೀ ಸಾಧ್ಯತೆಗಳ ಶೋಧನೆಗೆ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ಪಾಲ್ಗೊಳ್ಳಬೇಕು. ಕದಡಿದಂತಿರುವ ದೇಶದ ಸಮಗ್ರತೆಗೆ ಬಹುನಂಬಿಕೆಗಳ ಆಯಾಮವನ್ನು ಭರವಸೆಯಿಂದ ತುಂಬಬೇಕು.

**ಕೊನೆಯ ಮಾತು :** ತನಗೆ ವಂಚಿಸಿ, ಊರ ಗೌಡನ ಮಗನಿಗೆ ಪಾಯಸ ಬಡಿಸಿದ ಹೆಂಡತಿಯನ್ನು ಮತ್ತು ಎಲ್ಲರೆದುರು ಹೂ ಕೊಟ್ಟ ರಾಜನನ್ನು ನಿರಾಕರಿಸಿ, ಚಾಟಿಯೇಟು ಕೊಟ್ಟ ಸೈನಿಕನನ್ನು ಮೆಚ್ಚಿದ ರಾಣಿಯನ್ನು ಕಂಡು ನಕ್ಕು ಮಳೆ ಬರಿಸಿದ ಪಂಡಿತನ ಮಾತು - ಪ್ರಜೆಯಿಂದ ಪ್ರಭುವಿನ ವರೆಗೆ ಗರತಿಯರು ಯಾರೂ ಇಲ್ಲ.



**- ದಾದಾಪೀರ್ ನವಿಲೇಹಾಳ್,**
ಸಹಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ದಾವಣಗೆರೆ, ಮೊಬೈಲ್: 9481309075



ದಾವಣಗೆರೆ : ರಾಜ್ಯ ಎಸ್‌ಸಿ ಮೋರ್ಚಾ ಅಧ್ಯಕ್ಷ ಎ. ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಸೋಮವಾರ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಎಸ್‌ಸಿ ಮೋರ್ಚಾ ಕಾರ್ಯಕಾರಿಣಿ ಸಭೆ ಆಯೋಜಿಸಲಾಗಿತ್ತು. ಸಭೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಬಸವರಾಜ ನಾಯ್ಕ, ಜಿಲ್ಲಾಧ್ಯಕ್ಷ ಹನುಮಂತ ನಾಯ್ಕ, ಬಿಜೆಪಿ ಮುಖಂಡರಾದ ಮಂಜಾನಾಯ್ಕ, ಬಿ.ಎಸ್. ಜಗದೀಶ್, ಅಂಜಿನಪ್ಪ, ಜಿ.ವಿ. ಗಂಗಾಧರ ಮತ್ತಿತರರು ಉಪಸ್ಥಿತರಿದ್ದರು.

# ಸಹೋದರನ ಪತ್ನಿ ಕೊಲೆಗೈದ ಆರೋಪಿತನ ಸೆರೆ



ದಾವಣಗೆರೆ, ಸೆ.7- ತನ್ನ ಸಹೋದರನ ಪತ್ನಿಯನ್ನೇ ಕೊಲೆಗೈದಿದ್ದ ಆರೋಪಿತನು ಇದೀಗ ಪೊಲೀಸರ ಅತಿಥಿಯಾಗಿದ್ದಾನೆ.

ಹೂವಿನಮಡು ಗ್ರಾಮದ ಕರಿಬಸಪ್ಪ (52) ಬಂಧಿತನು. ಸೆ.1,2020ರಂದು ತನ್ನ ತಮ್ಮ ರುದ್ರೇಶ ಅವರ ಪತ್ನಿ ನೀಲಮ್ಮ (48) ಎಂಬಾಕೆಯನ್ನು ಹೂವಿನಮಡು ಗ್ರಾಮದ ಮೆಕ್ಕೆಜೋಳ ಇರುವ ತೆಂಗಿನ ತೋಟದಲ್ಲಿ ತೆಂಗಿನ ಕಾಯಿ ಆರಿಸಿಕೊಂಡು ಬರಲು ಹೋದಾಗ ಬಂಧಿತ ಆರೋಪಿತನು ಸೀರೆ ಸೆರಗಿನಿಂದ ಕುತ್ತಿಗೆ ಹಿಸುಕಿ ಕೊಲೆ ಮಾಡಿ ಕೊರಳಲಿದ್ದ ಬಂಗಾರದ ಗುಂಡಿನ ಸರವನ್ನು ಅಪಹರಿಸಿದ್ದ. ಈ ಸಂಬಂಧ ಹದಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಸೆ.4, 2020ರಂದು ಆರೋಪಿತನನ್ನು ಬಂಧಿಸಿ, ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ತನ್ನ ಅಣ್ಣ-ತಮ್ಮರೊಂದಿಗೆ ದಾಯಾದಿ ಕಲಹವಿದ್ದು, ತನ್ನ ತಮ್ಮನ ಹೆಂಡತಿ ನೀಲಮ್ಮಳು ಯಾವಾಗಲೂ ತನಗೆ ಬೈಯ್ಯುತ್ತಿರುತ್ತಾಳೆಂಬ ಕಾರಣಕ್ಕೆ ಮನಸ್ಸಿನಲ್ಲಿಯೇ ಇಟ್ಟುಕೊಂಡು ಆಕೆ ಒಬ್ಬಳೇ ತೋಟದಲ್ಲಿದ್ದಾಗ ಹಿಂದಿನಿಂದ ಬಂದು ಆಕೆಯ ಸೀರೆ ಸೆರಗಿನಿಂದ ಕುತ್ತಿಗೆ ಹಿಸುಕಿ ಕೊಲೆ ಮಾಡಿರುವುದಾಗಿ ಬಂಧಿತನು ಒಪ್ಪಿಕೊಂಡಿದ್ದಾನೆ.

ಈ ದಿನ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸ್ಪಿ ಹನುಮಂತರಾಯ ನಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್, ಗ್ರಾಮಾಂತರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ ಅವರುಗಳ ಮಾರ್ಗದರ್ಶನದಲ್ಲಿ ತನಿಖಾಧಿಕಾರಿ ಗ್ರಾಮಾಂತರ ವೃತ್ತ ಸಿಪಿಐ ಬಿ. ಮಂಜುನಾಥ ನೇತೃತ್ವದಲ್ಲಿ ಹದಡಿ ಪೊಲೀಸ್ ಠಾಣೆ ಪಿಎಸ್‌ಐ ಪಿ. ಪ್ರಸಾದ್ ಮತ್ತು ಎಎಸ್‌ಐಗಳಾದ ಚನ್ನವೀರಪ್ಪ, ಏಕಾಂತಪ್ಪ ಹಾಗೂ ಸಿಬ್ಬಂದಿಗಳಾದ ನಾಗರಾಜ್, ಹರೀಶ್, ಶಿವಕುಮಾರ್, ಅರುಣ್ ಕುಮಾರ್ ಒಳಗೊಂಡ ತಂಡವು ಪ್ರಕರಣದ ಕೊಲೆ ಆರೋಪಿತನ ಪತ್ತೆ ಹಚ್ಚಿದೆ.

## ಓದುಗರ ಪತ್ರ

### ದಾರಿ ತಪ್ಪಿದ ಯುವಕರಿಗೆ 'ಹನುಮಂತರಾಯ' ಸಂಜೀವನಾಗಲಿ

**ಮಾನ್ಯರೇ,**

1965 ರಲ್ಲಿ ಭೂಮಿಗೆ ತುಂಬಾ ಅಪಾಯಕಾರಿ ಎಂದು ಡಿಡಿಟಿ ಪೌಡರನ್ನು ಬ್ಯಾನ್ ಮಾಡಿದ್ದರು. ಆದರೆ ಭೂಮಿ ಪುತ್ರರಾದ ಯುವ ಜನಾಂಗಕ್ಕೆ ಈಗಿನ ಡಿಡಿಟಿ (ಡ್ರಿಂಕ್ಸ್, ಡ್ರಗ್ಸ್, ಟೊಬ್ಯಾಕೋ) ಯಿಂದ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಗೊತ್ತಿದ್ದರೂ ಇದನ್ನು ಬ್ಯಾನ್ ಮಾಡದಿರುವುದು ಶೋಚನೀಯ.

ಒಂದು ದೇಶವನ್ನು ನಾಶ ಮಾಡಲು ಅಣುಬಾಂಬ್, ನ್ಯೂಕ್ಲಿಯರ್ ಮಿಸೈಲ್ ಅಥವಾ ಶತ್ರು ರಾಷ್ಟ್ರದ ದಾಳಿ ಬೇಕಿಲ್ಲ. ಆ ದೇಶದ ಯುವ ಜನತೆಯನ್ನು ದುಶ್ಚಟಗಳ ದಾಸರನ್ನಾಗಿ ಮಾಡಿದರಷ್ಟೇ ಸಾಕು. ಯುವಕರ ನಾಶದಿಂದ ಆ ನಾಡು ಅನಾಥ ಮಕ್ಕಳ, ವಿಧವೆಯರ, ಮುದುಕರ ಕೊಂಪೆಯಾಗುತ್ತದೆ.

ಮನಶಾಸ್ತ್ರಜ್ಞರ ಪ್ರಕಾರ ಡ್ರಿಂಕ್ಸ್ ಒಮ್ಮೆ ತೆಗೆದುಕೊಂಡರೆ ನಂತರ ಬಿಡುವ ಮನಸಿದ್ದರೆ ಬಿಡಬಹುದು. ಆದರೆ ಡ್ರಗ್ಸ್ ಒಮ್ಮೆ ತೆಗೆದುಕೊಂಡರೆ ಬಿಡಲಾಗುವುದಿಲ್ಲ ಎಂದಿದ್ದಾರೆ. ಇಂತಹ ವಿಷ ಎಲ್ಲರ ದೇಹ ಸೇರಿ ಕೆಟ್ಟ ಸಮಾಜ ನಿರ್ಮಾಣವಾಗುವ ಮುನ್ನ ದಕ್ಷ ಅಧಿಕಾರಿಗಳು ಜವಾಬ್ದಾರಿ ತೆಗೆದುಕೊಂಡು ಕಾರ್ಯವೆಸಗಬೇಕು. ಸಾರ್ವಜನಿಕರು ಸಹ ಸಮಾಜದ ಹಿತದೃಷ್ಟಿಯಿಂದ ಮಾಹಿತಿ ಇದ್ದವರು ಜೀವ ಉಳಿಸುವ ಸದಾಶಯದಿಂದ ಪೊಲೀಸರಿಗೆ ಗುಪ್ತ ಮಾಹಿತಿ ನೀಡಬೇಕಾಗಿ ವಿನಂತಿ.

ದಾವಣಗೆರೆಯಲ್ಲೂ ಡ್ರಗ್ಸ್ ಹಾವಳಿಯಿದೆ ಎಂಬ ವದಂತಿಯಿದ್ದು, ಗೃಹ ಸಚಿವ ಬೊಮ್ಮಾಯಿ ಅವರ ಪ್ರೀತಿಯ ಅಧಿಕಾರಿಯಾಗಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಹಾಗೂ ಅವರ ಸೇನೆ ಹೋರಾಟ ನಡೆಸಿ, ಡ್ರಗ್ಸ್ ಎಂಬ ಕಳೆ, ಕೊಳೆ ಇದ್ದಲ್ಲಿ ಕಿತ್ತೆಸೆದು ಯುವ ಲಕ್ಷ್ಮಣರಿಗೆ ಸಂಜೀವನಾಗಿ ಬರಲಿ ಎಂದು ನಮ್ಮ ಮನವಿ.

**- ಶಿವನಕೆರೆ ಬಸವಲಿಂಗಪ್ಪ**
ಕರುಣಾ ಜೀವಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ.

## ಅಭಿಮಾನಿಗಳಿಂದ ಕಿಚ್ಚ ಸುದೀಪ್ ಹುಟ್ಟುಹಬ್ಬ ಆಚರಣೆ



ದಾವಣಗೆರೆ,ಸೆ.7- ಚಿತ್ರನಟ ಕಿಚ್ಚ ಸುದೀಪ್ ಅವರ ಹುಟ್ಟುಹಬ್ಬವನ್ನು ಆಶ್ರಯ ಹಿರಿಯ ವನಿತೆಯರ ಆನಂದಧಾಮ ವೃದ್ಧಾಶ್ರಮದಲ್ಲಿ ಆಚರಿಸಲಾಯಿತು. ಊಟದ ವ್ಯವಸ್ಥೆ ಹಾಗೂ ಮಾಸ್ಕ್‌ಗಳ ವಿತರಣೆಯನ್ನು ಜಿಲ್ಲಾ ಕಿಚ್ಚ ಸುದೀಪ್ ಅಭಿಮಾನಿಗಳ ಸಂಘದ ವತಿಯಿಂದ ಮಾಡಲಾಯಿತು.

## ರಾಣೇಬೆನ್ನೂರು : ರೈತರು ಭದ್ರತಾ ಠೇವಣಿ ಪಾವತಿಸಲು ಹೆಸ್ಕಾಂ ನಿರ್ದೇಶನ

ರಾಣೇಬೆನ್ನೂರು, ಸೆ.7 - ಸರ್ಕಾರದ ಆದೇಶದಂತೆ ಸೆಪ್ಟೆಂಬರ್ 25ರೊಳಗೆ ಮೂಲ ಸೌಕರ್ಯ ಶುಲ್ಕ 10,000 ರೂಪಾಯಿ ಮತ್ತು ಎಚ್.ಪಿ.ಗೆ 1300 ರೂಪಾಯಿ ಭದ್ರತಾ ಠೇವಣಿಯನ್ನು ಪಾವತಿಸಿಕೊಳ್ಳಲು ಹೆಸ್ಕಾಂನಿಂದ ನಿರ್ದೇಶಿಲಾಗಿರುತ್ತದೆ.

ಸದರಿ ಹಣ ಸಂದಾಯ ಮಾಡಿದ ರೈತರಿಗೆ ಮಾತ್ರ ಜೇಷ್ಠತಾ ಆಧಾರದ ಮೇಲೆ ವಿದ್ಯುತ್ ಕಾಮಗಾರಿ ಪೂರೈಸಲಾಗುವುದು. ಈ ಸಂಬಂಧ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಸಂಬಂಧಿಸಿದ ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಥವಾ ಕಾರ್ಯನಿರ್ವಾಹಕ ಇಂಜಿನಿಯರ್ ಹೆಸ್ಕಾಂ, ರಾಣೇಬೆನ್ನೂರು ವಿಭಾಗ ಇವರಿಗೆ ಖುದ್ದಾಗಿ ಅಥವಾ ಲಿಖಿತವಾಗಿ ಸಂಪರ್ಕಿಸಲು ಹೆಸ್ಕಾಂ ತಿಳಿಸಿದೆ.

## ಐಎಂಎ ಹಗರಣ : ಇಬ್ಬರು ಅಧಿಕಾರಿಗಳ ವಿರುದ್ಧ ಆರೋಪ ಪಟ್ಟಿ

ನವದೆಹಲಿ, ಸೆ. 7 – ಬಹುಕೋಟಿ ಐಎಂಎ ಹಗರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಇಬ್ಬರು ಅಧಿಕಾರಿಗಳ ವಿರುದ್ಧ ಸಿಬಿಐ ಆರೋಪ ಪಟ್ಟಿ ದಾಖಲಿಸಿದೆ. ಇವರು ಲಂಚ ಪಡೆದು ಐಎಂಎ ಪ್ರವರ್ತಕ ಮೊಹಮ್ಮದ್ ಮನ್ಸೂರ್ ಖಾನ್‌ಗೆ ಕ್ಲೀನ್‌ಚಿಟ್ ನೀಡಿದ್ದರು ಎಂದು ಆರೋಪಿಸಲಾಗಿದೆ.

ಆಗ ಬೆಂಗಳೂರು ಉತ್ತರ ತಾಲ್ಲೂಕಿನ ಸಹಾಯಕ ಆಯುಕ್ತರಾಗಿದ್ದ ಎಲ್.ಸಿ. ನಾಗರಾಜ್ ಹಾಗೂ ಗ್ರಾಮ ಲೆಕ್ಕಾಧಿಕಾರಿ ಎನ್. ಮಂಜುನಾಥ್ ವಿರುದ್ಧ ಆರೋಪ ಪಟ್ಟಿ ದಾಖಲಿಸಲಾಗಿದೆ. ಐಎಂಎ ಹಗರಣ ಸುಮಾರು 4 ಸಾವಿರ ಕೋಟಿ ರೂ.ಗಳದ್ದಾಗಿದೆ. ನಾಗರಾಜ್ 4.5 ಕೋಟಿ ರೂ. ಲಂಚ ಪಡೆದರೆ, ಮಂಜುನಾಥ್ 10 ಲಕ್ಷ ರೂ. ಲಂಚ ಪಡೆದಿರುವುದಾಗಿ ಸಿಬಿಐ ಆರೋಪಿಸಿದೆ. 2019ರ ಮಧ್ಯಾವಧಿಯಲ್ಲಿ ಮನ್ಸೂರ್ ಖಾನ್ ಹಠಾತ್ತನೆ ದುಬೈಗೆ ಪಲಾಯನ ಮಾಡಿದಾಗ ಹಗರಣ ಬೆಳಕಿಗೆ ಬಂದಿತ್ತು. ನಂತರ ಖಾನ್ ಹಸ್ತಾಂತರಕ್ಕೆ ಕ್ರಮ ತೆಗೆದುಕೊಳ್ಳಲಾಗಿತ್ತು.

ಆಗ ಬೆಂಗಳೂರು ನಗರ ಜಿಲ್ಲೆಯ ಅಧಿಕಾರಿಯಾಗಿದ್ದ ಬಿ.ಎಂ. ವಿಜಯ್ ಶಂಕರ್ ಅವರು ನಿಧನರಾಗಿದ್ದ ಕಾರಣ ಅವರ ಹೆಸರನ್ನು ಆರೋಪ ಪಟ್ಟಿಯಲ್ಲಿ ದಾಖಲಿಸಿಲ್ಲ.

ಮನ್ಸೂರ್ ಖಾನ್ ವಾಮ ಮಾರ್ಗದ ಮೂಲಕ ಠೇವಣಿ ಪಡೆದಿರುವುದಾಗಿ ಆರೋಪಿಸಲಾಗಿದೆ. ಈ ಹಗರಣದ ಮೊತ್ತ 4 ಸಾವಿರ ಕೋಟಿ ರೂ. ಎಂದು ಅಂದಾಜಿಸಲಾಗಿದೆ.

## ಹೆಸರು ಬದಲಿಸಿಕೊಂಡ ಐಎಎಸ್ ಒಕ್ಕೂಟ

ನವದೆಹಲಿ, ಸೆ. 7 - ವಸಾಹತುಶಾಹಿ ಕಾಲದಲ್ಲಿ ಇರಿಸಲಾಗಿದ್ದ ಹೆಸರನ್ನು ಕೈಬಿಟ್ಟಿರುವ ನಾಗರಿಕ ಸೇವಾ ಅಧಿಕಾರಿಗಳ ಒಕ್ಕೂಟ ತನ್ನ ಹೆಸರನ್ನು 'ಐಎಎಸ್ ಒಕ್ಕೂಟ' ಎಂದು ಬದಲಿಸಿಕೊಂಡಿದೆ.

ಇದುವರೆಗೂ ಒಕ್ಕೂಟದ ಹೆಸರು 'ಇಂಡಿಯನ್ ಸಿವಿಲ್ ಅಂಡ್ ಅಡ್ಮಿನಿಸ್ಟ್ರೇಟಿವ್ ಸರ್ವೀಸಸ್ (ಸೆಂಟ್ರಲ್)' ಎಂದಾಗಿತ್ತು. ವಸಾಹತು ಕಾಲದಲ್ಲಿ ಭಾರತೀಯ ಆಡಳಿತ ಸೇವೆಯ ಹೆಸರು ಇಂಡಿಯನ್ ಸಿವಿಲ್ ಸರ್ವೀಸಸ್ ಎಂದಿತ್ತು. ಅದರ ಉಲ್ಲೇಖವನ್ನು ಬದಲಿಸಿಕೊಳ್ಳಲಾಗಿದೆ. ಈ ಬಗ್ಗೆ ಶನಿವಾರ ನಡೆದ ಸಂಘಟನೆಯ ಸಾಮಾನ್ಯ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.

## ಎಸ್ಸೆಸ್‌ಗೆ 'ಪ್ಲಾಟಿನಂ'

**(1ನೇ ಪುಟದಿಂದ)** ಈ ಹಿಂದೆ ಆರಂಭಿಸಿತ್ತು. ಅದರ ಅನ್ವಯ ತೆರಿಗೆ ಪಾವತಿಯ ಮೊತ್ತ ಸೇರಿದಂತೆ ಕೆಲ ಅಂಶಗಳನ್ನು ಆಧರಿಸಿ ಪುರಸ್ಕಾರದ ಪತ್ರ ನೀಡುತ್ತಾ ಬರಲಾಗಿದೆ. 1 ಕೋಟಿ ರೂ.ಗಳಿಗೂ ಹೆಚ್ಚಿನ ಆದಾಯ ತೆರಿಗೆ ಪಾವತಿಸುವವರು ಪ್ಲಾಟಿನಂ ಗೌರವ ಪಡೆಯುವ ಅವಕಾಶ ಪಡೆದುಕೊಳ್ಳುತ್ತಾರೆ. ಬಂಗಾರ, ಬೆಳ್ಳಿ ಹಾಗೂ ಕಂಚಿನ ಪ್ರಶಂಸಾ ಪತ್ರಗಳನ್ನೂ ಸಹ ಇಲಾಖೆ ಪ್ರದಾನ ಮಾಡುತ್ತದೆ.

## 8 ಸಾವಿರ ಕೋಟಿ ನಷ್ಟ

**(1ನೇ ಪುಟದಿಂದ)** ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವ ಜೊತೆಗೆ, ರಸ್ತೆ, ಸೇತುವೆ, ವಿದ್ಯುತ್ ಕಂಬ, ಶಾಲೆ, ಅಂಗನವಾಡಿ ಹಾಗೂ ಸರ್ಕಾರಿ ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಕೋವಿಡ್ ನಿಯಂತ್ರಣ ಹಾಗೂ ಪ್ರವಾಹ ಪರಿಸ್ಥಿತಿ ನಿಭಾಯಿಸಲು ರಾಜ್ಯ ವಿಕೋಪ ಪರಿಹಾರ ನಿಧಿಯಿಂದ 460 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನಷ್ಟು ಹೆಚ್ಚಿನ ನೆರವಿನ ಅಗತ್ಯವಿದೆ ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ಎಸ್.ಡಿ.ಆರ್.ಎಫ್. ಹಾಗೂ ಎನ್.ಡಿ.ಆರ್.ಎಫ್. ನಿಧಿಗಳ ಮಾರ್ಗಸೂಚಿಗಳಿಗೆ ಕೇಂದ್ರ ಸರ್ಕಾರ ತಕ್ಷಣ ಬದಲಾವಣೆ ತರುವ ಮೂಲಕ ರಾಜ್ಯದ ಜನತೆಗೆ ಹೆಚ್ಚಿನ ನೆರವು ನೀಡಬೇಕೆಂದು ಅವರು ಕೇಳಿದ್ದಾರೆ.

## ನ್ಯಾಮತಿ ಉಪವಿಭಾಗದಲ್ಲಿ ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಸ್ಕಾಂ ನ್ಯಾಮತಿ ಉಪವಿಭಾಗದ ವ್ಯಾಪ್ತಿಗೆ ಬರುವ 66/11 ಕೆವಿ ನ್ಯಾಮತಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಎಲ್ಲಾ ಫೀಡರ್‌ಗಳ ದೋಷಪೂರಿತ ಬಸ್ ಬಾರ್‌ಗಳನ್ನು ಬದಲಾವಣೆ ಮಾಡುವ ಕೆಲಸವನ್ನು ಹಮ್ಮಿಕೊಂಡಿದ್ದು, ಸದರಿ ವಿವಿ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳ ಸಂಪರ್ಕವನ್ನು ತಾತ್ಕಾಲಿಕವಾಗಿ ಸಮೀಪದ ಬೇರೆ ವಿವಿ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳಿಗೆ ಸಂಪರ್ಕ ನೀಡಲಾಗುವುದು.


ಇಂದಿನಿಂದ ಇದೇ ದಿನಾಂಕ 12 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಬಹುದು ಎಂದು ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಿ.ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

## ಎಐಡಿಎಸ್‌ಓದಿಂದ ನಗರದಲ್ಲಿ ಇಂದು ಹೋರಾಟ

ವಿದ್ಯಾರ್ಥಿಗಳ ಬಸ್‌ಪಾಸ್ ರಿಯಾಯ್ತಿಯನ್ನು ಹಿಂಪಡೆದ ವಿದ್ಯಾರ್ಥಿ ವಿರೋಧಿ ಸರ್ಕಾರದ ನಡೆಯನ್ನು ಖಂಡಿಸಿ ರಾಜ್ಯವ್ಯಾಪಿ ಹೋರಾಟವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ತಿಳಿಸಿದೆ. ಬಸ್‌ಪಾಸ್ ಹಿಂಪಡೆಯುವ ಅಪ್ರಜಾತಾಂತ್ರಿಕ ನಡೆಯನ್ನು ಸರ್ಕಾರ ಈ ಕೂಡಲೇ ಹಿಂಪಡೆಯಬೇಕು ಎಂದು ಎಐಡಿಎಸ್‌ಓ ಆಗ್ರಹಿಸುತ್ತದೆ ಎಂದು ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಜಿ. ಸೌಮ್ಯಸ ಜಿಲ್ಲಾ ಕಾರ್ಯದರ್ಶಿ ಎನ್. ಪೂಜಾ ತಿಳಿಸಿದ್ದಾರೆ.

# ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮುಖ್ಯ

**ಹರಿಹರದಲ್ಲಿನ ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಎಸ್. ರಾಮಪ್ಪ**




ಹರಿಹರ, ಸೆ. 7- ದೇಶದ ಮಕ್ಕಳ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾಗಿರುತ್ತದೆ ಎಂದು ಶಾಸಕ ಎಸ್. ರಾಮಪ್ಪ ಅಭಿಪ್ರಾಯಪಟ್ಟರು.

ನಗರದ ಗುರು ಭವನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಆದರ್ಶ ಶಿಕ್ಷಕ, ತತ್ವಜ್ಞಾನಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಅಂಗವಾಗಿ ನಡೆದ ಶಿಕ್ಷಕರ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯೆ ಎಂಬುದು ಕೇವಲ ಶ್ರೀಮಂತ ವರ್ಗ ದವರಿಗೆ ಮಾತ್ರ ಸೀಮಿತವಾಗಿರದೆ, ಎಲ್ಲಾ ವರ್ಗದವರಿಗೂ ಸರಿ ಸಮಾನವಾಗಿದೆ. ಹಣದಿಂದ ವಿದ್ಯೆ ಕೊಂಡುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಮಕ್ಕಳು ಶಿಕ್ಷಣ ಕಲಿಯುವಾಗ ಏಕಾಗ್ರತೆಯಿಂದ ಕಲಿತರೆ ಉನ್ನತ ಪದವಿ ಪಡೆಯಲು ಸಾಧ್ಯ. ನಮ್ಮ ತಾಲ್ಲೂಕಿನ ವಿದ್ಯಾರ್ಥಿ ತಂದೆ-ತಾಯಿ ಬಡತನದಲ್ಲಿದ್ದರೂ ಸಹ ಹೆಚ್ಚು ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿ ರಾಜ್ಯದ ಇತರೆ ವಿದ್ಯಾರ್ಥಿಗಳಿಗೆ ಮಾದರಿಯಾಗಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸಾಧನೆ ಮತ್ತು ಅವರಲ್ಲಿ ಇರುವ ಮೌಲ್ಯಾಧಾರಿತ ಗುಣಗಳನ್ನು ಇಂದಿನ ಪೀಳಿಗೆಗೆ ತಿಳಿಸುವುದು ಬಹುಮುಖ್ಯವಾಗಿದೆ ಎಂದರು.

ಜೀವನದಲ್ಲಿ ದೊಡ್ಡ ಪ್ರಮಾಣದಲ್ಲಿ ಗುರಿ ಸಾಧಿಸಲು ಇಂತಹ ಮಹಾನ್ ವ್ಯಕ್ತಿಗಳು ನಡೆದು ಬಂದ ದಾರಿಯನ್ನು ನೋಡಿ ಅವರಂತೆ ನಾನು ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಬೇಕು ಎಂಬ ಛಲ ವಿದ್ಯಾರ್ಥಿಗಳಿಗೆ ಹುಟ್ಟುತ್ತದೆ. ಆದ್ದರಿಂದ ಅವರೂ ಕೂಡ ಮುಂದೆ ಸಮಾಜದಲ್ಲಿ ಅಡ್ಡದಾರಿ ಕಡೆ ಗಮನ ಹರಿಸದೆ ಉತ್ತಮ ದಾರಿಯಲ್ಲಿ ಸಾಗಿ ಸಮಾಜದಲ್ಲಿ ಉನ್ನತ ಸ್ಥಾನಮಾನ ಗಳಿಸಿ ಉತ್ತಮ ಜೀವನ ರೂಪಿಸಿಕೊಂಡು ಬದುಕುತ್ತಾರೆ. ಶಿಕ್ಷಣ ಪಡೆಯುವ ವೇಳೆ ಶಾಲೆ ವಿದ್ಯಾರ್ಥಿಗಳು ಹೆಚ್ಚು ಅಂಕ ಮತ್ತು ಪ್ರಶಸ್ತಿ ಪಡೆದಾಗ ಮೊದಲು ಅವರ ಶಾಲೆಯ ಶಿಕ್ಷಕರು ಹೆಚ್ಚು ಸಂತೋಷ ಪಡುತ್ತಾರೆ. ಕಾರಣ, ಆ ವಿದ್ಯಾರ್ಥಿ ಶಿಕ್ಷಕರ ಶ್ರಮದ ಫಲದಿಂದ ಹೆಚ್ಚು ಅಂಕ ಗಳಿಸಲು ಸಾಧ್ಯವಾಗಿರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿ.ಪಂ. ಸದಸ್ಯೆ ಹೇಮಾ ವತಿ ಭೀಮಪ್ಪ, ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ಉಪಾಧ್ಯಕ್ಷೆ ಜಯಮ್ಮ ಬಸವಲಿಂ ಗಪ್ಪ, ಎಪಿಎಂಸಿ ಅಧ್ಯಕ್ಷ ಹನುಮಂತ ರೆಡ್ಡಿ, ಬಿಇಓ ಬಸವರಾಜಪ್ಪ, ಬಿ.ಆರ್.ಸಿ. ಶಿವಾ ನಂದ್, ಪಿ.ಆರ್. ರಾಮಕೃಷ್ಣ, ಕೆ.ಆರ್. ವಿಶ್ವ ನಾಥ್, ಎಸ್. ಮಂಜುನಾಥ್, ಗುರುಬಸಪ್ಪ, ಸಿ.ಆರ್. ಪರಮೇಶ್ವರಪ್ಪ, ವಿಜಯ ಮಹಾಂ ತೇಶ್, ಶಿಕ್ಷಕಾರದ ಅಂಗಡಿ ರೇವಣಸಿದ್ದಪ್ಪ, ಅಂಗಡಿ ಮಲ್ಲಿಕಾರ್ಜುನ್, ಬಸವರಾಜಯ್ಯ, ಚಂದ್ರಪ್ಪ ದೊಗ್ಗಳ್ಳಿ, ಮಂಜುನಾಥ ಬಿದರಿ, ಪ್ರಕಾಶ್, ಡಿ.ವಿ. ಡೊಂಕಪ್ಪ, ಗದಿಗೆಪ್ಪ ಹೊಸಮನೆ, ರಿಯಾಜ್ ಅಹ್ಮದ್, ಸಿದ್ದರಾಮೇಶ್, ವೀರಪ್ಪ, ತಿಪ್ಪಣ್ಣರಾಜ್, ರೇವಣ್ಣನಾಯ್ಕ, ನಿಸಾರ್ ಅಹ್ಮದ್, ಸಿದ್ದಲಿಂಗಪ್ಪ, ಶ್ರೀನಿವಾಸ, ಸಾವಿತ್ರಿಭಾಯಿ ಫುಲೆ ಶಿಕ್ಷಕಿಯರ ಸಂಘದ ಜ್ಯೋತಿ, ಪುಷ್ಪಾ, ರೇಣುಕಾಂಬ, ಉಮಾದೇವಿ ಹಾಗೂ ಇತರರು ಹಾಜರಿದ್ದರು.

# ಒಳಮೀಸಲಾತಿ ಕಾಯ್ದೆ ಜಾರಿಗಾಗಿ ಡಿಎಸ್‌ಎಸ್ ಪ್ರತಿಭಟನೆ



ದಾವಣಗೆರೆ, ಸೆ.7- ಒಳ ಮೀಸಲಾತಿ ಜಾರಿ ಕುರಿತು ನೀಡಿರುವ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಕರ್ನಾಟಕ ರಾಜ್ಯ ಸರ್ಕಾರವು ಸೆಪ್ಟೆಂಬರ್‌ನಲ್ಲಿ ನಡೆಯುವ ವಿಧಾನಸಭಾ ಅಧಿವೇಶನದಲ್ಲಿ ಮಂಡಿಸಿ ಒಳ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಆಗ್ರಹಿಸಿ ನಗರದಲ್ಲಿ ನಿನ್ನೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಸಂಚಾಲಕ ಬಿ. ದುಗ್ಗಪ್ಪ ನೇತೃತ್ವದಲ್ಲಿ ಪಿ.ಬಿ. ರಸ್ತೆಯ ಶ್ರೀ ಶನೈಶ್ಚರ ಸ್ವಾಮಿ (ಪಂಚ ಲಿಂಗೇಶ್ವರ) ದೇವಸ್ಥಾನದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಸಾಂಕೇತಿಕವಾಗಿ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರ ಮಲ್ಲಪ್ಪ ಅವರ ಮುಖಾಂತರ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು.

2005ರಲ್ಲಿ ರಾಜ್ಯ ಸರ್ಕಾರ ಒಳ ಮೀಸಲಾತಿ ವರ್ಗೀಕರಣ ಅಧ್ಯಯನಕ್ಕಾಗಿ ಆಯೋಗ ರಚಿಸಿತ್ತು. ನ್ಯಾ. ಎ.ಜೆ. ಸದಾಶಿವ ಅವರು ಆಯೋಗದ ಅಧ್ಯಕ್ಷರಾಗಿ ಅಧ್ಯಯನ ನಡೆಸಿ 2012ರ ಜೂ.12ರಂದು ಆಗಿನ ಸರ್ಕಾರಕ್ಕೆ ಒಳಮೀಸಲಾತಿಗೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿದ್ದರು. ಯಾವುದೇ ಸರ್ಕಾರಗಳು ವರದಿ ಅಂಗೀಕರಿಸಲಿಲ್ಲ. ಹೋರಾಟಗಳು ನಡೆದರೂ ಸರ್ಕಾರ ಮಣಿಯಲಿಲ್ಲ. ವರದಿ ಅಂಗೀಕರಿಸಿ ಕೇಂದ್ರಕ್ಕೆ ಸಲ್ಲಿಸಲಿಲ್ಲ. ವರದಿ ಮೂಲೆಗುಂಪಾಯಿತು. ಆದರೆ, ನೊಂದ ಜನ ಸಮುದಾಯದ ಸಾಮಾಜಿಕ ನ್ಯಾಯದ ಕೂಗು ಆಲಿಸಿದ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಾಧೀಶರ ಪೀಠ, ಒಳಮೀಸಲು ವರ್ಗೀಕರಣ ಮಾಡುವ ಅಧಿಕಾರ ರಾಜ್ಯದ ಶಾಸನ ಸಭೆಗಳಿಗೆ ಇದೆ ಎಂದು ಆ.27ರಂದು ಅಭಿಪ್ರಾಯ ನೀಡಿತ್ತು. ಇದರಿಂದಾಗಿ ಒಳಮೀಸಲು ಜಾರಿಗಿದ್ದ ಅಡೆತಡೆ ನಿವಾರಣೆಯಾಗಿದೆ. ಸೆಪ್ಟೆಂಬರ್‌ನಲ್ಲಿ ನಡೆಯುವ ರಾಜ್ಯ ವಿಧಾನಸಭಾ ಅಧಿವೇಶನದಲ್ಲಿ ಈ ಆಯೋಗದ ವರದಿ ಮಂಡಿಸಿ ಒಳ ಮೀಸಲು ಕಾಯ್ದೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ಸಿ.ಟಿ. ಸದಾನಂದ, ತಾಲ್ಲೂಕು ಸಂಚಾಲಕ ಹೆಚ್. ಮಲ್ಲಿಕಾರ್ಜುನ ವಂದಾಲಿ, ಬೂಸೇನಹಳ್ಳಿ ನಾಗರಾಜ, ಸುರೇಶ್ ತೆರದಾಳ್, ಓಬಳೇಶ್, ಟಿ. ರವಿಕುಮಾರ್, ಸತೀಶ್‌ಕುಮಾರ್ ಬಾಡ, ಶ್ರೀನಿವಾಸ್, ನವಿಲೇಹಾಳ್ ಕೃಷ್ಣಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ವಿದ್ಯಾರ್ಥಿಗಳಿಗೆ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ,ಸೆ.7- ನಗರದ ಗೌತಮ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಹೆಚ್ಚು ಅಂಕಗಳನ್ನು ಗಳಿಸಿದ ಚಲುವಾದಿ ಸಮಾಜದ 25 ಪ್ರತಿಭಾನ್ವಿತ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ಸಂಘದ ಕಚೇರಿಯಲ್ಲಿ ಇದೇ ದಿನಾಂಕ 15ರೊಳಗೆ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 94491-63356, 98862 01014, 91089 53018.

## ಆದರ್ಶ ವಿದ್ಯಾಲಯದ ಪ್ರವೇಶ ಆರಂಭ

**ಹರಪನಹಳ್ಳಿ**

ಹರಪನಹಳ್ಳಿ, ಸೆ.7- ಆದರ್ಶ ವಿದ್ಯಾಲಯ ಅನಂತನಹಳ್ಳಿ ಶಾಲೆಯಲ್ಲಿ 6ನೇ ತರಗತಿ ವಿದ್ಯಾರ್ಥಿಗಳ ಪ್ರವೇಶ ಆರಂಭವಾಗಿದ್ದು, ಮೊದಲ ಸುತ್ತಿನ 80 ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟವಾಗಿದ್ದು ಈಗಾಗಲೇ ವಿದ್ಯಾರ್ಥಿ ಗಳ ಪೋಷಕರಿಗೆ ಸಂದೇಶ ರವಾನೆಯಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳು ಇದೇ ದಿನಾಂಕ 9 ರೊಳಗೆ ಶಾಲೆಗೆ ಪ್ರವೇಶ ಪಡೆಯಬೇಕು ಎಂದು ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ಕೆ.ಶಿವಾನಂದಪ್ಪ (9980 7138 64) ತಿಳಿಸಿದ್ದಾರೆ.


॥ ಶ್ರೀ ಕುಲದೇವತಾ ಪ್ರಸನ್ನ ॥

**ಪುಣ್ಯಸ್ಮರಣೆ – ವರ್ಷಾಂತಿಕ ಕಾರ್ಯಕ್ರಮ**



**ದಿ. ಕಚವಿ ಗಂಗಾಧರ್ ನಾಗಪ್ಪ ವಿಠ್ಠಲಕರ್**

ನಿಧನ : 20.09.2019

ನೀವು ನಮ್ಮನ್ನಗಲಿ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ ;

ಇವರ 'ವರ್ಷಾಂತಿಕ ಕಾರ್ಯಕ್ರಮ'ವನ್ನು ದಿನಾಂಕ 08.09.2020ರ ಮಂಗಳವಾರ ನಮ್ಮ ಮನೆಯಲ್ಲಿ ಏರ್ಪಡಿಸಿದ್ದೇವೆ.

ಮೃತರ ಧರ್ಮಪತ್ನಿ : ಶ್ರೀ ಪದ್ಮಾವತಿ ಮತ್ತು ಮಕ್ಕಳು,
ಸಹೋದರರು, ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.

- ಶ್ರೀ ಮಾರುತಿ ಜ್ಯೂಯಲರ್ಸ್, ಚೌಕಿಪೇಟೆ, ದಾವಣಗೆರೆ. ಮೊ. : 98459 49953
- ಶ್ರೀ ವೆಂಕಟೇಶ್ವರ ಜ್ಯೂಯಲರಿ ಮಾರ್ಟ್, ಚೌಕಿಪೇಟೆ, ದಾವಣಗೆರೆ.
- ಅಮೃತೇಶ್ವರಿ ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 07.09.2020ರಂದು ನಿಧನರಾದ
ಶ್ರೀ ಅಂಬಾಭವಾನಿ ಕೋ-ಆಪರೇಟಿವ್
ಬ್ಯಾಂಕಿನ ವ್ಯವಸ್ಥಾಪಕರಾದ


**ಶ್ರೀ ಶಿವಾಜಿರಾವ್ ಜಾಧವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು
ಹಾಗೂ ಅವರ ಅಗಲಿಕೆಯ ದುಃಖ ಭರಿಸುವ
ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ದಯಪಾಲಿಸಲೆಂದು
ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಯಶವಂತರಾವ್ ಜಾಧವ್,** ಗೌರವಾಧ್ಯಕ್ಷರು | **ಮಾಲತೇಶರಾವ್ ಜಾಧವ್,** ಅಧ್ಯಕ್ಷರು

**ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ, ದಾವಣಗೆರೆ.**

**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆ ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕರು, ಬಿಜೆಪಿ ಮುಖಂಡರು,
ಜಗಳೂರು ತಾಲ್ಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷರು,
ಸರಳ ಸಜ್ಜನಿಕೆಯ ವ್ಯಕ್ತಿಗಳು, ನಮ್ಮ ಮಾರ್ಗದರ್ಶಕರೂ ಆದ

**ಸನ್ಮಾನ್ಯ ಶ್ರೀ ಸೂರಡ್ಡಿಹಳ್ಳಿ ಶರಣಪ್ಪ**

ಅವರ ಅಕಾಲಿಕ ಮರಣ ನಮಗೆಲ್ಲಾ ದುಃಖ ಉಂಟು ಮಾಡಿದೆ. ಅವರಿಗೆ ನಮ್ಮೆಲ್ಲರ
ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಶಾಸಕ ಎಸ್.ವಿ. ರಾಮಚಂದ್ರ ಅಭಿಮಾನಿ ಬಳಗ**
**ಜಗಳೂರು ವಿಧಾನಸಭಾ ಕ್ಷೇತ್ರ, ಜಗಳೂರು.**

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 07.09.2020ರಂದು ನಿಧನರಾದ ಕೃಷಿ ಉತ್ಪನ್ನ ಮಾರುಕಟ್ಟೆ
ಸಮಿತಿ ಸಹಕಾರ ಕ್ಷೇತ್ರದ ಸದಸ್ಯರೂ, ರೈತರ ಫಸಲುಗಳ ಪರಿವರ್ತನಾ
ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ ಅಧ್ಯಕ್ಷರೂ ಆದ

**ಶ್ರೀ ಎಸ್. ಕಲ್ಲೇಶಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ವಾಯುವಿಹಾರ ಬಳಗ, ಬಾಸ್ಕೆಟ್ ಬಾಲ್ ಗ್ರೌಂಡ್,**
**ಹೈಸ್ಕೂಲ್ ಮೈದಾನ, ದಾವಣಗೆರೆ.**

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 07.09.2020ರಂದು ನಿಧನರಾದ
ವೀರಶೈವ ಲಿಂಗಾಯಿತ ಪಂಚಮಸಾಲಿ ಸಮಾಜದ
ದಾವಣಗೆರೆ ಜಿಲ್ಲಾ ಘಟಕದ ಮಾಜಿ ಪ್ರಧಾನ ಕಾರ್ಯದರ್ಶಿಗಳೂ,
ಸಮಾಜದ ಗಣಕೀಕರಣದ ರೂವಾರಿಗಳೂ, ನಮ್ಮ ಆತ್ಮೀಯರೂ ಆದ

**ಶ್ರೀ ಹದಡಿ ನಟರಾಜ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಮಹಾಂತೇಶ್ ವಿ. ಒಣರೊಟ್ಟಿ
**ಶ್ರೀ ಬಸವೇಶ್ವರ ಟ್ರಾನ್ಸ್‌ಪೋರ್ಟ್ ಕಂ.**
ಬಿ.ಟಿ. ಲೇ ಔಟ್, ಆರ್.ಎಂ.ಸಿ. ಲಿಂಕ್ ರೋಡ್, ದಾವಣಗೆರೆ.
ಫೋ. : 08192-275287, ಮೊ. 94483 39312

**ಲಿಂ. ಡಾ॥ ಶ್ರೀ ಮಹಾಂತ ಶಿವಾಚಾರ್ಯ**
**ಮಹಾಸ್ವಾಮಿಗಳವರ ಅಭಿಮಾನಿ ಬಳಗ**

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 07.09.2020ರಂದು ನಿಧನರಾದ
ಹೆಮ್ಮನಬೇತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ,
ಹೆಮ್ಮನಬೇತೂರು, ದಾವಣಗೆರೆ ತಾ॥ ನಿರ್ದೇಶಕರಾಗಿದ್ದ

**ಶ್ರೀ ಕೆ.ಜಿ. ಶಿವನಗೌಡ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ
ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ
ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಹೆಮ್ಮನಬೇತೂರು ಗ್ರಾಮಸ್ಥರು, ಕಿತ್ತೂರು ಗ್ರಾಮಸ್ಥರು, ಕುರುಡಿ ಗ್ರಾಮಸ್ಥರು,
ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ
**ಹೆಮ್ಮನಬೇತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ**
**ನಿಯಮಿತ, ಹೆಮ್ಮನಬೇತೂರು, ದಾವಣಗೆರೆ ತಾ॥**

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 07.09.2020ರ ಸೋಮವಾರ
10.30 ರ ಸಮಯದಲ್ಲಿ ನಿಧನರಾದ ನಮ್ಮ ಸಂಘದ ಅಧ್ಯಕ್ಷರಾದ

**ಶ್ರೀ ಶಾಮನೂರು ಕಲ್ಲೇಶಪ್ಪ**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ
ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

♦ ಸೂರ್ಯ ಎಂಟರ್ ಪ್ರೈಸಸ್ ♦ ಸೂರ್ಯ ಎಲೆಕ್ಟ್ರಿಕಲ್ಸ್
♦ ಗಣೇಶ್ ಹಾರ್ಡ್‌ವೇರ್ ♦ ತಿರುಪತಿ ಗ್ಲಾಸ್ ಅಂಡ್ ಪ್ಲೈವುಡ್ಸ್
# 83/84, RPP & CCS, ಪಿ.ಬಿ. ರಸ್ತೆ, ದಾವಣಗೆರೆ.

# ಮಾನವೀಯತೆ ಮೆರೆದ ವೈದ್ಯ ಡಾ.ರವಿ

ದಾವಣಗೆರೆ, ಸೆ. 7- ಒಮ್ಮೆ ಕಿಕ್ಕಿರಿದ ಸಭೆಯಲ್ಲಿ ಮುಖ್ಯ ರಾಜಕಾರಣಿಯೊಬ್ಬರು ಮಾತನಾಡುತ್ತಲೇ ಕುಸಿದು ಬಿದ್ದರು. ಆಗ ಓರ್ವ ವೈದ್ಯ ಓಡೋಡಿ ಬಂದು ರಾಜಕಾರಣಿಯನ್ನು ಪರೀಕ್ಷಿಸಿ, ಜಾಣ್ಮೆ, ಸೂಕ್ಷ್ಮತೆ ಮತ್ತು ತಾಂತ್ರಿಕ ಕೌಶಲ್ಯದಿಂದ ಅವರ ಜೀವ ಉಳಸಿ ಕುರ್ಚಿಯ ಮೇಲೆ ಕೂರುವಂತೆ ಮಾಡಿದ್ದರು.

ಈ ವಿಷಯ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಪ್ರಕಟವಾಗಿ 20 ವರ್ಷಗಳೇ ಕಳೆದಿವೆ. ಆ ವೈದ್ಯ ಬೇರಾರೂ ಅಲ್ಲ. ಸದ್ಯ ಜ.ಜ.ಮು. ವೈದ್ಯಕೀಯ ಕಾಲೇಜಿನಲ್ಲಿ ಅರವಳಿಕೆ ಮತ್ತು ಕ್ರಿಟಿಕಲ್ ಕೇರ್ ಮೆಡಿಸಿನ್ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿರುವ ಡಾ.ರವಿ.

ಕೆಲ ದಿನಗಳ ಹಿಂದಷ್ಟೇ ಇದೇ ಡಾ.ರವಿ ಅವರು, ಕೊರೊನಾ ರೋಗಿಯೊಬ್ಬರು ಉಸಿರಾಟದ ತೊಂದರೆಯಿಂದ ಬಳಲಿ ಬೆಂಡಾಗಿ ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುತ್ತಿದ್ದ. ಸಾವಿನಂಚಿಗೆ ಸಾಗುತ್ತಿದ್ದ ರೋಗಿಯನ್ನು ಕಂಡು ತಕ್ಷಣವೇ ಆಂಬ್ಯುಲೆನ್ಸ್ ಹತ್ತಿಯೇ ಬಿಟ್ಟರು.

ರೋಗಿಯ ಸ್ಥಿತಿ ಅಲೋಕಿಸಿ ಅವನ ಜೀವ ಉಳಿಸುವ ಶಪಥ ಮಾಡಿಕೊಂಡರು. ಆಂಬ್ಯುಲೆನ್ಸ್ ಆಸ್ಪತ್ರೆಗಳನ್ನು ಹುಡುಕುತ್ತಾ ಚಲಿಸುತ್ತಲೇ ಇತ್ತು. ಡಾ.ರವಿ ರೋಗಿಯ ಜೀವವನ್ನು ಯಮ ಪಾಶದಿಂದ ಮುಕ್ತವಾಗಿಸುವ ಕಾರ್ಯದಲ್ಲಿ ಮುಳುಗಿ ಹೋಗಿದರು. ರೋಗಿಯ ಉಸಿರಾಟ, ಆಮ್ಲ ಜನಕ ಮಟ್ಟವನ್ನು ಸುಧಾರಿಸಿಯೇ ಬಿಟ್ಟರು. ರೋಗಿಯನ್ನು ಸಾವಿನಿಂದ ಬದುಕಿಗೆ ದಾಟಿಸಿ ಮಾನವೀಯತೆ ಮೆರೆದಿದ್ದಾರೆ.

# 43ನೇ ವಾರ್ಡ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ ಜಯಮ್ಮ



ದಾವಣಗೆರೆ, ಸೆ. 7 - ಮಹಾನಗರ ಪಾಲಿಕೆಯ 43ನೇ ವಾರ್ಡಿನ ಸದಸ್ಯರಾದ ಕಲ್ಲಳ್ಳಿ ನಾಗರಾಜ್ ಅವರ ಜನ ಸಂಪರ್ಕ ಕಚೇರಿಯಲ್ಲಿ ಮಹಿಳಾ ಕಾರ್ಯಕರ್ತರ ಸಭೆ ನಿನ್ನೆ ನಡೆಯಿತು. ಇದೇ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಯಿತು.

43ನೇ ವಾರ್ಡಿನ ಮಹಿಳಾ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಸಿ. ಆರ್. ಜಯಮ್ಮ ಅವರನ್ನು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಅನಿತಾ ಮಾಲತೇಶರಾವ್ ಜಾಧವ್ ಅವರು ನೇಮಕ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ಕಲ್ಲಳ್ಳಿ ನಾಗರಾಜ್, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ, ಉತ್ತರ ವಿಧಾನಸಭಾ ಕ್ಷೇತ್ರದ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ರಾಜೇಶ್ವರಿ ಮತ್ತಿತರರು ಉಪಸ್ಥಿತರಿದ್ದರು.

# ಪ್ರತಿ ವಾರ್ಡ್‌ನಲ್ಲೂ ಶೀಘ್ರ ವಾಚನಾಲಯ

## ಮಣಿಪಾಲ ಆಸ್ಪತ್ರೆಯಿಂದ ಪತ್ರಕರ್ತರಿಗೆ ಆರೋಗ್ಯ ಕಾರ್ಡ್ ವಿತರಣೆ


ದಾವಣಗೆರೆ, ಸೆ. 7- ಮಹಾನಗರ ಪಾಲಿಕೆ ವತಿಯಿಂದ ನಗರದ 45 ವಾರ್ಡುಗಳಲ್ಲೂ ವಾಚನಾಲಯ ಆರಂಭಿಸಲು ಕಾರ್ಯಪ್ರವೃತ್ತರಾಗಿ ರುವುದಾಗಿ ಮಹಾನಗರ ಪಾಲಿಕೆ ಉಪ ಆಯುಕ್ತ ಪ್ರಭು ಸ್ವಾಮಿ ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ವರದಿಗಾರರ ಕೂಟ ಹಾಗೂ ಮಣಿಪಾಲ್ ಆಸ್ಪತ್ರೆ ಬೆಂಗಳೂರು ಇವರುಗಳ ಸಂಯುಕ್ತಾಶ್ರ ಯದಲ್ಲಿ ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ ಕೋವಿಡ್ 19 ನಂತರ ಮೂತ್ರಪಿಂಡ ಆರೈಕೆ ಕುರಿತು ಉಪನ್ಯಾಸ ಹಾಗೂ ಪತ್ರಕರ್ತರಿಗೆ ಆರೋಗ್ಯ ಕಾರ್ಡ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈಗಾಗಲೇ ಪ್ರತಿ ವಾರ್ಡ್‌ನಲ್ಲೂ ಕಟ್ಟಡ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಪಾಲಿಕೆ ವ್ಯಾಪ್ತಿಯ ಕಟ್ಟಡ ಇರದೇ ಇದ್ದ ಕಡೆ ಬೇರೆ ಕಟ್ಟಡಗಳನ್ನು ಗುರುತಿಸಿ ವಾಚನಾಲಯ ಆರಂಭಿಸಲಾಗುವುದು ಎಂದು ಹೇಳಿದರು.

ಪಾಲಿಕೆಯಲ್ಲಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ ಬಗ್ಗೆಯೂ ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು ಎಂದು ಪ್ರಭು ಸ್ವಾಮಿ ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ, ಪ್ರತಿ ವಾರ್ಡ್‌ಗಳಲ್ಲೂ ವಾಚಾನಲಯ ಆರಂಭಿಸುವ ಬಗ್ಗೆ ಹಾಗೂ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ ಬಗ್ಗೆ ಉಪ ಆಯುಕ್ತರ ಗಮನ ಸೆಳೆದರು.



ಮಹಾನಗರ ಪಾಲಿಕೆ ಉಪ ಆಯುಕ್ತ ಪ್ರಭು ಸ್ವಾಮಿ

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಮಾತನಾಡಿ, ಆರೋಗ್ಯ ಕಾರ್ಡ್ ಪಡೆದ ಪತ್ರಕರ್ತರಿಗೆ ಶೇ.20ರಷ್ಟು ರಿಯಾಯಿತಿ ಅತಿ ಕಡಿಮೆಯಾಗಿದ್ದು, ಶೇ.50ರಷ್ಟಾದರೂ ರಿಯಾಯಿತಿ ನೀಡುವ ಬಗ್ಗೆ ಹಾಗೂ ಪತ್ರಕರ್ತರ ಕುಟುಂಬಕ್ಕೂ ಯೋಜನೆ ವಿಸ್ತರಿಸುವ ಬಗ್ಗೆ ಆಸ್ಪತ್ರೆ ಮುಖ್ಯಸ್ಥರೊಂದಿಗೆ ಚರ್ಚಿಸುವ ಉದ್ದೇಶವಿರುವುದಾಗಿ ಹೇಳಿದರು.

ಕೆ.ಯು.ಡಬ್ಲ್ಯು.ಜೆ. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಚಂದ್ರಣ್ಣ, ಮಣಿಪಾಲ್ ಆಸ್ಪತ್ರೆಯ ವ್ಯವಸ್ಥಾಪಕ ಅರುಣ್ ಚಕ್ರವರ್ತಿ, ಆಸ್ಪತ್ರೆಯ ಜಿಲ್ಲಾ ಪ್ರತಿನಿಧಿ ಅಮಿತ್ ನಾರಾಯಣ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ, ಸಿದ್ದಗಂಗಾ ಶಾಲೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜಾ ಮತ್ತು ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಮಹಾರುದ್ರಪ್ಪ ಮೆಣಸಿನಕಾಯಿ ಅವರುಗಳನ್ನು ಸನ್ಮಾನಿಸಲಾಯಿತು.

ವಾರ್ತಾ ಇಲಾಖೆಯ ಬಿ.ಎಸ್. ಬಸವ ರಾಜ್ ಪ್ರಾರ್ಥಿಸಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ ಮತ್ತು ಖಜಾಂಚಿ ಮಾಗನೂರು ಮಂಜಪ್ಪ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಾಡಜ್ಜಿ ಸ್ವಾಗತಿಸಿದರು. ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ರಾಮ ಪ್ರಸಾದ್ ವಂದಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಈಚೆಗೆ ನಿಧನರಾದ 'ಭುವನೇಶ್ವರಿ' ಸಂಪಾದಕ ನಾ.ಬ. ರುದ್ರಮುನಿ ಮತ್ತು 'ಪ್ರಜಾಭಿಮತ' ಸಂಪಾದಕ ಎಂ.ಎಸ್. ಶಿವಣ್ಣ ಅವರುಗಳ ಆತ್ಮಕ್ಕೆ ಚಿರ ಶಾಂತಿ ಕೋರಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ಬಿಜೆಪಿ ದಲಿತ ಸಂಗಮವಾಗಿ ಪರಿವರ್ತನೆಯಾಗುತ್ತಿದೆ

## ಅಧಿಕಾರದಿಂದ ವಂಚಿತವಾಗದೇ ಬಿಜೆಪಿ ಜೊತೆ ಕೈ ಜೋಡಿಸಲು ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣ ಸ್ವಾಮಿ ಕರೆ

ದಾವಣಗೆರೆ, ಸೆ. 7 - ಬಿಜೆಪಿ ದಲಿತ ವಿರೋಧಿ ಎಂಬುದು ಪ್ರತಿಪಕ್ಷಗಳ ಹುಸಿ ಪ್ರಚಾರವಾಗಿದೆ. ಇಂತಹ ಪ್ರಚಾರಕ್ಕೆ ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಕಿವಿಗೊಡದೇ ಬಿಜೆಪಿಗೆ ಜೊತೆಯಾಗಬೇಕು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಘಟಕದ ರಾಜ್ಯಾಧ್ಯಕ್ಷ ಎ. ಛಲವಾದಿ ನಾರಾಯಣ ಸ್ವಾಮಿ ಕರೆ ನೀಡಿದ್ದಾರೆ.

ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬಿಜೆಪಿ ಅಂಬೇಡ್ಕರ್ ರಚಿಸಿದ ಸಂವಿಧಾನ ಬದಲಿಸುತ್ತದೆ, ಮೀಸಲಾತಿ ರದ್ದುಗೊಳಿಸುತ್ತದೆ ಎಂಬೆಲ್ಲ ಅಪಪ್ರಚಾರ ಪ್ರತಿಪಕ್ಷಗಳದ್ದಾಗಿತ್ತು. ಆದರೆ, ಬಿಜೆಪಿ ಆಡಳಿತ ಯಾವ ರಾಜ್ಯದಲ್ಲೂ ಮೀಸಲಾತಿ ರದ್ದುಗೊಳಿಸಿಲ್ಲ ಎಂದು ತಿಳಿಸಿದರು.

ಅಂಬೇಡ್ಕರ್ ಅವರ ಸಂವಿಧಾನವನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಜಾರಿಗೆ ತಂದಿರಲಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ 370ನೇ ವಿಧಿ ರದ್ದುಗೊಳಿಸುವ ಮೂಲಕ ಅಲ್ಲಿಯೂ ಅಂಬೇಡ್ಕರ್ ಸಂವಿಧಾನ ಜಾರಿಗೆ ತಂದಿರುವುದಾಗಿ ನಾರಾಯಣ ಸ್ವಾಮಿ ಹೇಳಿದರು.

ಬಿಜೆಪಿ ಮೀಸಲಾತಿ ರದ್ದುಗೊಳಿಸುತ್ತದೆ ಎಂದು ಕೆಲ ಸಂಘಟನೆಗಳು ಹೇಳುತ್ತಿವೆ. ಆದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ದಲಿತರಿಗೆ ಮೀಸಲಾತಿ ಇರಲೇ ಇಲ್ಲ. ಈ ಬಗ್ಗೆ ಸಂಘಟನೆಗಳು ಏಕೆ ಮೌನವಾಗಿದ್ದವು? ಇದೆಲ್ಲದರಿಂದಾಗಿ ಆರೋಪ ಮಾಡುತ್ತಿರುವವರ ಬಣ್ಣ ಬಯಲಾಗಿದೆ ಎಂದು ಹೇಳಿದ ಅವರು, ಬಿಜೆಪಿಯೇ ಜಮ್ಮು ಮತ್ತು ಕಾಶ್ಮೀರದ ಪರಿಶಿಷ್ಟರಿಗೆ ಮೀಸಲಾತಿ ಜಾರಿಗೆ ತಂದಿದೆ ಎಂದು ತಿಳಿಸಿದರು.

ಈ ಎಲ್ಲ ಸತ್ಯಗಳು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಈಗ ಗೊತ್ತಾಗಿದೆ. ಹೀಗಾಗಿ ಬಿಜೆಪಿ ಈಗ ದಲಿತ ಸಂಗಮವಾಗಿ ಪರಿವರ್ತನೆ ಯಾಗುತ್ತಿದೆ. ನನ್ನ ಜನರನ್ನು ಪಕ್ಷಕ್ಕೆ ತಂದು ಸೇರಿಸು ವುದು ನನ್ನ ಆದ್ಯ ಕರ್ತವ್ಯಯವಾಗಿದೆ ಎಂದರು.

ಕಾಂಗ್ರೆಸ್ ಈಗ ವಿಸರ್ಜನೆ ಆಗುವ ಮಟ್ಟಕ್ಕೆ ಬಂದಿದೆ. ಅದರ ನಾಯಕತ್ವದ ಬಗ್ಗೆ ಈಗ ಎಲ್ಲರಿಗೂ ಗೊತ್ತಾಗಿದೆ. ಕಾಂಗ್ರೆಸ್ ನಾಯಕರನ್ನು ಆಧರಿಸಿದ ಪಕ್ಷವಾಗಿದೆ. ಆದರೆ, ಬಿಜೆಪಿ ಕಾರ್ಯಕರ್ತರನ್ನು ಆಧರಿಸಿದ ಪಕ್ಷವಾಗಿದ್ದು, ಇಲ್ಲಿ ನಾಯಕತ್ವ ಗಟ್ಟಿಯಾಗಿದೆ. ಬಿಜೆಪಿ ರಾಷ್ಟ್ರವ್ಯಾಪಿಯಾಗಿ ಬೆಳೆದಿದೆ. ಇದನ್ನು ಪರಿಶಿಷ್ಟರು ಗಮನಿಸಬೇಕು. ಧಿಕ್ಕಾರ ಹಾಕಿಕೊಂಡು ಎಷ್ಟು ದಿನ ಬದುಕುತ್ತೀರಿ? ಬಿಜೆಪಿ ಸದಾ ಅಧಿಕಾರದಲ್ಲಿರಲಿದೆ. ಪರಿಶಿಷ್ಟರೂ ಸಹ ಅಧಿಕಾರದಿಂದ ವಂಚಿತರಾಗದೇ ಪಕ್ಷದ ಕಡೆ ಬರಬೇಕು ಎಂದವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಎಸ್‌ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಬಸವರಾಜನಾಯ್ಕ, ಜಿಲ್ಲಾಧ್ಯಕ್ಷ ಹನುಮಂತನಾಯ್ಕ, ಬಿಜೆಪಿ ಮುಖಂಡರಾದ ಮಂಜಾನಾಯ್ಕ, ಅಂಜಿನಪ್ಪ, ಜಿ.ವಿ. ಗಂಗಾಧರ, ನಾಗರಾಜ ಲೋಕಿಕೆರೆ ಮತ್ತಿತರರು ಉಪಸ್ಥಿತರಿದ್ದರು.

# ಕಿಡ್ನಿ ವೈಫಲ್ಯ ಇದ್ದವರಿಗೆ ಕೊರೊನಾ ಸೋಂಕು ಅತಿ ಅಪಾಯಕಾರಿ

ದಾವಣಗೆರೆ, ಸೆ. 7- ಕಿಡ್ನಿ ವೈಫಲ್ಯ ಆದವರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಅವರಿಗೆ ಕೊರೊನಾ ಸೋಂಕು ತೀವ್ರ ಅಪಾಯಕಾರಿ ಎಂದು ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ಮೂತ್ರಪಿಂಡ ಶಾಸ್ತ್ರಜ್ಞ ಡಾ.ಎಸ್. ವಿಶ್ವನಾಥ್ ಹೇಳಿದರು.

ಇಲ್ಲಿನ ಸಿದ್ದಗಂಗಾ ಶಾಲೆಯಲ್ಲಿ ಪತ್ರಕರ್ತರ ಸಂಘದಿಂದ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಕೋವಿಡ್ -19ರ ನಂತರ ಮೂತ್ರಪಿಂಡ ಆರೈಕೆ ಕುರಿತು ಉಪನ್ಯಾಸ ನೀಡಿದ ಅವರು, ಕಿಡ್ನಿ ವೈಫಲ್ಯ ಇದ್ದವರು ಕೊರೊನಾ ಸಂದರ್ಭದಲ್ಲಿ ತೀವ್ರ ರೀತಿಯ ಮುನ್ನೆಚ್ಚರಿಕೆ ವಹಿಸುವುದು ಅತ್ಯಗತ್ಯ ಎಂದರು.

ಕಿಡ್ನಿ ವೈಫಲ್ಯ ಉಂಟಾಗುವ ಬಗ್ಗೆ ಆರಂಭದಲ್ಲಿ ಗುಣಲಕ್ಷಣಗಳು ತಿಳಿಯುವುದಿಲ್ಲ. ರೋಗಿಗೆ ಅದರ ಬಗ್ಗೆ ತಿಳಿಯುವ ಹೊತ್ತಿಗೆ ಶೇ.90ರಷ್ಟು ಕಿಡ್ನಿ ವೈಫಲ್ಯ ಉಂಟಾಗಿರುತ್ತದೆ ಎಂದರು.

ಕಿಡ್ನಿ ವೈಫಲ್ಯಕ್ಕೆ ತುತ್ತಾಗಿ ಚಿಕಿತ್ಸೆ ಪಡೆಯುವುದಕ್ಕಿಂತ ಆರಂಭದಲ್ಲಿಯೇ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ. ಹೆಚ್ಚು ಹೆಚ್ಚು ನೀರು ಕುಡಿಯಬೇಕು ಎಂದು ಅವರು ಕಿವಿ ಮಾತು ಹೇಳಿದರು.

ಕಿಡ್ನಿ ತೊಂದರೆಗೆ ಯಾವ ಕಾರಣಕ್ಕೂ ಹೋಮಿಯೋ ಪತಿ ಅಥವಾ ಆಯುರ್ವೇದಿಕ್ ಚಿಕಿತ್ಸೆ ಪಡೆಯದಂತೆ ಸಲಹೆ ನೀಡಿದ ಅವರು, ಪ್ರತಿ ಒಂದು ಅಥವಾ ಎರಡು ವರ್ಷಗಳಿಗೊಮ್ಮೆ ಕಿಡ್ನಿ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

# ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ರಕ್ಷಿಸಿದ ಪೊಲೀಸರು

ದಾವಣಗೆರೆ, ಸೆ.7- ಲಾರಿಗಳಲ್ಲಿ ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸಲಾಗುತ್ತಿದ್ದ 77 ಜಾನುವಾರುಗಳನ್ನು ರಕ್ಷಣೆ ಮಾಡಿರುವ ಪೊಲೀಸರು 12 ಮಂದಿಯನ್ನು ಬಂಧಿಸಿದ್ದಾರೆ.

ಲಾರಿಗಳಲ್ಲಿದ್ದ 45 ಎಮ್ಮೆಗಳು, 32 ಎತ್ತುಗಳು ಸೇರಿ ಒಟ್ಟು 16 ಲಕ್ಷ ರೂ. ಮೌಲ್ಯದ 77 ಜಾನುವಾರುಗಳು ಹಾಗೂ ಒಟ್ಟು 18 ಲಕ್ಷ ಮೌಲ್ಯದ 4 ಕಂಟೇನರ್ ಲಾರಿ ಮತ್ತು 1 ಕಾರು ವಶಪಡಿಸಿಕೊಳ್ಳಲಾಗಿದೆ.





**16 ಲಕ್ಷ ಮೌಲ್ಯದ ಎಮ್ಮೆಗಳು, ಎತ್ತುಗಳ ವಶ : 12 ಮಂದಿ ಬಂಧನ**

ದಾವಣಗೆರೆ ಕಡೆಯಿಂದ ಎನ್.ಹೆಚ್-48 ರಸ್ತೆಯಲ್ಲಿ ಅಕ್ರಮವಾಗಿ ದನಗಳನ್ನು ಕಂಟೇನರ್ ಲಾರಿಗಳಲ್ಲಿ ಕಸಾಯಿ ಖಾನೆಗೆ ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಬಂದ ಮೇರೆಗೆ ಜಿಲ್ಲಾ ಎಸ್ಪಿ ಹನುಮಂತರಾಯ ನಿರ್ದೇಶನದಂತೆ ಗ್ರಾಮಾಂತರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ ಮಾರ್ಗದರ್ಶನದಲ್ಲಿ ಗ್ರಾಮಾಂತರ ಸಿಪಿಐ ಬಿ. ಮಂಜುನಾಥ, ಪಿಎಸ್ಐ ಸಂಜೀವ್ ಕುಮಾರ್ ಮತ್ತು ಸಿಬ್ಬಂದಿಗಳಾದ ಹನುಮಂತಪ್ಪ, ತಿಮ್ಮಪ್ಪ, ಅಶೋಕ ಅವರನ್ನು ಒಳಗೊಂಡ ತಂಡ ಇದೇ ಸೆ.6ರ ಭಾನುವಾರ ರಾತ್ರಿ 10 ಗಂಟೆಗೆ ಹೆಚ್. ಕಲಪನಹಳ್ಳಿ ಗ್ರಾಮದ ಹತ್ತಿರ ಬರುತ್ತಿದ್ದ ಒಂದು ಕಾರು ಮತ್ತು ಅದರ ಹಿಂದಿದ್ದ 4 ಕಂಟೇನರ್ ಲಾರಿಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಿದಾಗ ಜಾನುವಾರುಗಳ ಸಾಗಾಟ ಬೆಳಕಿಗೆ ಬಂದಿದೆ.

ಕಂಟೇನರ್ ಲಾರಿಗಳಲ್ಲಿ ಜಾನುವಾರುಗಳಿಗೆ ಸೂಕ್ತ ಮುಂಜಾಗ್ರತೆ ವಹಿಸದೇ ಸೂಕ್ತ ಗಾಳಿ ಬೆಳಕು ಇಲ್ಲದೇ ಅಕ್ರಮವಾಗಿ ಕಸಾಯಿಖಾನೆಗೆ ಸಾಗಾಣಿಕೆ ಮಾಡುತ್ತಿದ್ದವರ ಮತ್ತು ಲಾರಿ ಮಾಲೀಕರುಗಳ ಮೇಲೆ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಿಲ್ಲೆಯಲ್ಲಿ 30.0 ಮಿ.ಮೀ. ಮಳೆ

ದಾವಣಗೆರೆ, ಸೆ.7- ಜಿಲ್ಲೆಯಲ್ಲಿ ನಿನ್ನೆ 30.0 ಮಿ.ಮೀ ಸರಾಸರಿ ಮಳೆಯಾಗಿದ್ದು, ತಾಲ್ಲೂಕುವಾರು ಮಳೆ ಹಾಗೂ ಹಾನಿ ವಿವರ ಈ ಕೆಳಕಂಡಂತಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 43.0 ಮಿ.ಮೀ. ವಾಸ್ತವ ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 20.0 ಮಿ.ಮೀ. ವಾಸ್ತವ ಮಳೆಯಾಗಿದೆ. ಹರಿಹರ ತಾಲ್ಲೂಕಿನಲ್ಲಿ 1.0 ವಾಡಿಕೆಗೆ 25.0 ಮಿ.ಮೀ. ವಾಸ್ತವ ಮಳೆಯಾಗಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ 1.0 ವಾಡಿಕೆಗೆ 42.0 ಮಿ.ಮೀ. ವಾಸ್ತವ ಮಳೆಯಾಗಿದೆ. ಜಗಳೂರು ತಾಲ್ಲೂಕಿನಲ್ಲಿ 2.0 ವಾಡಿಕೆಗೆ 8.0 ಮಿ.ಮೀ. ವಾಸ್ತವ ಮಳೆಯಾಗಿದೆ. ನ್ಯಾಮತಿ ತಾಲ್ಲೂಕಿನಲ್ಲಿ 2.0 ವಾಡಿಕೆಗೆ 55.0 ಮಿ.ಮೀ. ವಾಸ್ತವ ಮಳೆಯಾಗಿದೆ. ಜಿಲ್ಲೆಯಲ್ಲಿ ಸರಾಸರಿ 2.0 ವಾಡಿಕೆಗೆ 30.0 ಮಿ.ಮೀ ವಾಸ್ತವ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 4 ಕಚ್ಚಾ ಮನೆ ಭಾಗಶಃ ಹಾನಿಯಾಗಿದ್ದು, ರೂ. 1 ಲಕ್ಷ ನಷ್ಟ ಸಂಭವಿಸಿರುತ್ತದೆ. ಹೊನ್ನಾಳಿ ತಾಲ್ಲೂಕಿನಲ್ಲಿ 14 ಪಕ್ಕಾ ಮನೆ ಭಾಗಶಃ ಹಾನಿಯಾಗಿದ್ದು, ರೂ. 6.50 ಲಕ್ಷ ಹಾಗೂ ನ್ಯಾಮತಿ ತಾಲ್ಲೂಕಿನಲ್ಲಿ 6 ಪಕ್ಕಾ ಮನೆ ಭಾಗಶಃ ಹಾನಿಯಾಗಿದ್ದು, 1.50 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

ಚನ್ನಗಿರಿ ತಾಲ್ಲೂಕಿನಲ್ಲಿ 4 ಪಕ್ಕಾ ಮನೆ ಭಾಗಶಃ ಹಾನಿಯಾಗಿದ್ದು, ರೂ.1.90 ಲಕ್ಷ, 4 ಕಚ್ಚಾ ಮನೆ ಭಾಗಶಃ ಹಾನಿಯಾಗಿದ್ದು, 1.60 ಲಕ್ಷ ಹಾಗೂ ಒಟ್ಟು ರೂ.3.40 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

# ಬಿಇಎ ಶಾಲೆಯಲ್ಲಿ ಶಿಕ್ಷಕರ ದಿನ

ದಾವಣಗೆರೆ, ಸೆ.7- ನಗರದ ಬಿಇಎ ಹಿರಿಯ ಪ್ರಾಥಮಿಕ (ಸಿಬಿಎಸ್‌ಇ) ಶಾಲೆಯಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟುಹಬ್ಬದ ಪ್ರಯುಕ್ತ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಆನ್‌ಲೈನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಾದ ಡಿ.ಬಿ. ವರ್ಷಿಣಿ, ಶ್ವೇತ ಜಿ. ಶೇಟ್, ರುಚಾ ಪಿ. ಬಾದಾಮಿ ಹಾಗೂ ವರ್ಷಿತಾ ಶಿಕ್ಷಕರ ದಿನಾಚರಣೆ ಕುರಿತು ಮಾತನಾಡಿದರು. ಪುಟಾಣಿ ಏಂಜೆಲ್ ಮೇರಿ ಹಾಗೂ ಸೋನಲ್ ಅಭಿನಯ ಗೀತೆಯನ್ನು ಪ್ರಸ್ತುತ ಪಡಿಸಿದರು. ಸಂಜನ ಗೌಡ ಅಕ್ರೋಟಿಕ್ ಗೀತೆ ಕಾರ್ಯಕ್ರಮ ನಡೆಸಿದರು. ಇಫ್ಫತ್ ಉಮ್ಮೇಮ ಖಾನಂ ವಿಶೇಷ ಗೀತೆ ಹಾಡಿದರು. ಪ್ರಾಂಶುಪಾಲ ಜೆ. ಪದ್ಮನಾಭ್ ಶಿಕ್ಷಕರ ದಿನಾಚರಣೆ ಮಹತ್ವವನ್ನು ತಿಳಿಸಿದರು.

ಜೋಯಾ ಕೌಸರ್ ಸ್ವಾಗತಿಸಿದರು. ಎನ್. ಹಂಸ ಪ್ರಾರ್ಥಿಸಿದರು. ಭಾವನ ವಂದಿಸಿದರು. ಸಹ ಶಿಕ್ಷಕಿ ಕೆ.ಜಿ. ಪುಷ್ಪ ಕಾರ್ಯಕ್ರಮ ಸಂಯೋಜಿಸಿದ್ದರು.

# ಉಚಿತ ಕೋವಿಡ್ ಪರೀಕ್ಷೆ, ಔಷಧೋಪಚಾರ ನೀಡಲು ಆಗ್ರಹ

ದಾವಣಗೆರೆ, ಸೆ.7- ಎಲ್ಲಾ ವರ್ಗದವರಿಗೂ ಉಚಿತ ಕೋವಿಡ್ ಪರೀಕ್ಷೆ ಮತ್ತು ಔಷಧೋಪಚಾರ ನೀಡುವಂತೆ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ತಾಲ್ಲೂಕು ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ ನಡೆಸಿದ ಸಂಘಟನೆಗಳ ಕಾರ್ಯಕರ್ತರು, ತಹಸೀಲ್ದಾರ್ ಬಿ.ಎನ್. ಗಿರೀಶ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ತೆರಿಗೆ ಕಟ್ಟಲು ಆಗದೇ ಸಂಕಷ್ಟದಲ್ಲಿರುವ ಪ್ರತಿಯೊಬ್ಬರಿಗೂ ಮುಂದಿನ ಆರು ತಿಂಗಳವರೆಗೆ ಮಾಸಿಕ 7,500 ರೂ.ಗಳ ಕೋವಿಡ್ ಪರಿಹಾರ ನೀಡಬೇಕು. ಕುಟುಂಬದ ಪ್ರತಿ ಸದಸ್ಯನಿಗೂ ಮಾಸಿಕ 10 ಕೆ.ಜಿ. ಉಚಿತ ಆಹಾರ ಧಾನ್ಯ ವಿತರಿಸಬೇಕು. ಉದ್ಯೋಗ ಖಾತ್ರಿ ವೇತನವನ್ನು ಕನಿಷ್ಠ 600 ರೂ.ಗೆ ಹೆಚ್ಚಿಸಬೇಕು ಮತ್ತು ಅದನ್ನು ನಗರ ಪ್ರದೇಶಕ್ಕೂ ವಿಸ್ತರಿಸಿ ಕನಿಷ್ಠ 200 ದಿನಗಳಿಗೆ ಹೆಚ್ಚಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಎಚ್. ಆನಂದರಾಜು, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಹೊನ್ನೂರು ತಿಮ್ಮಣ್ಣ, ಕಾರ್ಯದರ್ಶಿ ಎ.ಗುಡ್ಡಪ್ಪ, ಹಮಾಲಿ ಕಾರ್ಮಿಕ ಸಂಘಟನೆಯ ಮುಖಂಡ ಹನುಮಂತ ನಾಯ್ಕ, ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಂಘದ ಹಾಲೇಶನಾಯ್ಕ, ಸುರೇಶ್ ಬಾಡ, ಸದಾಶಿವ ನಾಯ್ಕ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಚಿನ್ನಸಮುದ್ರ, ಜಯಣ್ಣ, ಕರ್ನಾಟಕ ಪ್ರಾಂತ ರೈತ ಸಂಘದ ಇ. ಶ್ರೀನಿವಾಸ್, ಔಷಧ ಮಾರಾಟ ಪ್ರತಿನಿಧಿಗಳ ಸಂಘದ ಎ.ವೆಂಕಟೇಶ್, ಗ್ರಾಪಂ ನೌಕರರ ಸಂಘದ ಗುಡಾಳ್ ತಿಪ್ಪೇಸ್ವಾಮಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಅನ್‌ಮೋಲ್‌ನಲ್ಲಿ ಶಿಕ್ಷಕರ ದಿನಾಚರಣೆ

ದಾವಣಗೆರೆ, ಸೆ.7- ಶಿರಮಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಶಾಲಾ ಪ್ರಾಂಶುಪಾಲ ಯು. ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ತರಗತಿವಾರು ಶಿಕ್ಷಕರ ದಿನಾಚರಣೆಯನ್ನು ಆಚರಿಸಿದರು.

# ವಿದ್ಯಾವಾರಿಧಿ ಪ್ರಶಸ್ತಿ ಪ್ರದಾನ

ದಾವಣಗೆರೆ, ಸೆ.7- ಶ್ರೀ ಸಿದ್ಧಗಂಗಾ ಮಕ್ಕಳ ಲೋಕದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿನಿಯರಾದ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಪಿ.ಆರ್. ಐಸಿರಿ ಮತ್ತು ಎನ್.ಹೆಚ್. ಅಭಿನಂದನಾ ಹಾಗೂ ಸೋಮೇಶ್ವರ ವಿದ್ಯಾಲಯದ ವಿ.ಎಸ್. ಅಮೃತ ಅವರಿಗೆ ವಿದ್ಯಾವಾರಿಧಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಿರಿಯ ಕವಿ ಚನ್ನ ಸಮುದ್ರದ ಎನ್. ಪುಟ್ಟಾನಾಯ್ಕ ಅಧ್ಯಕ್ಷತೆ ವಹಿಸಿ, ಪ್ರಶಸ್ತಿ ಪ್ರದಾನ ಮಾಡಿದರು. ಮಕ್ಕಳ ಲೋಕ ಸಂಸ್ಥಾಪಕ ಕೆ.ಎಸ್. ಸ್ವಾಮಿ ಮಾತನಾಡಿ, ಮಕ್ಕಳ ಲೋಕಕ್ಕೆ ನೆರವಾಗಿ ನಿಂತಿರುವ ಮಹನೀಯರನ್ನು ಸ್ಮರಿಸಿದರು.

# ಡಿಪ್ಲೋಮಾ ಪ್ರವೇಶ ದಿನಾಂಕ ಮುಂದೂಡಿಕೆ

ದಾವಣಗೆರೆ, ಸೆ.7 - 2020-21 ನೇ ಸಾಲಿನ ಡಿಪ್ಲೋಮಾ ಪ್ರಥಮ ಸೆಮಿಸ್ಟರ್ ಪ್ರವೇಶಕ್ಕೆ ಆನ್ ಲೈನ್ ಮುಖಾಂತರ 2ನೇ ಮುಂದುವರೆದ ಸುತ್ತಿನಲ್ಲಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಎಸ್ಸೆಸ್ಸೆಲ್ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶೇ. 35 ರಷ್ಟು ಅಂಕಗಳನ್ನು ಪಡೆದಿರತಕ್ಕದ್ದು, ಅರ್ಜಿಯನ್ನು ಸಮೀಪದ ಯಾವುದೇ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಅಥವಾ ವೆಬ್‌ಸೈಟ್ dtek.karnataka.gov.in ಅಥವಾ http://dtetech.karnataka.gov.in/kartechnical & www.cetonline.karnataka.gov.in/kea ಮುಖಾಂತರ ಅರ್ಜಿ ಸಲ್ಲಿಸಬಹುದು.

ಅರ್ಜಿಯನ್ನು ಇದೇ ದಿನಾಂಕ 16 ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು. ಎರಡನೇ ಮುಂದುವರೆದ ಸುತ್ತಿನ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ಪ್ರತ್ಯೇಕವಾದ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಇಲಾಖೆಯಿಂದ ಪ್ರಕಟಿಸಲಾಗುವುದೆಂದು ಡಿ.ಆರ್.ಆರ್ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.


**ದಸರಾ ಹಬ್ಬದ ಪ್ರಯುಕ್ತ ಮೆಕ್ಯಾನಿಕ್‌ಗಳಿಗೆ ಸುವರ್ಣಾವಕಾಶ**

ಹೆಚ್.ಪಿ. ಬ್ರಾಂಡೆಡ್ ಕಂಪನಿಯ ಎಲ್ಲಾ ತರಹದ ಆಯಿಲ್ ಮತ್ತು ಗ್ರೀಸ್ ಡೀಲರ್ ಕಮೀಷನ್ ಹೊರತುಪಡಿಸಿ ಕಡಿಮೆ ದರದಲ್ಲಿ ಸಿಗುತ್ತದೆ. ತಕ್ಷಣ ಸಂಪರ್ಕಿಸಿ :

**ಶಂಕರ ಲೀಲಾ ಪೆಟ್ರೋಲ್ ಬಂಕ್**
ಆವರಗೆರೆ – ದಾವಣಗೆರೆ.
ಮೊ. 90190-94446
* Conditions appply

**ಬಾಲಾಜಿ ಗೋಲ್ಡ್ ಪ್ಯಾಲೇಸ್**
ಮಂಡಿಪೇಟೆ, ದಾವಣಗೆರೆ.
**ಬಂಪರ್ ಆಫರ್**
ನಮ್ಮಲ್ಲಿ ರೆಡಿ ಇರುವ ಬೆಳ್ಳಿ, ಬಂಗಾರದ ಆಭರಣಗಳಿಗೆ Wastage ಇರುವುದಿಲ್ಲ. Stock ಇರುವವರೆಗೆ ಮಾತ್ರ.
ಗ್ರಾಹಕರು ಸದುಪಯೋಗ ಪಡಿಸಿಕೊಳ್ಳಲು ವಿನಂತಿ.
ದಿನಾಂಕ : 7.09.2020 ರಿಂದ 14.09.2020ರ ವರೆಗೆ ಮಾತ್ರ



# ಭಾರತೀಯ ಜನತಾ ಪಕ್ಷ, ದಾವಣಗೆರೆ.



ಭಾರತೀಯ ಜನತಾ ಪಕ್ಷದ ದಾವಣಗೆರೆ ಜಿಲ್ಲಾ ಯುವ ಮೋರ್ಚಾದ "ಪ್ರಧಾನ ಕಾರ್ಯದರ್ಶಿ"ಯಾಗಿ ನನ್ನನ್ನು ಆಯ್ಕೆ ಮಾಡಿರುವ ಸಂಸದರು, ಶಾಸಕರು, ಮಾಜಿ ಶಾಸಕರು, ಜಿಲ್ಲಾಧ್ಯಕ್ಷರು, ಎಲ್ಲಾ ಮಂಡಲಾಧ್ಯಕ್ಷರು, ಜಿಲ್ಲೆಯ ಹಿರಿಯ ಮುಖಂಡರು, ಹಿತೈಷಿಗಳು, ಜಿಲ್ಲೆಯ ಸಮಸ್ತ ಕಾರ್ಯಕರ್ತ ಬಂಧುಗಳು ಹಾಗೂ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಗಣ್ಯರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳು.

**ಶ್ರೀಧರ ಹೆಚ್. ಜೆ.**

ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ, ದಾವಣಗೆರೆ ಜಿಲ್ಲೆ.


# ತಿರುಕಪ್ಪನವರ ಮಠದ ಗುರುಮೂರ್ತಿ ನಿಧನ



ದಾವಣಗೆರೆ ಬಾಲಾಜಿ ನಗರ, ಕುಂದುವಾಡ ರೋಡ್ ವಾಸಿ, ದಿ|| ಟಿ.ಎಂ.ವೀರಯ್ಯ ಇವರ ಪುತ್ರ

**ಟಿ.ಎಂ. ಗುರುಮೂರ್ತಿ** (72 ವರ್ಷ)

ಅವರು ದಿನಾಂಕ 07.09.2020ರಂದು ಸೋಮವಾರ ಸಂಜೆ 6.10ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.09.2020 ರಂದು ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

*ದುಃಖತಪ್ತ ಕುಟುಂಬ ವರ್ಗ*

ತಿರುಕಪ್ಪನವರ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.

ಮೊ: 98454 29997, 85535 17020




# ಹೃತ್ಪೂರ್ವಕ ಕೃತಜ್ಞತೆಗಳು

ನನ್ನನ್ನು ದಾವಣಗೆರೆ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಉತ್ತರ ವಿಧಾನಸಭಾ ಕ್ಷೇತ್ರದ ರೈತ ಮೋರ್ಚಾ ಎಕ್ಸಿಕ್ಯೂಟಿವ್ ಮೆಂಬರ್ ಆಗಿ ಆಯ್ಕೆ ಮಾಡಲು ಸಹಕರಿಸಿದ ಬಿಜೆಪಿಯ ಎಲ್ಲಾ ಮುಖಂಡರುಗಳಿಗೂ, ಕಾರ್ಯಕರ್ತರುಗಳಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

**ಹೊನ್ನೂರು ಬಸವರಾಜಪ್ಪ**

ಎಲೆಬೇತೂರು

ಎಕ್ಸಿಕ್ಯೂಟಿವ್ ಮೆಂಬರ್, ಬಿಜೆಪಿ ರೈತ ಮೋರ್ಚಾ

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ.


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07.09.2020ರಂದು ನಿಧನರಾದ ನಮ್ಮ ಬ್ಯಾಂಕಿನ ವ್ಯವಸ್ಥಾಪಕರಾದ ಹಸನ್ಮುಖಿ, ಸಹೃದಯಿ

**ಶ್ರೀ ಶಿವಾಜಿರಾವ್ ಜಾಧವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಮೃತರ ಗೌರವಾರ್ಥ ದಿನಾಂಕ 08.09.2020ರ ಮಂಗಳವಾರ ನಮ್ಮ ಬ್ಯಾಂಕಿಗೆ ರಜೆ ಘೋಷಿಸಲಾಗಿದೆ.

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರುಗಳು, ಮಾಜಿ ಅಧ್ಯಕ್ಷರುಗಳು, ಮಾಜಿ ಉಪಾಧ್ಯಕ್ಷರುಗಳು, ಮಾಜಿ ನಿರ್ದೇಶಕರುಗಳು ಮತ್ತು ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಕಾರರು, ಸಾಲ ವಸೂಲಾತಿಗಾರರು

**ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07.09.2020ರಂದು ನಿಧನರಾದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಹಕಾರ ಕ್ಷೇತ್ರದ ಸದಸ್ಯರಾದ

**ಶ್ರೀ ಶಾಮನೂರು ಕಲ್ಲೇಶಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

| | | | |
|---|---|---|---|
| **ಎಸ್.ಕೆ. ಚಂದ್ರಶೇಖರ್**<br>ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ.<br>ಅಣಜಿ ಕ್ಷೇತ್ರ | **ಮುದೇಗೌಡ್ರು ಗಿರೀಶ್**<br>ಮಾಜಿ ಅಧ್ಯಕ್ಷರು<br>ಮತ್ತು ಹಾಲಿ ಸದಸ್ಯರು, ಎಪಿಎಂಸಿ | **ಬಿ.ಕೆ. ವೀರಣ್ಣ**<br>ಉಪಾಧ್ಯಕ್ಷರು, ಎಪಿಎಂಸಿ,<br>ದಾವಣಗೆರೆ. ಬೆಳವನೂರು ಕ್ಷೇತ್ರ | **ಕೆ.ಜಿ. ಶಾಂತರಾಜ್**<br>ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು,<br>ಎಪಿಎಂಸಿ, ದೊಡ್ಡಬಾತಿ ಕ್ಷೇತ್ರ |
| **ಕೆ.ಪಿ. ಮಲ್ಲಿಕಾರ್ಜುನ್**<br>ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು,<br>ಎಪಿಎಂಸಿ, ಬಾಡ ಕ್ಷೇತ್ರ | **ದೊಗ್ಗಳ್ಳಿ ಬಸವರಾಜ್**<br>ಎಪಿಎಂಸಿ ಸದಸ್ಯರು<br>ವರ್ತಕರ ಕ್ಷೇತ್ರ | **ಎಂ.ಬಿ. ಹಾಲಪ್ಪ**<br>ಮಾಜಿ ಉಪಾಧ್ಯಕ್ಷರು ಮತ್ತು<br>ಹಾಲಿ ಸದಸ್ಯರು, ಎಪಿಎಂಸಿ | **ಎಂ.ಕೆ. ರೇವಣಸಿದ್ದಪ್ಪ**<br>ಎಪಿಎಂಸಿ ಸದಸ್ಯರು<br>ಎಲೆಬೇತೂರು ಕ್ಷೇತ್ರ |
| **ಟಿ. ರಾಜಣ್ಣ**<br>ಎಪಿಎಂಸಿ ಸದಸ್ಯರು<br>ಸಂಸ್ಕರಣಾ ಕ್ಷೇತ್ರ | **ಎಸ್.ಹೆಚ್. ಮಂಜುನಾಥ್ ಶ್ಯಾಗಲೆ**<br>ಎಪಿಎಂಸಿ ಸದಸ್ಯರು<br>ಲೋಕಿಕೆರೆ ಕ್ಷೇತ್ರ | **ಸೇವ್ಯಾನಾಯ್ಕ**<br>ಎಪಿಎಂಸಿ ಸದಸ್ಯರು<br>ಐಗೂರು ಕ್ಷೇತ್ರ | **ಹೆಚ್. ಪಾಲಾಕ್ಷಮ್ಮ**<br>ಎಪಿಎಂಸಿ ಸದಸ್ಯರು<br>ಆನಗೋಡು ಕ್ಷೇತ್ರ |
| **ಆರ್. ಸುಧಾ**<br>ಎಪಿಎಂಸಿ ಸದಸ್ಯರು<br>ಮಾಯಕೊಂಡ ಕ್ಷೇತ್ರ | **ಎನ್. ವಿಜಯಕುಮಾರ್**<br>ಸರ್ಕಾರದ ನಾಮನಿರ್ದೇಶಿತ ಸದಸ್ಯರು<br>ತರಳಬಾಳು ನಗರ, (ಬೆಳವನೂರು) | **ವೈ.ಬಿ. ಸಿದ್ದೇಶ್**<br>ಸರ್ಕಾರದ ನಾಮನಿರ್ದೇಶಿತ ಸದಸ್ಯರು<br>ವೊಡ್ಡಿನಹಳ್ಳಿ | |

ದೊರೆಸ್ವಾಮಿ, ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗ

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ.**

# ಭಾವಪೂರ್ಣ ಶ್ರದ್ಧಾಂಜಲಿ


ದಿನಾಂಕ 07.09.2020ರಂದು ನಿಧನರಾದ ದಾವಣಗೆರೆ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ (ನಿ) ಅಧ್ಯಕ್ಷರೂ, ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ದೇಶಕರೂ, ಹಿರಿಯರೂ, ನಮ್ಮ ಮಾರ್ಗದರ್ಶಕರೂ ಆದ

**ಶ್ರೀ ಶಾಮನೂರು ಕಲ್ಲೇಶಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- **ಎಂ.ಎಸ್. ನಾಗರಾಜಯ್ಯ,** ಶ್ರೀ ನಂದಿ ಬಿಲ್ಡರ್ಸ್ ಅಂಡ್ ಡೆವಲಪರ್, ದಾವಣಗೆರೆ.
- **ಎನ್. ಮಂಜುನಾಥ,** ಆದಿತ್ಯ ಅಲ್ಯೂಮಿನಿಯಂ, ದಾವಣಗೆರೆ.
- **ಹೆಚ್.ಪಿ. ಪ್ರವೀಣ್,** ಸ್ಯಾಮ್‌ಸಂಗ್ ಕೆಫೆ, ದಾವಣಗೆರೆ.
- **ಬಿ.ಎಸ್. ಸುರೇಶ್,** ರಾಸ್ತಾ ರೆಸ್ಟೋ ಬಾರ್, ದಾವಣಗೆರೆ.
- **ಡಿ.ಎಂ. ಮಹೇಶ್,** ಎ.ಎಂ. ಬಿಲ್ಡರ್ಸ್, ದಾವಣಗೆರೆ.



JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte